TIGHT BINDING BOOK



K 92.8
K 47G

# ಗಳಗನಾಥ

ಕರ್ನಾಟಕ ವಿದ್ಯಾವರ್ಧಕ ಸಂಘ

ಧಾರವಾಡ

UNIVERSAL LIBRARY
OU_198053
UNIVERSAL LIBRARY

# ಗಳಗನಾಥ

## ಜೀವನ ವಾಙ್ಮಯ ವಿಮರ್ಶೆ

**ಕರ್ನಾಟಕ ವಿದ್ಯಾವರ್ಧಕ ಸಂಘ**

**ಧಾರವಾಡ**

ಬೆಲೆ] ೧೯೪೬ [೧-೮-೦

ಮುದ್ರಕರು
ಶೇ. ಗೋ. ಕುಲಕರ್ಣಿ
ಸಾಧನ ಮುದ್ರಣಾಲಯ, ಧಾರವಾಡ

ಪ್ರಕಾಶಕರು
ಕಾಂತೇಶ ಕಮಲಾಪೂರ
ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡ

ಹಕ್ಕುಗಳೆಲ್ಲ ಕಾದಿರಿಸಲ್ಪಟ್ಟಿವೆ

ಮುಖ್ಯ ಮಾರಾಟಗಾರರು
**ಸಮಾಜ ಪುಸ್ತಕಾಲಯ**
ಗಾಂಧಿ ಚೌಕು, ಧಾರವಾಡ

# ಪ್ರಕಾಶಕರ ಅರಿಕೆ

'ಗಳಗನಾಥ' ಎಂಬ ಚಿಕ್ಕ ಪುಸ್ತಕವನ್ನು ಓದುಗರೆದುರು ಇಡಲು ಸಂತೋಷವಾಗುತ್ತದೆ. ಶ್ರೀ ಗಳಗನಾಥರ ಬಗ್ಗೆ ಇನ್ನೂ ಹೆಚ್ಚಾದ ವಿವರ ಅಭ್ಯಾಸದ ಹೊತ್ತಿಗೆ ಅವಶ್ಯವಾಗಿದೆ. ಅದು ಹೊರಬರುವ ತನಕ ಈ ಚಿಕ್ಕ ಪುಸ್ತಕವು ತಕ್ಕಮಟ್ಟಿಗೆ ತಿಳಿವಳಿಕೆ ಮಾಡಿಕೊಡುವುದರಲ್ಲಿ ಸಂದೇಹವಿಲ್ಲ.

ಈ ಹೊತ್ತಿಗೆಯಲ್ಲಿ ಬರುವ ನಾಲ್ಕು ಪ್ರಬಂಧಗಳು—ಗಳಗನಾಥರ ಕಾಲ, ಜೀವನವೃತ್ತಾಂತ, ಕೃತಿಗಳು, ಕಾಣಿಕೆ— ಇವು ಮೊದಲು ಮುಂಬಯಿ ಸಂಯುಕ್ತಕರ್ನಾಟಕ ಸಂಘದ ನೇತೃತ್ವದಲ್ಲಿ ನಡೆದ ಗಳಗನಾಥರ ಸ್ಮಾರಕೋತ್ಸವದಿನ(೨೨-೪-೧೯೪೫)ದ ನಿಮಿತ್ತ ಬರೆದುವು. ನಮ್ಮ ಸಂಘಕ್ಕಾಗಿ ಅವುಗಳನ್ನು ದೊರಕಿಸಿ ಕೊಟ್ಟುದಕ್ಕೆ ರಂಗಮಂಗ ಪ್ರಕಾಶನದವರಿಗೆ ನಮ್ಮ ಕೃತಜ್ಞತೆಗಳು. ಲೇಖನ ರೂಪದಲ್ಲಿ ಮುನ್ನುಡಿ ಬರೆದ ಶ್ರೀರಂಗರಿಗೂ ನಮ್ಮ ಕೃತಜ್ಞತೆಗಳು.

ಪುಸ್ತಕವನ್ನು ಅಂದವಾಗಿ ಮುದ್ರಿಸಿಕೊಟ್ಟ ಸಾಧನ ಮುದ್ರಣದ ಒಡೆಯರಾದ ಕುಲಕರ್ಣಿ ಶೇಷಗಿರಿರಾಯರಿಗೆ ನಮ್ಮ ವಂದನೆ.

# ಪರಿವಿಡಿ

**ಗಳಗನಾಥರಿಗೆ . . . . . ಕೃಷ್ಣಮೂರ್ತಿ ಪುರಾಣಿಕ**

ವಿಜಯಪುರ ಜಿಲ್ಲೆಯ ಕೆರೂರ ಎಂಬಲ್ಲಿ ಹುಟ್ಟಿದರು. ಧಾರವಾಡ ಕರ್ನಾಟಕ ಕಾಲೇಜದಿಂದ ಬಿ. ಎ. ಆದರು. ಗೋಕಾಕದಲ್ಲಿ ಶಿಕ್ಷಕರಾಗಿರುತ್ತಿರುವಾಗಲೆ ಬಿ. ಟಿ. ಆಗಿ ಅಲ್ಲಿಯೆ ಶಿಕ್ಷಕರಾಗಿ ಕೆಲಸ ಮಾಡುತ್ತಿದ್ದಾರೆ. ಅವರಿಗೆ ಈಗ ಸುಮಾರು ೩೨ ವಯಸ್ಸು.

ಸಣ್ಣಕತೆ, ಹರಟೆ ಏಕಾಂಕ ಬರೆಯುತ್ತಿದ್ದರೂ ಹೆಚ್ಚಾಗಿ ಕವಿತೆಯಕಡೆಗೆ ಒಲವು. ಸರಳರಗಳೆಯಲ್ಲಿಯ ಅವರ ಕೌಶಲ ಅವರಿಗೊಂದು ಸ್ಥಾನ ಕಲ್ಪಿಸಿಕೊಟ್ಟಿದೆ.

**ಮುನ್ನುಡಿ . . . . . . ಆರ್. ವ್ಹಿ. ಜಾಗಿರದಾರ**

ಇವರ ಪೂರ್ಣ ಹೆಸರು. ರಂಗಾಚಾರ್ಯ ವಾಸುದೇವಾಚಾರ್ಯ ಜಾಗಿರದಾರ. ಹುಟ್ಟಿದುದು ೨೬-೯-೧೯೦೪ ರಲ್ಲಿ ವಿಜಯಪುರ ಜಿಲ್ಲೆಯ ಅಗರಖೇಡದಲ್ಲಿ. ಪುಣೆಯ ಡೆಕ್ಕನ್ ಕಾಲೇಜದಿಂದ ಮೊದಲನೆಯ ವರ್ಗದಲ್ಲಿ ಬಿ. ಎ. ಆದರು. ಆಯ್. ಸಿ ಎಸ್. ಕ್ಕೆಂದು ಇಂಗ್ಲಂಡಿಗೆ ತೆರಳಿದರು. ಆಯ್. ಸಿ. ಎಸ್. ಆಗಲಿಲ್ಲ. ಲಂಡನ್ ವಿಶ್ವವಿದ್ಯಾಲಯದ ಎಂ. ಎ. ಪದವಿ ಪಡೆದರು. ಸದ್ಯಕ್ಕೆ ಧಾರವಾಡದ ಕರ್ನಾಟಕ ಕಾಲೇಜದಲ್ಲಿ ಸಂಸ್ಕೃತ ಪ್ರಾಧ್ಯಾಪಕರಿದ್ದಾರೆ. ಕ. ವಿ. ವ. ಸಂಘಕ್ಕೆ, ಕರ್ನಾಟಕ ಏಕೀಕರಣ ಸಂಘಕ್ಕೆ ಕಾರ್ಯಾಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

ಶ್ರೀರಂಗ, ಎಂಬ ಹೆಸರಿನಿಂದ ಸಾಮಾಜಿಕ ನಾಟಕಕಾರರೆಂದು ಪ್ರಸಿದ್ಧಿ ಪಡೆದಿದ್ದಾರೆ. ಏಕಾಂಕ, ಹರಟೆ ಇವುಗಳಲ್ಲಿಯೂ ಕೈಚಳಕವಿದೆ. ಚುಚ್ಚು-ಕೊಂಕುಮಾತಿನ ಶೈಲಿ ಹಾಸ್ಯದ ರೀತಿ ಅವರ ವೈಶಿಷ್ಟ್ಯವಾಗಿವೆ.

***ಗಳಗನಾಥರ ಕಾಲ . . . . . ವಿ. ಎಂ. ಇನಾಮದಾರ**

ಪೂರ್ಣ ಹೆಸರು ವೆಂಕಟೇಶ ಮಧ್ವ ಇನಾಂದಾರ. ಹುಟ್ಟಿದುದು ವಿಜಯಪುರದಲ್ಲಿ ೧೯೧೨ ರಲ್ಲಿ. ಧಾರವಾಡದ ಕರ್ನಾಟಕ ಕಾಲೇಜದಿಂದ ಬಿ. ಎ. ಆಗಿ ನ್ಯಾಯ ಖಾತೆ ಸೇರಿದರು. ಅಭ್ಯಾಸವೃತ್ತಿಯ ಅವರಿಗೆ ಆ ವಾತಾವರಣ ಒಗ್ಗಲಿಲ್ಲ. ತ್ಯಾಗಪತ್ರಕೊಟ್ಟು ಅಭ್ಯಾಸಮಾಡಿ, ಎಂ. ಎ. ಆದರು, ಎಚ್. ಪಿ. ಪರೀಕ್ಷೆಯನ್ನೂ ದಾಟಿದ್ದಾರೆ. ಬರೆಹದ ಸೆಳೆತ ಅವರನ್ನು ಪಿ. ಇ. ಎನ್. ದಲ್ಲಿ ಸೇರಿಸಿತು. ಅಲ್ಲಿ ಉಪಸಂಪಾದಕರಾಗಿ ಕೆಲ ಕಾಲ ಕಳೆದರು. ಸದ್ಯಕ್ಕೆ ಮುಂಬಯಿ ಸಿಡೆನ್‌ಹ್ಯಾಮ ಕಾಲೇಜದಲ್ಲಿ ಇಂಗ್ಲಿಶ್ ಪ್ರಾಧ್ಯಾಪಕ ರಾಗಿದ್ದಾರೆ.

ಉತ್ತಮ ವಿಮರ್ಶಕರೆಂದು ಹೆಸರುಗಳಿಸಿದ್ದಾರೆ.

## †*ಜೀವನವೃತ್ತಾಂತ . . . . ನೆಗಳೂರ ರಂಗನಾಥ

ಪೂರ್ಣ ಹೆಸರು ನೆಗಳೂರ ರಂಗನಾಥ ರಾಮಚಂದ್ರ; ಹುಟ್ಟಿದುದು ಬೆಳಗಾವಿ ಜಿಲ್ಲೆಯ ಚಿಕ್ಕೋಡಿಯಲ್ಲಿ ೩೦–೧–೧೯೧೪. ಕರ್ನಾಟಕ ಕಾಲೇಜದಿಂದ ಬಿ. ಎ. ಆಗಿ, ಎಲ್‌ಎಲ್. ಬಿ. ಗಾಗಿ ಅಲೆದರು. ಮೊದಲ ಎಲ್‌ಎಲ್. ಬಿ. ಆಗಿ ಶಿಕ್ಷಕನಾಗಿ ಸೇರಿಕೊಂಡರು. ಬಿ. ಟಿ. ಆಗಿ ಶಿಕ್ಷಕವೃತ್ತಿ ಬಿಟ್ಟು, ಎಂ. ಎ. ಪದವಿ ಪಡೆದರು.

ಸಾಮಾಜಿಕ ಸಮಸ್ಯೆಗಳನ್ನು ಕುರಿತು ಸಾಕಷ್ಟು ಬರೆದಿದ್ದಾರೆ. ಚರಿತೆ ಬರೆವುದರಲ್ಲಿ ತುಂಬ ಆಸಕ್ತಿ.

## *ಕೃತಿಗಳು . . . . . ಎಚ್. ಎಸ್. ಪಾಟೀಲ

ಪೂರ್ಣ ಹೆಸರು ಹನುಮಂತ ಸುಬ್ಬರಾವ ಪಾಟೀಲ. ಹುಟ್ಟಿದುದು ವಿಜಯಪುರ ಜಿಲ್ಲೆಯ ಹುನಗುಂದದಲ್ಲಿ ೨೫–೫–೧೯೧೪. ಕರ್ನಾಟಕ ಕಾಲೇಜದಿಂದ ಬಿ. ಎ. ಆಗಿ, ಮುಂಬಯಿ ಸೇರಿ, ಎಂ. ಎ., ಮತ್ತು ಬಿ. ಕಾಂ. ಪದವಿ ಪಡೆದರು. ಕೆಲಕಾಲ ಬ್ಯಾಂಕಿನಲ್ಲಿ ಕೆಲಸ ಮಾಡಿದರು. ಈಗ ಮುಂಬಯಿಯ ಸಿಡೆನ್‌ಹ್ಯಾಮ ಕಾಲೇಜದಲ್ಲಿ ಪುಸ್ತಕ ಭಾಂಡಾರಿಗಳಾಗಿದ್ದಾರೆ.

ಹರಟೆ, ಏಕಾಂಕ, ಕಿರುಗತೆ ಬರೆವುದರಲ್ಲಿ ಹೆಚ್ಚು ಕೈಚಳಕ ತೋರಿದ್ದಾರೆ. ಕೆಲಕಾಲ ಕುಟುಂಬ ಮಾಸಪತ್ರಿಕೆಯ ಸಂಪಾದಕರಾಗಿದ್ದರು. ವ್ಯಾಪಾರ ವಿಜ್ಞಾನ ವಿಷಯಗಳ ಬಗ್ಗೆ ಬರೆಯುತ್ತಿರುತ್ತಾರೆ.

## *ಕಾಣಿಕೆ . . . . . . . ಕೃಷ್ಣಕುಮಾರ

ಪುಣೆಯ ಗೋಖಲೆ ಇನ್‌ಸ್ಟಿಟ್ಯೂಟದಲ್ಲಿ ಶಾಂತಿನಿಕೇತನ ಬಡೋದೆಗಳಲ್ಲಿ ಕಲಿತು ಕೆಲಸ ಮಾಡಿ ಈಗ ಮುಂಬಯಿ ಹತ್ತಿರದ ಅಂಧೇರಿಯಲ್ಲಿಯ ಪಾರಕ್ ಔದ್ಯೋಗಿಕ ಶಾಲೆಯ ಮುಖ್ಯಾಧ್ಯಾಪಕರಾಗಿದ್ದಾರೆ.

ಸಣ್ಣಕತೆ, ಏಕಾಂಕಗಳನ್ನು ಬರೆದು ಹೆಸರು ಗಳಿಸಿದ್ದಾರೆ. ಅರ್ಥಶಾಸ್ತ್ರದ ವಿಷಯಗಳ ಬಗ್ಗೆ ಅಭ್ಯಾಸಪೂರ್ಣ ಲೇಖನ ಬರೆಯುತ್ತಿರುತ್ತಾರೆ.

---

* ಈ ಗುರುತು ಇದ್ದ ಪ್ರಬಂಧಗಳನ್ನು ಆಯಾ ಲೇಖಕರು ಮುಂಬಯಿ ಸಂಯುಕ್ತ ಕರ್ನಾಟಕ ಸಂಘದ ವಸಂತೋತ್ಸವ ಗಳಗನಾಥ ದಿನ (೨೨–೪–೪೫) ಕ್ಕಾಗಿ ಬರೆದು ಓದಿದ್ದಾರೆ.

† ಕೆಲಸಂಗತಿಗಳಿಗಾಗಿ ರಾಜಪುರೋಹಿತ, ಅಮ್ಮಿನಭಾವಿ ತಮ್ಮಣರಾಯರು ಇವರಿಗೆ ಲೇಖಕರು ಕೃತಜ್ಞರಾಗಿದ್ದಾರೆ.



ಜನನ
೫-೧-೧೮೭೯

ಮರಣ
೨೨-೪-೪೨

# ಗಳಗನಾಥರಿಗೆ

ಕನ್ನಡದ ನುಡಿವೆಣ್ಣು ಕಬ್ಬದುಡಿಗೆಯ ತೊಟ್ಟು
ಗಂಭೀರ ಗಮನದಲಿ ಪಂಡಿತರ ಕೋಲೂರಿ
ರಾಜವೈಖರಿಯಲ್ಲಿ ಮುಂದ ಹೆಜ್ಜೆಗಳಿಟ್ಟು
ಪಾಮರರ ಕಡೆಗಣಿಸಿ ಆಕಾಶಕುಸುಮಗಳ
ಕಂಪನಾಘ್ರಾಣಿಸುತ ಕಲ್ಪವೃಕ್ಷದ ಹಣ್ಣು
ಸವಿಸೊದೆಯ ಸೊಗಕೆಂದು ಬಾಯಿಚಪ್ಪರಿಸುತ್ತ
ಸಗ್ಗಗಭಿಮುಖವಾಗಿ ಪಯಣ ಹೊರಟಿರುವಾಗ
ಆಕೆಯನೆ ಕೆಣಕಿದಿರಿ ಗಳಗನಾಥರೆ! ನೀವು.

ಉಭಯಭಾಷಾಪ್ರೌಢಸಾಮ್ರಾಜ್ಞಿತಾನಿಂದು
ರನ್ನಪೀಠವ ತೊರೆದು ಸಾಮಾನ್ಯರೆದೆಯಲ್ಲಿ
ಸಲೆ ಮೆರೆದು ನಿಂತಿಹುದ ನಿಚ್ಚಳದಿ ಕಂಡಾಗ
ನಿಮ್ಮ ಸೇವೆಯ ಮರೆದು ಬಾಳುವನೆ ಕನ್ನಡಿಗ?
ನಿಮ್ಮ ಗದ್ಯದ ಶೈಲಿ ಕನ್ನಡದ ಜನಕಿತ್ತು
ದಿವ್ಯಕಾಣಿಕೆಯಾಯ್ತು; ಹೆಸರು ಶಾಸನವಾಯ್ತು.

೧೫-೩-೪೬ —ಕೃಷ್ಣಮೂರ್ತಿ ಪುರಾಣಿಕ

# ಮುನ್ನುಡಿ

ಸದ್ಯದ ಹೊತ್ತಿಗೆಗೆ ಮುನ್ನುಡಿರೂಪದಲ್ಲಿ ನಾಲ್ಕು ಮಾತುಗಳನ್ನು ಬರೆಯಲು ನನಗೆ ಒಂದೇ ಒಂದು ದೃಷ್ಟಿಯಿಂದ ಅಧಿಕಾರ ಸಲ್ಲುತ್ತಿದೆ; ಇಷ್ಟೇ ಅಲ್ಲದೆ, ಬೇರೆ ಯಾವ ದೃಷ್ಟಿಯಿಂದಲೂ ಆ ಅಧಿಕಾರ ಸಲ್ಲುವ ಯೋಗ್ಯತೆ ನನ್ನಲ್ಲಿಲ್ಲ ಎಂದು ನಾನು ಮೊದಲಿಗೆಯೆ ಸ್ಪಷ್ಟವಾಗಿ ಹೇಳ ಬಯಸುತ್ತೇನೆ. ಇಂದಿನ ಕನ್ನಡದ ಇತಿಹಾಸಾತ್ಮಕವಾದ, ವಿಮರ್ಶಾತ್ಮಕ ವಾದ ವಿವೇಚನೆಯನ್ನೊಳಗೊಂಡ ಚರಿತ್ರೆ ಇದು. ಆನುವಂಶಿಕವಾಗಿ ಸಂಸ್ಕೃತವನ್ನೆ ಇಂದಿಗೂ ಅಭ್ಯಸಿಸುತ್ತ, ಆದರಿಸುತ್ತ, ಆ ಅಭ್ಯಾಸವನ್ನು ಉಪಜೀವನ ಸಾಧನವೆಂದೆ ವ್ಯವಹರಿಸುತ್ತ, ಬರಿಯ ಆತ್ಮರಂಜನೆಗಾಗಿ ಕನ್ನಡದಲ್ಲಿ ಸಾಹಿತಿಯೆನ್ನಿಸುತ್ತಿದ್ದ ನನಗೆ ಯೋಗ್ಯತೆಯು ಅಧಿಕಾರ ಬಂದೀತು ಹೇಗೆ? ನನಗೆ ಬಂದ ಅಧಿಕಾರ ಕರ್ನಾಟಕ ವಿದ್ಯಾವರ್ಧಕ ಸಂಘದ ಕೃಪೆಯಿಂದ; ಆ ಹಿರಿಯ ಸಂಸ್ಥೆಯ ಮೊದಲ ಸೇವಕ ನಾನು ಎಂಬುದಕ್ಕಾಗಿ.

ಈ ಗ್ರಂಥವು ಕ. ವಿ. ವ. ಸಂಘದ ಪ್ರಕಟನೆಯಾದುದಲ್ಲಿ ಆಕಸ್ಮಿಕ ಘಟನೆಗಿಂತ ಇತಿಹಾಸದ ಸತ್ಯತೆಯು, ಸೃಷ್ಟಿಯ ಬುನಾದಿಯಾಗಿದ್ದ ಅಪ್ರದೊ ಒಂದು ನ್ಯಾಯತತ್ತ್ವವು ಕಾರಣವಾಗಿದೆ ಎಂದು ಹೇಳಬಹುದೆ? ಬ್ರಿಟಿಶರ ಆಳಿಕೆ ರೂಢವಾದಂತೆ ಕರ್ನಾಟಕವೂ ಕನ್ನಡವೂ ಕ್ರಮೇಣ ಕಣ್ಮರೆಯಾದಂತಿದ್ದಾಗ, ದೇಶಾಭಿಮಾನ-ಭಾಷಾಭಿಮಾನಗಳು ಒಳ ಗಿಂದೊಳಗೆಯೆ ಪ್ರಜ್ವಲಿಸುತ್ತಿದ್ದ ನಾಲ್ಕಾರು ಹೃದಯಗಳು ಒಂದೆಡೆ ನೇರಿ ಆ ಅಭಿಮಾನದೇವತೆಯ ಪುನಃ ಪ್ರತಿಷ್ಠಾಪನೆಯನ್ನು ಮಾಡಲು ಸಿಲ್ಲಿಸಿದ ದೇವಮಂದಿರವೆಂದರೆ ಕರ್ನಾಟಕ ವಿದ್ಯಾವರ್ಧಕ ಸಂಘ. ಈ ಸಂಘವು ಸ್ಥಾಪಿತವಾದಂದಿನಿಂದ, ಸ್ಥಾಪಿತವಾದುದಕ್ಕಾಗಿಯೆ ಇಂದಿನ ಕನ್ನಡ ಸಾಹಿತ್ಯ ತಲೆಎತ್ತಿತು ಎಂದು ಹೇಳಬಹುದಾಗಿದೆ. ಇಂದಿನ ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುವಾಗ ಕ. ವಿ. ವ. ಸಂಘದ ಇತಿಹಾಸವನ್ನು ಅರಿಯುವುದಗತ್ಯವಾಗಿದೆ; ಕ. ವಿ. ವ. ಸಂಘದ ಇತಿಹಾಸವೆ ಇಂದಿನ ಇಡಿಯ ಕನ್ನಡ ಚಳವಳದ ಹಿನ್ನೆಲೆಯಾಗಿದೆ.

ಅರವತ್ತು ವರುಷಗಳ ಹಿಂದಿನ ಕಾಲದಲ್ಲಿ ಕರ್ನಾಟಕದ ಅರಿವು ಇದ್ದಿರಲಿಲ್ಲ, ಕನ್ನಡದ ಶಾಲೆ-ಶಿಕ್ಷಣಗಳಿಲ್ಲದ್ದಕ್ಕೆ ಮನೆಮಾತುಗಳನ್ನುಳಿದರೆ ಕನ್ನಡದ ಸೊಲ್ಲು ಕೇಳಬರುತ್ತಿರಲಿಲ್ಲ. ಇಂಗ್ಲಿಷ ಶಿಕ್ಷಣವು ಕರ್ನಾಟಕದಲ್ಲೂ ಅದೇ ಪ್ರಾರಂಭವಾಗಿದ್ದಿತು, ಆದರೆ ಶಿಕ್ಷಣ ಸಂಸ್ಥೆಗಳು ಕರ್ನಾಟಕದಲ್ಲಿದ್ದಿರಲಿಲ್ಲ. ಹೀಗಾಗಿ ಸುಶಿಕ್ಷಿತರೆನ್ನಿಸಿಕೊಳ್ಳುವವರಲ್ಲಿ ಒಂದು, ಕನ್ನಡಿಗರ ಸಂಖ್ಯೆ ತೀರ ಸಣ್ಣದು; ಇನ್ನೊಂದು, ಕನ್ನಡೇತರ ಭಾಷೆ-ಸಂಸ್ಕೃತಿಗಳ ಅನುಭವ, ಅಭ್ಯಾಸ, ಆದರ ಹೆಚ್ಚು. ಇದಕಾಗಿ ಇನ್ನಿಷ್ಟು ಉತ್ತೇಜನ ಕಡಮೆಯಾಗಿದ್ದಿತು. ಈ ಉತ್ತೇಜನ ಮೊದಲು ಕನ್ನಡಕ್ಕೆ ಯಾವ ಕಾರಣಕ್ಕಾಗಿ ದೊರೆತಿರಬಹುದೆಂಬುದಕ್ಕೆ ನನ್ನದೊಂದು ಊಹೆ ಇದೆ; ತಜ್ಞರ ದೃಷ್ಟಿಯಿಂದ ಅದು ತಪ್ಪಾದುದೆನ್ನಿಸಲಿಕ್ಕಿಲ್ಲ ಎಂಬ ಭರವಸೆಯೂ ನನಗಿದೆ. ಆ ಕಾರಣವೆಂದರೆ ಕ್ರೈಸ್ತ ಧರ್ಮೋಪದೇಶಕರ ಮೊದಲ ಅಭ್ಯಾಸ. ಕಾಲ್ಡವೆಲ್, ಕಿಟೆಲ್, ರೈಸ ಮೊದಲಾದವರು ತಮ್ಮ ಅಭ್ಯಾಸದ ನಿಮಿತ್ತವಾಗಿ ಕನ್ನಡವು ಪ್ರಾಚೀನವಲ್ಲದೆ ವಿಸ್ತಾರವಾದ ಸಾಹಿತ್ಯವೂ ಆಗಿದೆ ಎಂಬುದನ್ನು ಕಂಡು ಪ್ರಕಟಿಸಿದರು. ಪ್ರಕಟವಾದ ಆ ಮಾತು ಕೆಲವರ ಹೃದಯವನ್ನು ಮುಟ್ಟಿತು, ಅಲ್ಲಿ ಹುದುಗಿದ್ದ ಕನ್ನಡದ ಅಭಿಮಾನವನ್ನು ಹೊಡೆದೆಬ್ಬಿಸಿತು.

“ಹಿಂದುಸ್ಥಾನದ ಎಲ್ಲ ಭಾಷೆಗಳಲ್ಲಿ ಕನ್ನಡವು ಹಳೆಯದಿರುತ್ತದೆ. ಕನ್ನಡ ಮಾತಾಡುವ ಜನರ ಸಂಖ್ಯೆಯು ಸುಮಾರು ೧,೧೦,೦೦೦,೦೦ ಇರುತ್ತದೆ. ೬ನೆಯ ಶತಮಾನದಿಂದ ಈ ಭಾಷೆಯಲ್ಲಿ ಎಷ್ಟೋ ಹೆಸರಾದ ಕವಿಗಳು ಆಗಿ ಹೋದರು. ಅವರಿಂದ ದೊಡ್ಡ ದೊಡ್ಡ ಗ್ರಂಥಗಳು ರಚಿಸಲ್ಪಟ್ಟಿವೆ. **ಆದರೂ ಅವುಗಳನ್ನು ಓದಬೇಕೆಂಬ ಲವಲವಿಕೆಯು ಈಗಿನ ಕನ್ನಡಿಗರಲ್ಲಿ ತಕ್ಕಷ್ಟು ಇಲ್ಲ.**” (ದಪ್ಪಕ್ಷರಗಳನ್ನು ನಾವು ಕಾಣಿಸಿದ್ದೇವೆ.) ಮೇಲಿನ ವಾಕ್ಯಗಳು ಧರ್ಮೋಪದೇಶಕರ ಅಭ್ಯಾಸವನ್ನು ಓದಿಕೊಂಡುದರ ನಿದರ್ಶನವಾಗಿವೆ. ಅದಕಾಗಿ ಹೃದಯ ಕೆಣಕಲ್ಪಟ್ಟಿತೆಂಬುವನ್ನು ದಪ್ಪಕ್ಷರದ ವಾಕ್ಯದಿಂದ ತಿಳಿದುಕೊಳ್ಳಬಹುದಾಗಿದೆ. ಈ ಅಯ್ದೂ ವಾಕ್ಯಗಳು ೧೮೯೦ರ ಜುಲೈ ೨೦ರ ಸಾಯಂಕಾಲಕ್ಕೆ ಸೇರಿದ ಸಭೆಯ ವರದಿಯ ಪ್ರಾರಂಭದ ವಾಕ್ಯಗಳಾಗಿವೆ. ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಲು ಕೂಡಿದ ಸಭೆ ಇದು.

ಕರ್ನಾಟಕ ವಿದ್ಯಾವರ್ಧಕ ಸಂಘದ ಇತಿಹಾಸವನ್ನಾಗಲಿ ಪ್ರಚಾರವನ್ನಾಗಲಿ ನಾನಿಲ್ಲಿ ಎತ್ತಬಯಸಿಲ್ಲ. ಆದರೆ ಈ ಹೊತ್ತಿಗೆಯ ಚರಿತ್ರನಾಯಕರು ಬರೆಯಲು ಪ್ರಾರಂಭಿಸಿದ ಕಾಲವೆಂದರೆ ನಮ್ಮ ಕ. ವಿ. ವ. ಸಂಘದ ಆಳಿಕೆಯ ಕಾಲ. ಇಂದಿನ ಕನ್ನಡರಾಜ್ಯದಲ್ಲಿ, ಅದಕಾಗಿ ಗಳಗನಾಥರ ಹಿನ್ನೆಲೆಯಾಗಿ ಕ. ವಿ. ವ. ಸಂಘದ ಇತಿಹಾಸ ಮತ್ತು ಚಟುವಟಿಕೆಗಳಿಗೆ ಸ್ಥಾನವಿದೆ. ಗಳಗನಾಥರು ಸಂಘದ ಪ್ರಭಾವಕ್ಕೆ ಒಳಗಾಗಿ ತಮ್ಮ ಲೇಖನವನ್ನು ಪ್ರಾರಂಭಿಸಿದರೆಂಬುದರಲ್ಲಿ ಎಳ್ಳಷ್ಟು ಸಂದೇಹವಿಲ್ಲ. ತಮ್ಮ ಮೊದಲ ಕಾದಂಬರಿಯಾದ **ಪದ್ಮನಯನಾ** ಎಂಬ ಗ್ರಂಥಕ್ಕೆ ಬರೆದ ಮುನ್ನುಡಿಯನ್ನು ಗಳಗನಾಥರು ಹೀಗೆ ಪ್ರಾರಂಭಿಸಿದ್ದಾರೆ: “ಪ್ರಿಯ ವಾಚಕರೆ, ಪದ್ಧತಿಯಂತೆ ಪ್ರಸ್ತಾವನೆಯ ಸಂಬಂಧದಿಂದ ನಾಲ್ಕು ಮಾತುಗಳನ್ನು ಬರೆಯುವ ಮೊದಲು, ಪಾರಿತೋಷಕದ ಆಶೆಯನ್ನು ತೋರಿಸಿ, ಈ ಕಾದಂಬರಿಯನ್ನು ಬರೆಯಲ್ಹಚ್ಚಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಕಾರವನ್ನೂ ಇದನ್ನು ಬರೆಯುವ ವಿಷಯವಾಗಿ ಯೋಗ್ಯ ಉಪದೇಶ ಮಾಡಿದ ಗುರುವರ್ಯ ರಾವಸಾಹೇಬ ರಾಮಚಂದ್ರರಾವ ದೇಶಪಾಂಡೆಯವರ ಉಪಕಾರವನ್ನೂ ಸ್ಮರಿಸದೆ ಇರೆನು.”

ಪಾರಿತೋಷಕದ ಆಸೆ ಎಂಬುದು ನಿಮಿತ್ತ ಮಾತ್ರ; ಗಳಗನಾಥರಲ್ಲಿ ಸುಪ್ತವಾಗಿದ್ದ ಲೇಖನಸಾಮರ್ಥ್ಯವನ್ನು ಚೇತರಿಸಲು ಕ ವಿ. ವ. ಸಂಘವು ಸ್ಫೂರ್ತಿಯಾಯಿತೆಂಬುದು ನಿರ್ವಿವಾದ. ಇಷ್ಟೇ ಅಲ್ಲ, ಗಳಗನಾಥರ ಅಂದಿನ ಲೇಖನವೆಂದರೆ ಕನ್ನಡ ಪುನರುಜ್ಜೀವನದ ಚಳವಳ ಎಂದು ಹೇಳಬಹುದಾಗಿದೆ. “ಕನ್ನಡ ಭಾಷೆಯನ್ನು ಬೆಳೆಸುವುದಕ್ಕೋಸ್ಕರ” ಕ. ವಿ. ವ. ಸಂಘವು ಸ್ಥಾಪಿತವಾಗಿದ್ದಿತು. ಅದನ್ನೆ ಗಳಗನಾಥರೂ ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಹೇಳಿದ್ದಾರೆ.—‘ಯಾವದೊಂದು ರಾಷ್ಟ್ರದ ಉನ್ನತಿಯೆಂದರೆ, ಆ ರಾಷ್ಟ್ರದ ವ್ಯಕ್ತಿಗಳ ಉನ್ನತಿಯೆಂದು ತಿಳಿಯತಕ್ಕದ್ದು. ವ್ಯಕ್ತಿಗಳ ಉನ್ನತಿಯು ಅವರ ಜ್ಞಾನನೀತಿಗಳನ್ನು ಅವಲಂಬಿಸಿರುತ್ತದೆ. ಮನುಷ್ಯನ ಜ್ಞಾನಾಂಕುರವನ್ನು ವೃದ್ಧಿಗೊಳಿಸುವುದಕ್ಕಾಗಲಿ, ಅವನಲ್ಲಿ ನೀತಿಯನ್ನು ನೆಲೆಗೊಳಿಸುವುದ

ಕ್ಕಾಗಲಿ ಗ್ರಂಥಾವಲೋಕನವು ಅವಶ್ಯವಾದದ್ದು.' ಕನ್ನಡದ ಭಾಷೆ ಬೆಳೆಯುವುದು ಕನ್ನಡದ ರಾಷ್ಟ್ರ ಬೆಳೆದಂತೆ ಎಂದು ಹೇಳುವುದು ಚಳವಳ ಪ್ರಚಾರದ ಜಾಣತನವಲ್ಲವೆ? ಈ ಮಾತಿಗಾಗಿಯೂ ಇಂದಿನ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಗಳಗನಾಥರಿಗೆ ಮೇಲಿನ ಸ್ಥಾನವಿದೆ.

ಗಳಗನಾಥರು ಕನ್ನಡ ಗ್ರಂಥಗಳನ್ನು ಬರೆಯಲು ಪ್ರಾರಂಭಿಸಿದುದರ ಕಾರಣವೇನು? ಕನ್ನಡ ಶಿಕ್ಷಣ, ಕನ್ನಡ ಓದುವವರ ಸಂಖ್ಯೆ, ಕನ್ನಡಕ್ಕಾಗಿ ಅಭಿಮಾನ—ಎಲ್ಲವೂ ತೀರ ಸಣ್ಣ ಪ್ರಮಾಣದಲ್ಲಿರುವಾಗ ಬರಿಯ ಪಾರಿತೋಷಕದ ಆಸೆಗಾಗಿ ಒಂದು ಗ್ರಂಥವನ್ನೆ ಬರೆಯಬಹುದೆ? ನಂಬಲಾಗದು. ತೀರ ವಿಷಮ ಮತ್ತು ನಿರಾಶಾಜನಕ ಪರಿಸ್ಥಿತಿಯಲ್ಲೂ ಅವರಿಂದ ಗ್ರಂಥವನ್ನು ಬರೆಯಿಸಲು, ಭವಭೂತಿ ಹೇಳುವಂತೆ ಯಾವುದೊ ಒಂದು ಪ್ರಬಲವಾದ—ಆಂತರಃ ಕೋಽಪಿ ಹೇತುಃ — ಒಳಸಾಮರ್ಥ್ಯ ವೊಂದಿರಲೇ ಬೇಕು; ಆ ಸಾಮರ್ಥ್ಯಕ್ಕೆ ಪ್ರೇರಕವಾಗುವ ಸಂನಿವೇಶವೂ ಇರಲೇಬೇಕು. ಕ. ವಿ. ವ. ಸಂಘವೆ ಆ ಸಂನಿವೇಶ ಎಂದು ಹೇಳಬಹುದಲ್ಲವೆ? "ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ, ಉದ್ಯೋಗಾತಿಶಯದಿಂದ ಶ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ, ಮನೋರಂಜನವಾಗಿ ನೀತಿಬೋಧವಾಗುವದಕ್ಕೂ ಉತ್ತಮ ಕಾದಂಬರಿಗಳು ಬೇಕೇ ಬೇಕು" ಎಂಬ ಮಾತನ್ನು ಪ್ರಸ್ತಾವನೆಯಲ್ಲಿ ಬರೆದ ಗಳಗನಾಥರು ಕೇವಲ ಕನ್ನಡ ಚಳವಳಕ್ಕಾಗಿಯೆ ಲೇಖನಿಯನ್ನೆತ್ತಿದರೆಂದು ಧೈರ್ಯವಾಗಿ ಹೇಳಬಹುದಲ್ಲವೆ? ಕೊನೆಗೂ ಬರೆದು ಪ್ರಕಟಿಸಿದ ಗ್ರಂಥಗಳಷ್ಟೆ ಎತ್ತರದ ಭಾರವಾದ ಸಾಲವನ್ನು ಗಳಗನಾಥರು ಹೊತ್ತುಕೊಳ್ಳುವಂತೆ ಮಾಡಿ ಕನ್ನಡಿಗರು ಅವರ ನಿಷ್ಕಾಮಕರ್ಮಯೋಗವನ್ನು ಸಫಲಿಸಲು ಸಹಾಯಕರಾದರೆನ್ನಬಹುದೆ! ಕ. ವಿ. ವ. ಸಂಘದ ಧ್ಯೇಯದಿಂದ ಸ್ಫೂರ್ತರಾಗಿ ನಿಸ್ವಾರ್ಥ ಬುದ್ಧಿಯಿಂದ ಕನ್ನಡದ ಬಾವುಟವನ್ನು ಎತ್ತಿದ ಮೊದಲಿಗರು ಗಳಗನಾಥರು. ಆ ಸ್ಫೂರ್ತಿ, ಆ ನಿಸ್ವಾರ್ಥಬುದ್ಧಿ ಅಷ್ಟು ನಿರ್ಮಲವಾಗಿದ್ದುವೆಂದೇ ಗಳಗನಾಥರು ಫಲಾಫಲಗಳನ್ನು ಲೆಕ್ಕಿಸದೆ ಅವಿಶ್ರಾಂತವಾಗಿ ದುಡಿದು 'ವಾಚನಾಭಿರುಚಿಯನ್ನೂ, ಆನಂದವನ್ನೂ, ಉತ್ತಮ ಕಾದಂಬರಿಗಳನ್ನೂ' ಹುಟ್ಟಿಸಿದರು, ಹೆಚ್ಚಿಸಿದರು.

ಈ ಮಾತುಗಳಿಗಾಗಿ ಇಂದಿನ ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಗಳಗನಾಥರಿಗೆ ಮುಖ್ಯ ಸ್ಥಾನವಿದೆಯಲ್ಲದೆ, ಅವರ ಚರಿತ್ರಾಂಶಗಳನ್ನೊಳಗೊಳ್ಳದೆ ಆ ಇತಿಹಾಸವು ಪೂರ್ತಿಯಾಗುವದಿಲ್ಲ ಎಂದು ಹೇಳಬಹುದು. ಸದ್ಯದ ಹೊತ್ತಿಗೆಯಲ್ಲಿಯ ಪ್ರಬಂಧಗಳು ಆ ಚರಿತ್ರಾಂಶಗಳನ್ನು ಇತಿಹಾಸದ ವ್ಯಾಪಕದೃಷ್ಟಿಯಿಂದಲೆ ಕಾಣಿಸಿವೆ. ಗಳಗನಾಥರ ಕಾಲ, ಜೀವನ, ಕೃತಿಗಳು— ಈ ಮೂರನ್ನೂ ಅಭ್ಯಾಸಯುಕ್ತವಾಗಿ ಕಾಣಿಸಿದ್ದಾರೆ ಆ ಲೇಖಕರು. ಆ ಬಗ್ಗೆ ಹೆಚ್ಚಿಗೆ ಬರೆಯುವ ಯೋಗ್ಯತೆ (ಒಂದು ಕಾಲದಲ್ಲಿ ಈ ಮೂರು ಲೇಖಕರಿಗೆ ಗುರುವಾಗಿದ್ದರೂ) ನನಗಿಲ್ಲ. ಅದರಂತೆ ಗೆಳೆಯರಾದ ಶ್ರೀ. ಕೃಷ್ಣಕುಮಾರರು ಗಳಗನಾಥರ ಇಡಿಯ ಸಾಹಿತ್ಯ ಜೀವನವನ್ನು ಇಂದಿನ ಕನ್ನಡ ಸಾಹಿತ್ಯಸೃಷ್ಟಿಯ ಹಿನ್ನೆಲೆಯಲ್ಲಿ ವಿಮರ್ಶಿಸಿ ನೋಡಿದ್ದಾರೆ. ಈ ರೀತಿಯಿಂದ ಪ್ರಬಂಧಗಳು ಇಂದಿನ ಕನ್ನಡ ಸಾಹಿತ್ಯದ ಅಭ್ಯಾಸಿಗರಿಗೆ ಮಹತ್ತ್ವದ್ದಾಗಿವೆ. ಆದರೆ ಇಂತಹ ನಿಮಿತ್ತೋಪಾತ್ತ ಪ್ರಬಂಧಗಳಲ್ಲಿ ವಿಷಯದ ವಿವೇಚನೆಯು ಪೂರ್ತಿಯಾಗುವದು ಶಕ್ಯವಿಲ್ಲ, ಆ ಲೇಖಕರೂ ಹಾಗೆ ತಿಳಿದುಕೊಂಡಿಲ್ಲ. ಇದೊಂದು ನನಗೆ ಸುಸಂಧಿ (ಬಿಟ್ಟ ವಿಷಯಗಳನ್ನು ಬರೆಯುವುದಾದರೆ) ಇಲ್ಲವೆ ದುರ್ದೈವ (ಯೋಗ್ಯತೆ ಇಲ್ಲವೆನ್ನಿಸಿದರೂ ಬರೆಯಲೇಬೇಕಾದುದಕ್ಕೆ).

ಅರವತ್ತು ವರುಷಗಳ ಹಿಂದಿನ ಕನ್ನಡ ಚಳವಳವು ಮುಖ್ಯವಾಗಿ ಇಂಗ್ಲಿಶ ಶಿಕ್ಷಣದ ನಿಮಿತ್ತವಾಗಿ, ಸ್ಥಾನಿಕವಾಗಿ ಮಿಶನರಿಗಳ ಅಭ್ಯಾಸದ ಮೂಲಕವಾಗಿ ಪ್ರಾರಂಭವಾಯಿತೆಂದು ಹೇಳಿದೆಯಷ್ಟೆ? ಕನ್ನಡದ ಬಗ್ಗೆ ಅಭಿರುಚಿಯಂತೆ ಅಭಿಮಾನವನ್ನು ಹುಟ್ಟಿಸುವುದೂ ಈ ಚಳವಳದ ಗುರಿಗಳಲ್ಲಿ ಒಂದಾಗಿದ್ದಿತು. ಗಳಗನಾಥರ ಹೃದಯದಲ್ಲಿ ಅಭಿಮಾನವೂ ಕೆರಳಿತೆಂಬುದು ಅವರ ಅದೇ ಪ್ರಸ್ತಾವನೆಯಲ್ಲಿಯ ಒಂದು ವಾಕ್ಯದಿಂದ ಸ್ಪಷ್ಟವಾಗುವದು. ಆ ವಾಕ್ಯವು ಹೀಗಿದೆ:—'(ಪದ್ಮನಯನಾ) ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು, ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯಕಾದಂಬರಿಗಳ ಸಹಾಯದಿಂದ

ಬರೆಯಲ್ಪಟ್ಟಿವೆ; ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರದು.'

ಆಧುನಿಕ ಕನ್ನಡ ಸಾಹಿತ್ಯದ ಇತಿಹಾಸವನ್ನು ಬರೆಯುವವರು ಮೇಲಿನ ಮಾತಿನ ಮಹತ್ತ್ವವನ್ನು ಸೂಕ್ಷ್ಮವಾಗಿ ಅರಿತುಕೊಳ್ಳುವುದಗತ್ಯವಾಗಿದೆ. ಇಂದಿನ ಕನ್ನಡವು ಸರ್ವಸಾಮಾನ್ಯವಾಗಿ ಭಾಷಾಂತರಗಳ ಮತ್ತು ಅನುವಾದಗಳ ರೂಪದಿಂದಲೆ ಪ್ರಾರಂಭವಾಯಿತು. ನಿಜ. ಆದರೆ 'ಎಂಜಲ'ದ ಆಸೆ, ಅಪೇಕ್ಷೆ, ಅಗತ್ಯ ಎಳ್ಳಷ್ಟೂ ಇದ್ದಿರಲಿಲ್ಲ ಮುಖ್ಯವಾದ ಮಾತು ಇದು; ಅನ್ಯಭಾಷೆಯ ಮೋಹದಿಂದ ಆ ಭಾಷೆಯ ಗ್ರಂಥವನ್ನು ಅನುವಾದಿಸುವ ಉದ್ದೇಶವು ಇರಲಿಲ್ಲ. ತನ್ನ ಭಾಷೆಯಲ್ಲಿ ಬರೆಯಬೇಕೆಂಬ ಕಳಕಳಿಯೆ ಈ ಬರೆಹಗಳಿಗೆ ಮುಖ್ಯ ಪ್ರೇರಣೆ. ಈ ಕಾರಣಕ್ಕಾಗಿಯೆ ಕನ್ನಡವು ಅನುವಾದಗಳ ಸಾಹಿತ್ಯವಾಗದೆ ಸ್ವಲ್ಪಾವಧಿಯಲ್ಲಿಯೆ ಸ್ವತಂತ್ರ ಸಾಹಿತ್ಯವನ್ನು ನಿರ್ಮಿಸಲು ಶಕ್ತವಾಯಿತು. ಎಂದರೆ ಗಳಗನಾಥರ ಕಾಲದಲ್ಲಿ, ಗಳಗನಾಥರ ಮನೋವೃತ್ತಿಯಲ್ಲಿ, ಗಳಗನಾಥರ ಸಾಹಿತ್ಯಸ್ಫೂರ್ತಿಯಲ್ಲಿ ಸ್ವತಂತ್ರಸಾಹಿತ್ಯ ನಿರ್ಮಾಣದ ಬೀಜವು ಹುದುಗಿಕೊಂಡಿದೆ. ಈ ದೃಷ್ಟಿಯಿಂದ ಮುಂದಿನ ಸ್ವತಂತ್ರಸಾಹಿತ್ಯಕ್ಕೆ ಗಳಗನಾಥರು ಕಾರಣರಾಗದಿದ್ದರೂ ಪ್ರೇರಕರಾದರೆಂದು ನಿರ್ವಿವಾದವಾಗಿ ಹೇಳಬಹುದು. ಅದರಂತೆಯೆ ಹೊಸಗನ್ನಡದ ಚೈತನ್ಯವು ಗಳಗನಾಥರ ಕಾಲದಲ್ಲಿಯೆ ಸ್ಫುರಿಸುತ್ತಿತ್ತು ಎಂದೂ ಹೇಳಬಹುದು.

ಗಳಗನಾಥರು ಪ್ರಾಥಮಿಕ ಶಾಲಾಶಿಕ್ಷಕರು ಎಂಬುದೂ ಆ ಕಾಲದ ಒಂದು ವಿಚಿತ್ರ, ಮನೋರಂಜಕ ಪರಿಸ್ಥಿತಿಯನ್ನು ಸೂಚಿಸುತ್ತಿದೆ. ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಸ್ಥಾಪಿಸಿದವರು ಹೆಚ್ಚಾಗಿ ಪದವೀಧರರು. ಪ್ರೌಢ ಎಂದರೆ ಆಂಗ್ಲಶಿಕ್ಷಣವನ್ನು ಪಡೆದವರು. ಅನ್ಯಸಾಹಿತ್ಯಗಳ ಅಭ್ಯಾಸದಿಂದ, ಮಿಶನರಿಗಳ ಪ್ರಕಟನೆಗಳಿಂದ ಕನ್ನಡದ ಬಗ್ಗೆ ಅಭಿಮಾನ ಜಾಗೃತವಾದುದು ಇವರಲ್ಲಿ. ಆ ಅಭಿಮಾನಕ್ಕೆ ಒಂದು ಸಾಂಘಿಕ, ಸಾರ್ವಜನಿಕ ಚಳವಳದ ರೂಪವನ್ನು ಕೊಡಬೇಕೆನ್ನುವವರೂ ಇವರೆ. ಆದರೆ ಆಗಿನ ಶಿಕ್ಷಣದ ಪದ್ಧತಿಯನ್ನಾಗಲಿ, ವಾಗ್ಭೂಷಣ ಪತ್ರಿಕೆಯ ಹಳೆಯ ಸಂಚಿಕೆಗಳನ್ನಾಗಲಿ ನಾವು ಓದಿ ನೋಡಿದರೆ

ಪ್ರೌಢ ಶಿಕ್ಷಣದ ಈ 'ಪುಢಾರಿ'ಗಳ ಒಂದು ತೊಡಕು ನಮಗೆ ಸ್ಪಷ್ಟವಾಗಿ ಹೊಳೆಯುವುದು, ಪ್ರತ್ಯಕ್ಷವಾಗಿ ತಿಳಿದು ಬರುವುದು. ಈ ಪ್ರೌಢ ಶಿಕ್ಷಣ ಪಂಡಿತರಿಗೆ ತಮ್ಮ ಅಭಿಮಾನವನ್ನು ಪರಿಣಾಮಕಾರಕವಾಗುವಂತೆ ಕೃತಿಯಲ್ಲಿಳಿಸಲು ಸುಲಭವಿದ್ದಿರಲಿಲ್ಲ. ಒಂದು, ಕನ್ನಡದ ಅಭ್ಯಾಸವು ನಾಕಷ್ಟಿರಲಿಲ್ಲ; ಇನ್ನೊಂದು, ಕನ್ನಡದಲ್ಲಿ ಗ್ರಂಥಗಳನ್ನು ಬರೆಯ ಬೇಕೆಂದರೆ ಹರ್ಬರ್ಟ್ ಸ್ಪೆನ್ಸರ್, ಬರ್ಕ್, ಜಾನ್ ಸ್ಟುಅರ್ಟ ಮಿಲ್— ಇಂತಹ 'ಘನ'ವಿದ್ವಾಂಸರ ಗ್ರಂಥಗಳೆ ಅವರ ಬುದ್ಧಿಗೆ ತೋರುವುವು. ಗಹನ' ವಿಷಯಗಳಿಗೆ 'ಘನ' ವಿಷಯಗಳೆಂದು ಹೆದರುವ ಸಾಮಾನ್ಯ ವಾಚಕರಿಗೆ ವಿಷಯದಷ್ಟೆ ವಾಕ್ಯವೂ ಘನವಾಗಿ ಕನ್ನಡದ ಅಭಿಮಾನ ಕುಗ್ಗುವ ಸಂದರ್ಭ ಒದಗಬಹುದು.

ಈ ಮಾತಿಗಾಗಿ ಗಳಗನಾಥರು ಪ್ರಾಥಮಿಕ ಶಾಲಾಶಿಕ್ಷಕರಾದದ್ದು ಒಂದು ದೃಷ್ಟಿಯಿಂದ ಸುದೈವ ಎನ್ನಬಹುದು "ಶಾಸ್ತ್ರೀಯ ವಿಷಯಗಳಂಥ ಗಹನ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯ ವಾದದ್ದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರ ಓದುವ ಲವಲವಿಕೆಯು ನಷ್ಟವಾಗುವ ಸಂಭವವುಂಟು" ಎಂದು ಗಳಗನಾಥರು ತಮ್ಮ ಮೊದಲ ಪ್ರಸ್ತಾವನೆಯಲ್ಲಿ ಹೇಳಿದ್ದು ಮಹತ್ತ್ವದ ಮಾತಾಗಿದೆ. ಸಾಮಾನ್ಯರ ಸಂಪರ್ಕವನ್ನಿಟ್ಟುಕೊಂಡ ಶಾಲಾಶಿಕ್ಷಕನು ಸಾಮಾನ್ಯರಿಗೆ ತಿಳಿಯುವಂತೆ ಬರೆಯಬಲ್ಲನು, ವಿವರಿಸಬಲ್ಲನು. ಗಳಗನಾಥರಲ್ಲಿ ಆ ಲೇಖನಸರಳತೆ ಇದ್ದಿತೆಂದೇ ಸದ್ಬೋಧಚಂದ್ರಿಕೆಯ ದಾರಿಯನ್ನು ಕಾಯುತ್ತ, ಅಂಚೆಯವನನ್ನು ಕೇಳುತ್ತ ವಿದ್ಯಾರ್ಥಿಯಾಗಿ ದ್ದಾಗ ನನ್ನಂತೆಯೆ ಸಾವಿರಾರು ಸಾಮಾನ್ಯ ಕನ್ನಡಿಗರು ವಾಚನಾಭಿರುಚಿ ಯನ್ನು ಹೆಚ್ಚಿಸಿಕೊಂಡರು. ಶಾಲಾಶಿಕ್ಷಕನು, ಅನ್ಯ ಭಾಷೆಗಳನ್ನರಿಯ ದವನು, ಸಂಕುಚಿತವೃತ್ತಿಯವನಾಗಲಿಕ್ಕಿಲ್ಲವೆ ಎಂದು ಕೆಲವರು ಗಳಗನಾಥರ ವೃತ್ತಿಯ ಲೋಪವನ್ನೆಣಿಸಬಹುದು. ಅದು ತಪ್ಪು ಎಂದು ನನ್ನ ಅಭಿಪ್ರಾಯ. ಸಾಹಿತಿಯಿಂದ ನಾವು ಅಪೇಕ್ಷಿಸುವುದು ಸ್ವರಾಜ್ಯದ, ಸಮಾಜಸುಧಾರಣೆಯ ಪ್ರಚಾರವಲ್ಲ. ಅಂತಹ ಆಧುನಿಕ ಪ್ರಚಾರವೆ ಗಮ್ಯವಿದ್ದಲ್ಲಿ ಪ್ರಾಥಮಿಕ ಶಾಲಾಶಿಕ್ಷಕನು ಯೋಗ್ಯನೆನ್ನಿಸಲಿಕ್ಕಿಲ್ಲ.

ಆದರೆ ನಿಜವಾದ ಸಾಹಿತ್ಯದಲ್ಲಿ ವಿಚಾರಗಳ ಪ್ರಚಾರಕ್ಕಿಂತ ಭಾವನೆಯನ್ನು ಕೆರಳಿಸುವುದು, ಅರಳಿಸುವುದು ಮುಖ್ಯವಾಗಿದೆ. ಆ ದೃಷ್ಟಿಯಿಂದ ಓದುಗರಲ್ಲಿ ವಿಶಾಲಹೃದಯವನ್ನೂ ಸ್ವಾಭಿಮಾನ–ಸ್ವದೇಶಾಭಿಮಾನಗಳನ್ನೂ ಕೆರಳಿಸಿದ ಶಕ್ತಿ ಮತ್ತು ಶ್ರೇಯಸ್ಸು ಗಳಗನಾಥರಿಗಿದೆ ಎಂದು ಯಾವ ಸಹೃದಯ ಕನ್ನಡಾಭಿಮಾನಿಯು ಒಪ್ಪಲಿಕ್ಕಿಲ್ಲ?

ಮುನ್ನುಡಿಯೂ ಒಂದು ಪ್ರಬಂಧವಾಗಬೇಕೆಂದು ನಾನು ಎಣಿಸಿಲ್ಲ. ಆದರೆ ಇಂದಿನ ಕನ್ನಡ ಸಾಹಿತ್ಯದ ಇತಿಹಾಸವನ್ನು ಯಾವ ದೃಷ್ಟಿಯಿಂದ ಬರೆಯಬಹುದೆಂಬುದನ್ನು ಶ್ರೀಯುತರಾದ ಇನಾಂದಾರ, ನೆರಂಗ, ಪಾಟೀಲ ಮತ್ತು ಕೃಷ್ಣಕುಮಾರರು ಈ ಹೊತ್ತಿಗೆಯಲ್ಲಿ ಸೂಚಿಸಿದ್ದಾರೆ, ತೋರಿಸಿಕೊಟ್ಟಿದ್ದಾರೆ: ಅವರ ಆ ಕಾರ್ಯ ಉಪಯುಕ್ತವಾದಷ್ಟೆ ಮಹತ್ತ್ವದ್ದೂ ಆಗಿದೆ ಎಂದೆನ್ನಿಸಿ, ಅದನ್ನೆ ಅನ್ಯರಿಗೂ ಹೇಳಬಯಸಿ ನಾನು ವಿಚಾರಗಳನ್ನು ಆಯ್ದುಕೊಂಡು ಹೆಣೆದಿದ್ದೇನೆ. ಅವರಂತೆಯೆ ೧೮೯೦ರಿಂದ ಕಾರ್ಯರಂಗದಲ್ಲಿ ತೊಡಗಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಚರಿತ್ರೆ ಮತ್ತು ಪ್ರಕಟನೆಗಳೂ ಇಂದಿನ ಸಾಹಿತ್ಯದ ಇತಿಹಾಸಕ್ಕೆ ಎಷ್ಟು ಸಹಾಯಕವಾಗಬಲ್ಲವು ಎಂಬುದನ್ನೂ ಇಲ್ಲಿ ಹೇಳಬಯಸಿದ್ದೇನೆ. ಕ. ವಿ. ವ. ಸಂಘದ ಇತಿಹಾಸವನ್ನೂ ಪ್ರಕಟನೆಗಳನ್ನೂ ಅಭ್ಯಸಿಸಲು, ಇಂದಿನ ಸಾಹಿತ್ಯದ ವಿಮರ್ಶಾತ್ಮಕ ಚರಿತ್ರೆಯನ್ನು ಬರೆಯಲು 'ಗಳಗನಾಥ'ವು ಸ್ಫೂರ್ತಿಯಾದರೆ ಲೇಖಕರಿಗೆ ಸಮಾಧಾನವಾಗುವುದರಲ್ಲಿ ಸಂದೇಹವಿಲ್ಲ. ನನ್ನ ವಿಷಯವಾಗಿ ಹೇಳುವುದಾದರೆ ಅತೃಪ್ತ ಆಸೆಬುರುಕ ನಾನು. ಇಂತಹ ನೂರಾರು ಗ್ರಂಥಗಳು ಪ್ರಕಟವಾದಾಗ ನನಗೆ ಸಮಾಧಾನವಾಗಬಹುದೇನೊ! ಇದೀಗ ನಾನು ಬರೆದುದೆಲ್ಲ ವೈಯಕ್ತಿಕ ವಿಚಾರಗಳನ್ನು, ಕ. ವಿ. ವ. ಸಂಘದ ಪತಿಯಿಂದಲ್ಲ. ರುಜು ಮಾತ್ರ

ಕ. ವಿ. ವ. ಸಂಘ
ಚಾಮರಾಜ ಮಂದಿರ
೧೬—೩—೧೯೪೬

**ಆರ್. ವ್ಹಿ. ಜಾಗಿರದಾರ**
ಕಾರ್ಯಾಧ್ಯಕ್ಷ
ಕರ್ನಾಟಕ ವಿದ್ಯಾವರ್ಧಕ ಸಂಘ

# ಗಳಗನಾಥರ ಕಾಲ

ಒಂದು ಸಾಹಿತ್ಯದ ಇತಿಹಾಸವನ್ನು ಬರೆಯುವಾಗ ನಿರ್ದಿಷ್ಟವಾದ ಕೆಲವು ಕಾಲಾವಧಿಗಳನ್ನು ಕಲ್ಪಿಸಿಕೊಳ್ಳುವುದು ಸಾಮಾನ್ಯವಾಗಿ ವಿಮರ್ಶೆಯ ಒಂದು ರೂಢಿಯಾಗಿದೆ. ಇದು ಒಂದು ಅನುಕೂಲಕ್ಕಾಗಿ ಮಾತ್ರ. ಅದರಲ್ಲಿಯೂ ಒಂದು ನಿಯಮಿತವಾದ ಕಾಲಾವಧಿಯನ್ನು ನಿರ್ದೇಶಿಸಿದಾಗ ಆ ಕಾಲಾವಧಿಯ ವಿಷಯದಲ್ಲಿ ಮಾಡಿದ ವಿಮರ್ಶಾತ್ಮಕ ಪ್ರತಿಪಾದನೆಗಳು ಕೆಲವಾರು ವರ್ಷಗಳ ಹಿಂದಿನ ಕಾಲಕ್ಕೂ ಕೆಲವಾರು ವರ್ಷಗಳ ಮುಂದಿನ ಕಾಲಕ್ಕೂ ಅನ್ವಯಿಸುವುದು ಅನಿವಾರ್ಯವಾದದ್ದು. ಹೊಸಗನ್ನಡ ಸಾಹಿತ್ಯದಲ್ಲಿ ಹೊಸ ತೆರದ ಜೀವನಾವೇಶವೊಂದು ೧೯೨೦ರಲ್ಲಿ ಸೇರಿ ಬಂದದ್ದು ಕಾಣಬಹುದೆಂದು ಹೇಳಿದಾಗ ಆ ವರ್ಷದ ಜನವರಿ ತಿಂಗಳ ಮೊದಲನೆಯ ದಿನಾಂಕದ ಹಿಂದಿನ ಬರವಣಿಗೆಯಲ್ಲಿ ಈ ಹೊಸ ಆವೇಶವನ್ನು ಕಾಣುವುದು ಸಾಧ್ಯವಿಲ್ಲವೆಂದು ಹೇಳಲಾದೀತೆ? ಆದುದರಿಂದ ಒಂದು ಸಾಹಿತ್ಯದ ಅವ್ಯಾಹತವಾದ ಚರಿತ್ರೆಯಲ್ಲಿ ಯಾವುದಾದರೊಂದು ಕಾಲಾವಧಿಯನ್ನು ಸೂಕ್ಷ್ಮವಾದ ಅವಲೋಕನೆಯ ಅನುಕೂಲಕ್ಕಾಗಿ ಕಲ್ಪಿಸಿಕೊಂಡಾಗ ಆ ಅವಧಿಯು ನಿಕೃಷ್ಟವಾಗಿ ಅಲ್ಲಿ ಹೇಳಿರಬಹುದಾದ ತಿಥಿವಾರಗಳಿಗೆ ಸರಿಹೋಗಬೇಕಾಗಿಲ್ಲ. ಅಲ್ಲಿ ಹೇಳಿದ ಅವಧಿ ಸ್ಥೂಲವಾಗಿಯೇ ನಿರ್ದೇಶಿಸಲ್ಪಟ್ಟಿದ್ದೆಂಬುದನ್ನು ನಾವು ಯಾವಾಗಲೂ ಗಮನಿಸಬೇಕಾಗುವುದು. ಅದರಂತೆ "ಗಳಗನಾಥರ ಕಾಲ" ಎಂದು ಬರೆವಾಗ ತಿಥಿವಾರಗಳಿಗೆ ಸರಿಹೋಗಬಹುದಾದ ಯಾವ ಕಾಲಾವಕಾಶವನ್ನೂ ನಾನು ಇಟ್ಟುಕೊಂಡಿಲ್ಲ. ಹಾಗೆ ಇಟ್ಟುಕೊಳ್ಳುವುದು ಸಾಧ್ಯವೂ ಇಲ್ಲ. ಹೆಚ್ಚುಕಡಿಮೆ ಶ್ರೀ. ಗಳಗನಾಥರು ತಮ್ಮ ಲೇಖನವನ್ನು ಪೂರೈಸಿದ ಮೂರು ದಶಕಗಳಲ್ಲಿ ಕರ್ನಾಟಕದ ಈ (ಉತ್ತರ) ಭಾಗದಲ್ಲಿ ಸಾಹಿತ್ಯಪ್ರಪಂಚವು ಯಾವ ದೆಸೆಯಲ್ಲಿತ್ತು, ಆಗಣ ಪರಿಸ್ಥಿತಿಗತಿಗಳು ಗಳಗನಾಥರ ಬರೆವಣಿಗೆಯ ಮೇಲೆ ಯಾವ ತೆರದ ಪರಿಣಾಮವನ್ನುಂಟುಮಾಡಿರಬಹುದು ಮತ್ತು ಗಳಗನಾಥರು ತಮ್ಮ

ಬರೆವಣಿಗೆಯು ವಿಸ್ತಾರದಿಂದ ಮತ್ತು ಶಕ್ತಿಯಿಂದ ಆ ಪರಿಸ್ಥಿತಿಗತಿಗಳನ್ನು ಎಷ್ಟರಮಟ್ಟಿಗೆ ಬದಲಾಯಿಸಿವರು ಇವೇ ಮೊದಲಾದ ಮುಖ್ಯ ವಿಚಾರಗಳನ್ನು ನಾವು ಇಲ್ಲಿ ಮುಖ್ಯವಾಗಿ ಮಾಡಬೇಕಾಗಿದೆ. ಆ ವಿಚಾರಗಳ ಮಂಡನೆಗಾಗಿ ಒಂದು ಸಾಮಾನ್ಯವಾದ ಕಾಲಾವಧಿಯ ಚೌಕಟ್ಟು ಅತ್ಯವಶ್ಯವಾದದ್ದು. ಈ ಕಾಲಾವಧಿಯ ಚೌಕಟ್ಟಿಗೇ ಗಳಗನಾಥರ ಕಾಲ ಎಂಬ ಸಾಧಾರಣವಾದ ಹೆಸರನ್ನು ಇಟ್ಟುಕೊಂಡಿದ್ದೇನೆ.

ಇನ್ನೊಂದು ದೃಷ್ಟಿಯಿಂದ ನೋಡಿದರೆ ಶ್ರೀ ಗಳಗನಾಥರು ತಮ್ಮ ಮೊಟ್ಟ ಮೊದಲನೆಯ ಕೃತಿಯನ್ನು ಆರಂಭಿಸಿದಂದಿನಿಂದ ಮೊದಲು ಮಾಡಿ ಅವರು ತಮ್ಮ ಲೆಕ್ಕಣಿಕೆಯನ್ನು ಕೊನೆಯಾಗಿ ಕೆಳಗಿಟ್ಟ ದಿವಸದ ವರೆಗೂ ಈ ಕಾಲಾವಧಿಯ ವಿಸ್ತಾರ ಎಂಬುದು ಶಾಸ್ತ್ರೀಯ ದೃಷ್ಟಿಯಿಂದೇನೋ ನಿಜ. ಆದರೆ ಈ ಸ್ಪಷ್ಟವಾದ ಕಾಲಾವಕಾಶವನ್ನು ಇಷ್ಟೊಂದು ಸೂಕ್ಷ್ಮವಾಗಿ ಗೊತ್ತುಪಡಿಸುವುದು ವ್ಯರ್ಥ ಶ್ರಮವಲ್ಲದೆ ಸಾಹಿತ್ಯದ ಇತಿಹಾಸ ವಿಮರ್ಶೆಯ ದೃಷ್ಟಿಯಿಂದಲೂ ಯಾವ ಫಲಕಾರಿಯಾದ ಉದ್ದೇಶವನ್ನೂ ಸಾಧಿಸಲಾರದಂತಹದು. ಶ್ರೀ. ಗಳಗನಾಥರು ತಮ್ಮ ಮಹಾಕೃತಿಯಾದ 'ಮಾಧವಕರುಣಾವಿಲಾಸ'ದ ಪ್ರಸ್ತಾವನೆಯಲ್ಲಿ ತಮ್ಮ ಲೇಖನ ವ್ಯವಸಾಯ ಅಖಂಡವಾಗಿ ಹದಿನೆಂಟು ವರ್ಷಗಳ ಕಾಲ ನಡೆದಂತೆಯೂ, ಆ ಅವಧಿಯಲ್ಲಿ "ಇಷ್ಟು ಗೌರವದ ಹಾಗು ಇಷ್ಟು ದೊಡ್ಡದಾದ ಸ್ವತಂತ್ರ ವಿಚಾರದ ಪುಸ್ತಕವನ್ನು" ತಾವು ಬರೆಯಲಿಲ್ಲವೆಂಬುದನ್ನೂ ತಿಳಿಸಿದ್ದಾರೆ. 'ಮಾಧವಕರುಣಾವಿಲಾಸ'ವು ಪ್ರಕಟವಾದದ್ದು ೧೯೨೩ ಕೊನೆಯಲ್ಲಾದರೂ ಅದರ ದೀರ್ಘವಾದ ಬರೆವಣಿಗೆ ಆ ಮೊದಲಿನ ನಾಲ್ಕಾರು ವರ್ಷಗಳನ್ನಾದರೂ ಸಹಜವಾಗಿಯೇ ವ್ಯಾಪಿಸಿಕೊಂಡಿರಬೇಕೆಂಬುದಾದರೂ ಅಲ್ಲಿಯ ಪ್ರಸ್ತಾವನೆಯ ಮೇಲಿಂದಲೇ ತಿಳಿಯುವಂತಿದೆ. ಇದಲ್ಲದೆ ಶ್ರೀ ಗಳಗನಾಥರ ಮೊಟ್ಟಮೊದಲನೆಯ ಅನುವಾದಿತ ಕೃತಿ (ಪ್ರಬುದ್ಧ ಪದ್ಮನಯನೆ) ೧೮೯೮ರಲ್ಲಿ ಪ್ರಕಟವಾಯಿತೆಂದು ತಿಳಿದುಬರುತ್ತದೆ. ಅದು ಹೇಗಿದ್ದರೂ ೧೯೦೦ ರಲ್ಲಿ ಆಗಲೇ ಗಳಗನಾಥರು ಅನುವಾದಿತ ಕಾದಂಬರಿಗಳ ಮೂಲಕ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ನಿರ್ವಿವಾದವಾಗಿ ಕಾಲಿಟ್ಟಿದ್ದರಲ್ಲದೆ ತಾವು ಸಲ್ಲಿಸಬೇಕಾಗಿದ್ದ

ಸೇವೆಯ ವಿಚಾರದಲ್ಲಿ ಓದುಗರ ವಿಶ್ವಾಸವನ್ನು ಗಳಿಸಿದ್ದರೆಂಬುದು ಅವರ ಮೊದಮೊದಲಿನ ಕೃತಿಗಳ ಮೂಲ ಪ್ರಸ್ತಾವನೆಗಳ ಮೇಲಿಂದ ಊಹಿಸಬಹುದಾಗಿದೆ. ಅದರಂತೆ 'ಮಾಧವಕರುಣಾವಿಲಾಸ'ವು ೧೯೨೩ ರಲ್ಲಿ ಪ್ರಕಟವಾದನಂತರ ಆ ಮಹಾಕೃತಿಯಷ್ಟು ಗಮನಾರ್ಹವಾದ ಯಾವ ಕೃತಿಯೂ ಗಳಗನಾಥರಿಂದ ಆ ನಂತರ ಬರಲಿಲ್ಲವಾದ್ದರಿಂದ ಗಳಗನಾಥರ ಕಾಲವೆಂದರೆ ಹೆಚ್ಚುಕಡಿಮೆ ೧೯೦೦ರಿಂದ ೧೯೨೫ರ ವರೆಗಿನ ಕಾಲ ಎಂದು ಸ್ಥೂಲವಾಗಿ ಇಟ್ಟುಕೊಳ್ಳಬಹುದು. ೧೯೨೫ ರಿಂದ ೧೯೪೩ ರಲ್ಲಿ ತಮ್ಮ ದೇಹಾಂತದ ವರೆಗೂ ಅವರು ಏನಾದರೊಂದು ಲೇಖನವನ್ನು ನಡೆಸಿದ್ದರೂ ಕೂಡ, ನಿರ್ವಿವಾದವಾಗಿ ಅವರ ಉತ್ತಮ ಕೃತಿಯಾದ ಮಾಧವ ಕರುಣಾವಿಲಾಸವು ೧೯೨೫ಕ್ಕೆ ಮೊದಲೇ ಬಂದು ಹೋದ ಮೂಲಕ ಇಪ್ಪತ್ತನೆಯ ಶತಮಾನದ ಮೊದಲ ಇಪ್ಪತ್ತೈದು ವರ್ಷಗಳು ಗಳಗನಾಥರ ಸಾಹಿತ್ಯ ಜೀವನದಲ್ಲಿಯ ಸುವರ್ಣ ಕಾಲವೆಂದು ಸ್ಪಷ್ಟವಾಗಿ ಹೇಳಬಹುದು. ಈ ಇಪ್ಪತ್ತೈದು ವರ್ಷಗಳಲ್ಲಿಯ ಕನ್ನಡ ಸಾಹಿತ್ಯ ಪ್ರಪಂಚದಲ್ಲಿಯ ವಾತಾವರಣದ ಒಂದು ಸಾಮಾನ್ಯ ಪರಿಚಯವನ್ನು ಗಳಗನಾಥರ ಸಾಹಿತ್ಯಸೇವೆಯ ದೃಷ್ಟಿಯಿಂದ ಮಾಡಿಕೊಡುವುದೇ ಇಲ್ಲಿಯ ಮುಖ್ಯ ಉದ್ದೇಶ.

ಒಂದು ಸಾಹಿತ್ಯದ ರೀತಿನೀತಿಗಳಲ್ಲಿ ಆಗಬಹುದಾದ ಬದಲಾವಣೆಗಳಾಗಲಿ ಅದರ ಇತಿಹಾಸ ಕ್ರಮದಲ್ಲಿ ಕಂಡು ಬರಬಹುದಾದ ಏರಿಳಿತಗಳಾಗಲಿ ನಾಲ್ಕೆಂಟು ದಿವಸಗಳಲ್ಲಿ ಸಾಧ್ಯವಾಗಬಹುದಾದ ವಿಷಯಗಳಲ್ಲ. ಸಾಹಿತ್ಯವಾಹಿನಿಯು ಹತ್ತಾರು ದಾರಿಗಳಲ್ಲಿ ಹರಿದು ಸುತ್ತಲಿನ ಆವರಣದಿಂದ ಆಗಾಗ ಮಾರ್ಪಟ್ಟು ಮುಂದುವರಿಯುವುದು. ಇಂದಿನ ಕನ್ನಡ ಸಾಹಿತ್ಯ ಹೊಸದಾದುದೆಂದು ನಾವು ಹೇಳಬಹುದಾದರೂ ಅದರಲ್ಲಿಯ ಹೊಸತನದ ಹುಟ್ಟನ್ನು ನಾವು ಹಿಂದಿನದರಲ್ಲಿ ಕಾಣಬೇಕಾದುದೂ ಆಗತ್ಯ. ಇಂದಿನ ಸಾಹಿತ್ಯಕ್ಕೆ, ಅದರಲ್ಲಿಯೂ ವಿಶೇಷವಾಗಿ ಇಂದಿನ ಕಾದಂಬರಿ ಪ್ರಪಂಚಕ್ಕೆ ಹೊಸ ಕಳೆಯನ್ನು ತಂದುಕೊಟ್ಟ ಶ್ರೀ. ಗಳಗನಾಥರು ತಮ್ಮ ಸೇವೆಯನ್ನು ಪ್ರಾರಂಭಮಾಡುವ ಕಾಲಕ್ಕೆ ಅವರನ್ನು ತಮ್ಮ ಕೆಲಸಕ್ಕೆ ಪ್ರವೃತ್ತರನ್ನಾಗಿ ಮಾಡುವ ಘಟಕಗಳು ಅಂದಿನ

ಸಾಹಿತ್ಯ ಜೀವನವಲ್ಲಿ ಅಸ್ಪಷ್ಟವಾಗಿಯಾದರೂ ಇರದಿದ್ದರೆ ಅವರು ತಮ್ಮ ಲೆಕ್ಕಣಿಕೆಯನ್ನು ಎತ್ತುತ್ತಿದ್ದರೋ ಇಲ್ಲವೋ ಹೇಳಲಿಕ್ಕಾಗದು. ಹೊಸ ದಾರಿಗೆ ಒಯ್ಯಬಹುದಾದ ಈ ಪ್ರವೃತ್ತಿಪರವಾದ ಅಂಶಗಳು ಜನ ಸಾಮಾನ್ಯರ ಸಾಂಸ್ಕೃತಿಕ ಜೀವನದಲ್ಲಿಯ ಮೈಲುಕಲ್ಲುಗಳು. ಇವುಗಳನ್ನು ಗುರುತಿಸಿ ಅವುಗಳ ಮೇಲಿಂದ ಹೊಸದಾರಿಗಳನ್ನು ಹುಡುಕಿಕೊಂಡು ಮುಂದುವರಿಯುವುದು ಕೆಲವರಿಗೆ ಮಾತ್ರ ಸಾಧ್ಯ. ಶ್ರೀ. ಗಳಗನಾಥರು ಈ ಕೆಲಸವನ್ನು ಉತ್ತರ ಕರ್ನಾಟಕದ ಮಟ್ಟಿಗಾದರೂ ನಿರ್ವಿವಾದವಾಗಿ ಮಾಡಿದರೆಂಬುದು ಇಪ್ಪತ್ತನೆಯ ಶತಮಾನದ ಕನ್ನಡ ಸಾಹಿತ್ಯದ ಇತಿಹಾಸಕಾರನು ಒಪ್ಪಲೇಬೇಕಾದ ವಿಷಯವಾಗಿದೆ. ಇಂದಿನ ಕಾಲುದಾರಿ ನಾಳೆಗೆ ಹೆದ್ದಾರಿಯಾಗಿ ಅಲ್ಪಾವಕಾಶದಲ್ಲಿಯೇ ರಾಜಮಾರ್ಗವಾಗಿ ಪರಿಣಮಿಸಬಹುದು. ಸಾಹಿತ್ಯ ಪ್ರಪಂಚದಲ್ಲಿಯೂ ಅಷ್ಟೇ. ಈ ಕಾಲುದಾರಿಗಳನ್ನು ಮೆಟ್ಟಿ ಮುಂದುವರಿಯುವವರ ಹೊಣೆ ದೊಡ್ಡದಲ್ಲದೆ ಸಾಧನೆಯೂ ಮಹತ್ವದ್ದು. ಇವುಗಳನ್ನು ಕಂಡುಹಿಡಿಯುವವರಿಗೆ ಸ್ವಯಂ ಸ್ಫೂರ್ತಿಯಂತೂ ಬೇಕೇ ಬೇಕು. ಅಲ್ಲದೆ ಜನರ ಸಾಂಸ್ಕೃತಿಕ-ಸಾಹಿತ್ಯಿಕ ಜೀವನದಲ್ಲಿಯ ಕೆಲವಾರು ಅಪೌರುಷೇಯವಾದ ಶಕ್ತಿಗಳು ಇದರಲ್ಲಿ ತಮ್ಮ ಕೆಲಸವನ್ನು ಯಾವಾಗಲೂ ಮಾಡುತ್ತಿರುತ್ತವೆ. ಶ್ರೀ ಗಳಗನಾಥರು ತಮ್ಮ ಲೇಖನವನ್ನಾರಂಭಿಸಿದಾಗ ಕನ್ನಡ ಸಾಹಿತ್ಯವು ಹತ್ತೊಂಬತ್ತನೆಯ ಶತಮಾನದ ರಾಜಕೀಯ ಸಾಮಾಜಿಕ ಆಂದೋಲನೆಗಳನ್ನು ಮೆಟ್ಟಿ ಒಂದು ಹೊಸದಾದ ಹಂತಕ್ಕೆ ಮುಟ್ಟುವ ಪೂರ್ವಸೂಚನೆಯನ್ನು ಕೊಡುತ್ತಿರದೆ ಹೋಗಿದ್ದರೆ ಶ್ರೀ ಗಳಗನಾಥರಿಗೆ ಒಂದು ವೇಳೆ ತಾವು ಕೈಕೊಂಡ ಕೆಲಸದ ವಿಷಯಕ್ಕೆ ಆಸಕ್ತಿಯೂ ಇರುತ್ತಿರಲಿಲ್ಲವೆಂದೇ ಹೇಳಬೇಕಾಗುವುದು. ಎಂದರೆ ಇಡೀ ಹತ್ತೊಂಬತ್ತನೆಯ ಶತಮಾನದಲ್ಲಿಯ ಕನ್ನಡ ಸಾಹಿತ್ಯದ ಬೆಳವಣಿಗೆಯ ರೀತಿಯೇ ಗಳಗನಾಥರ—ಅದರಂತೆ ಅವರೊಡನೆ ಕನ್ನಡ ಸಾಹಿತ್ಯಕ್ಕೆ ಸೇವೆ ಸಲ್ಲಿಸಿದ ಮಹನೀಯರ—ಕೃತಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿತ್ತೆಂದೂ ಹೇಳಬಹುದು. ಕನ್ನಡ ಸಾಹಿತ್ಯಸಿರಿಯ ಪಲ್ಲಕ್ಕಿಯು ತನ್ನ ವಿಶಿಷ್ಟವಾದ ದಾರಿಯಲ್ಲಿ ನಡೆದು ಬರುತ್ತಿರದಿದ್ದರೆ ಶ್ರೀ ಗಳಗನಾಥರಿಗೇ ವಿಶೇಷವಾದ

ಕಾಣಿಕೆಯನ್ನು ಅವರು ಸಲ್ಲಿಸುತ್ತಿರಲಿಲ್ಲ. ಅದು ಸಾಧ್ಯವೂ ಇರುತ್ತಿರಲಿಲ್ಲ.

ಈ ದೃಷ್ಟಿಯಿಂದ ನೋಡಿದರೆ ಗಳಗನಾಥರ ಕಾಲದ ವಿಶೇಷವನ್ನು ನಾವು ತಿಳಿಯುವುದಕ್ಕೆ ಆ ಕಾಲಕ್ಕೆ ಹಿನ್ನೆಲೆಯಾದ ಆ ಮೊದಲಿನ ಕಾಲಖಂಡದ ಸಾಹಿತ್ಯೇತಿಹಾಸವನ್ನು ಕೆಲ ಮಟ್ಟಿಗಾದರೂ ಗಮನಿಸುವುದು ಅನಿವಾರ್ಯವಾದದ್ದು. ಸಾಮಾನ್ಯವಾಗಿ ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನವೆಂದರೆ ತೀರ ಇಳಿತಾಯದ ಕಾಲವೆಂದೂ ಅದರ ಯಾವ ಭಾಗವೂ ಉಜ್ವಲವಾದುದಲ್ಲವೆಂದೂ ತಿಳಿಯಲಾಗಿದೆ. ಸುದೀರ್ಘವಾದ ಇತಿಹಾಸವುಳ್ಳ ಯಾವ ಸಾಹಿತ್ಯದ ಸಿಂಹಾವಲೋಕನವನ್ನು ನಾವು ಮಾಡಿದರೂ ಇಂಥ ಏರಿಳಿತಗಳು ಇದ್ದೇ ಇರುತ್ತವೆಂಬುದೂ, ಹೀಗೆ ಕೆಲವಾರು ದಶಕಗಳು ಸಾಮಾನ್ಯವಾಗಿಯೂ ಇರುವವೆಂಬುದೂ ಸ್ಪಷ್ಟವಾಗದಿರದು. ಆದರೆ ಹೊರಗಿನ ದೃಷ್ಟಿಗೆ ಒಂದು ವಿಶಿಷ್ಟವಾದ ಕಾಲಾವಧಿಯು ಸಾಮಾನ್ಯವಾಗಿ ಕಂಡು ಬಂದರೂ ಆ ಕಾಲದಲ್ಲಿ ಸಾಹಿತ್ಯದ ಜೀವಾಳಕ್ಕೆ ಸಂಬಂಧಪಟ್ಟ ಸೂಕ್ಷ್ಮವಾದ ಕೆಲವು ಮಾರ್ಪಾಟುಗಳೂ, ಅವರ ಅಂತರ್ಯವನ್ನೇ ಒಂದು ಹೊಸಸಾಹಸದ ಉದ್ದೇಶದ ಸಾಧನೆಗಾಗಿ ಸಿದ್ಧಪಡಿಸುವಂಥ ಶಕ್ತಿಗಳೂ ಹುಟ್ಟಿಕೊಂಡು ಬೆಳೆಯುತ್ತಿರುವುದು ಸಾಧ್ಯ. ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನ ಇಂಥ ಕಾಲ. ಜನಜೀವನದಲ್ಲಿ ಹೊಸತಾಗಿ ಸೇರಿಕೊಂಡು ಜೀವನದ ಬಾಹ್ಯಸ್ವರೂಪವನ್ನಲ್ಲದೆ ಅಂತಃಸ್ವರೂಪವನ್ನು ನಿಧಾನವಾಗಿಯಾದರೂ ಸ್ಪಷ್ಟವಾಗಿ ಅಪೂರ್ವವಾದ ದಾರಿಯೊಂದರಲ್ಲಿ ಮುನ್ನೂಕುವ ಶಕ್ತಿಗಳ ಫಲವಾಗಿ ಸಾಹಿತ್ಯ ಪ್ರಪಂಚದಲ್ಲಿಯಾದರೂ ಹೊಸ ಶಕ್ತಿಗಳು, ರೂಪಗಳು, ಹೊಸ ಉದ್ದೇಶಗಳು ಮೈದೋರಿದ ಕಾಲ ಅದು. ಇಪ್ಪತ್ತನೆಯ ಶತಮಾನದ ನಾಲ್ಕು ದಶಕಗಳಲ್ಲಿ ಕನ್ನಡ ಸಾಹಿತ್ಯವು ಆಧುನಿಕತೆಯ ಮೆಟ್ಟಲುಗಳನ್ನೇರಿ ಉಳಿದ ಸಾಹಿತ್ಯಗಳ ಜೊತೆಯಲ್ಲಿ ಸಮಾನತೆಯ ಹಕ್ಕಿಗಾಗಿ ಎದೆಯೊಡ್ಡಿ ನಿಲ್ಲುವಂತಾಗಿದ್ದರೆ ಅದೆಲ್ಲವೂ ಹತ್ತೊಂಬತ್ತನೆಯ ಶತಮಾನದ ಸುದೀರ್ಘವಾದ ಪೂರ್ವಸಿದ್ಧತೆಯಿಂದಲೇ ಎಂಬುದನ್ನು ನಾವು ಮರೆಯುವಂತಿಲ್ಲ. ಈ ಪೂರ್ವಸಿದ್ಧತೆಯು

ಒಂದು ಹದವಾದ ಮಟ್ಟವನ್ನು ಮುಟ್ಟಿದಾಗ ಗಳಗನಾಥರು ಆ ಸಿದ್ಧತೆಯ ತಿರುಳನ್ನು ತಿಳಿದು ಅದನ್ನು ಯಥಾಯೋಗ್ಯವಾಗಿ ಮುಂದುವರಿಸಿದರಲ್ಲದೆ ಮುಂದಿನ ಮೆಟ್ಟಲುಗಳನ್ನು ಮುಂದೆ ಬಂದವರು ಸುಗಮವಾಗಿ ಏರುವಂತೆ ದಾರಿತೋರಿಸಿಕೊಟ್ಟರು. ಇದನ್ನವರು ಹೇಗೆ ಸಾಧಿಸಿರಬಹುದೆಂಬುದನ್ನು ಸ್ವಲ್ಪದರಲ್ಲಿ ವಿಚಾರಿಸುವ

ನಮ್ಮ ಸಾಹಿತ್ಯದ ಇತಿಹಾಸದಲ್ಲಿ ಹತ್ತೊಂಬತ್ತನೆಯ ಶತಮಾನ ಒಂದು ಮಹತ್ವದ ಸಂಧಿಕಾಲವೆಂದು ಹೇಳುವುದು ಎರಡು ದೃಷ್ಟಿಯಿಂದ. ಮೊದಲನೆಯದಾಗಿ ಆ ಶತಮಾನದಲ್ಲಿ ಹಳೆಯ ಹೊಸತುಗಳ ನಡುವೆ ವಿಶೇಷವಾದ ಯಾವ ತಿಕ್ಕಾಟವೂ ಇಲ್ಲದೆ ಸಾಹಿತ್ಯದ ರೀತಿನೀತಿಗಳಿಗೆ ಸಂಬಂದಪಟ್ಟ ಸಂಪ್ರದಾಯ ಸಮಾಚಾರಗಳು ಒಂದರ ಹಿಂದೊಂದು ತಾವಾಗಿಯೇ ಮಾಯವಾಗತೊಡಗಿದುವು. ಎರಡನೆಯದಾಗಿ, ಪದ್ಯವೆಂದರೆ ಮಾತ್ರ ಸಾಹಿತ್ಯ, ಗದ್ಯವೆಂಬುದು ಪಂಡಿತರೆನಿಸಿಕೊಳ್ಳುವವರಿಗೆ ಗಮನಾರ್ಹವಲ್ಲವೆಂಬ ಭಾವನೆಯು ಸಾವಕಾಶವಾಗಿ ಸವೆದುಹೋಗತೊಡಗಿತು. ಶತಮಾನದ ಕೊನೆಯ ದಶಕದಲ್ಲಿ ಮುದ್ದಣನು ಹೇಳಿದ ಮಾತೇ ಇದಕ್ಕೆ ಸಾಕ್ಷಿ. ಪದ್ಯದಲ್ಲಿ ಸಂಪ್ರದಾಯದ ಬಂಧನಗಳು ಸಿಥಿಲವಾಗಿ ಸಡಿಲಾಗುತ್ತಿದ್ದುದೊಂದೆಡೆಯಾದರೆ ಇನ್ನೊಂದೆಡೆಯಲ್ಲಿ ಗದ್ಯದ ಲೋಕಪ್ರಿಯತೆ ಬೆಳೆಯುತ್ತ ನಡೆದುದು ಆ ಶತಮಾನದ ಸಾಹಿತ್ಯ ಜೀವನದ ಹಿಂದೆ ನಡೆದಿದ್ದ ಮಾರ್ಪಾಟಗಳ ದ್ಯೋತಕಗಳಾಗಿವೆ. ಅದರಲ್ಲಿ ಇನ್ನೂ ಸೂಕ್ಷ್ಮವಾಗಿ ನೋಡಿದರೆ ಗದ್ಯದ ಬೆಳೆವಣಿಗೆಯೇ ಹತ್ತೊಂಬತ್ತನೆಯ ಶತಮಾನದ ಮುಖ್ಯವಾದ ಘಟನೆ ಎಂಬುದೂ ಸ್ಪಷ್ಟವಾಗುವುದು. ಗಳಗನಾಥರ ಕಾಣಿಕೆ ಕನ್ನಡ ಗದ್ಯಕ್ಕೆ ಸಂಬಂಧಿಸಿದ್ದುದರಿಂದ ಈ ವಿಷಯವನ್ನು ಇನ್ನಷ್ಟು ವಿಶದವಾಗಿ ಅವಲೋಕಿಸುವುದು ಅವಶ್ಯವೆಂದು ತೋರುತ್ತದೆ. ಗದ್ಯದ ಬೆಳೆವಣಿಗೆಯ ಈ ಹಿನ್ನೆಲೆಯ ಮೂಲಕವಾಗಿ ಗಳಗನಾಥರು ಮಾಡಿದ ಕೆಲಸದ ಕಲ್ಪನೆ ಮತ್ತಿಷ್ಟು ಸ್ಪಷ್ಟವಾಗಿ ಆಗುವುದು ಸಹಜವಾಗಿದೆ.

ಸಂಪ್ರದಾಯದ ಸಾಹಿತ್ಯ ಕ್ಷೇತ್ರದಲ್ಲಿ ಗದ್ಯಕ್ಕೆ ಆಸ್ಪದವಿದ್ದರೂ ಅದಕ್ಕೆ ಲೇಖಕರು ಯೋಗ್ಯವಾದ ಅವಕಾಶವನ್ನು ಕೊಡುತ್ತಿರಲಿಲ್ಲ.

ಇಲ್ಲದೆ ಅವರ ಕೃತಿಗಳಲ್ಲಿ ಅಲ್ಲಲ್ಲಿ ಬರುವ ಗದ್ಯವನ್ನು ನೋಡಿದರೆ ವೃತ್ತಗಳ ನಿರ್ಬಂಧವನ್ನು ಬದಿಗಿರಿಸಿದ್ದರೂ ಕೂಡ ಇನ್ನಾವ ವಿಚಾರದಲ್ಲಿಯೂ ಆ ಗದ್ಯವು ಪದ್ಯದಿಂದ ಬೇರೆಯಾಗಿರಲಿಲ್ಲವೆಂಬುದೂ ಸ್ಪಷ್ಟವಾಗುವುದು. ಕವಿಸಮಯ, ಅಲಂಕಾರಗಳಿಂದ ಕೂಡಿದ ಈ ಗದ್ಯವು ಸಾವಕಾಶವಾಗಿ ಬೇರೆ ಶಕ್ತಿಗಳಿಗೆ ತಲೆಬಾಗಿ ಆಧುನಿಕ ಗದ್ಯವು ಪ್ರಾರಂಭವಾದುದು ಕಳೆದ ಶತಮಾನದ ಮೂರನೆಯ ದಶಕದಲ್ಲಿ. ಈ ಕೆಲಸವನ್ನು ವಿಶೇಷವಾದ ಆಸ್ಥೆಯಿಂದ ಮೊದಲು ಮಾಡಿದವರೆಂದರೆ ಕ್ರೈಸ್ತಮತ ಪ್ರಚಾರಕ್ಕಾಗಿ ಕರ್ನಾಟಕದಲ್ಲಿ ನೆಲಸಿದ ಪಾದ್ರಿಗಳು. ಇವರ ಜೊತೆಯಲ್ಲಿ ಇವರಿಂದ ಕೆಲಮಟ್ಟಿಗೆ ಸ್ಫೂರ್ತಿಪಡೆದು ಕನ್ನಡ ಪತ್ರಿಕಾ ಪ್ರಪಂಚದ ತಳಪಾಯ ಹಾಕಿದ ಮಂಗಳೂರಿನ ಕೆಲ ಕನ್ನಡ ಸೇವಕರು ಕನ್ನಡದಲ್ಲಿ ವೃತ್ತಪತ್ರಿಕೆಯನ್ನು ಪ್ರಾರಂಭಿಸಿದರು. ಪಾದ್ರಿಗಳಿಗೆ ಗದ್ಯವೇ ಪ್ರಚಾರಸಾಧನವಾದುದರಿಂದ ಕನ್ನಡ ಗದ್ಯವು ಗ್ರಂಥಸ್ಥ ಕ್ಲಿಷ್ಟತೆಯನ್ನು ಬದಿಗಿರಿಸಿ ಬಳಕೆಯ ಭಾಷೆಯನ್ನು ಹೆಚ್ಚುಹೆಚ್ಚಾಗಿ ಸಮೀಪಿಸಹತ್ತಿತು. ಹೀಗೆ ಬದಲಾಯಿಸುತ್ತ ನಡೆದ ಗದ್ಯ ಇಡೀ ಶತಮಾನದಲ್ಲಿ ಹೆಚ್ಚುಹೆಚ್ಚಾಗಿ ಅನುವಾದಿತ ಕೃತಿಗಳು ಬರತೊಡಗಿದ ಹಾಗೆ ಒಂದು ಹದಕ್ಕೆ ಬರತೊಡಗಿತು. ೧೮೪೦ರ ಸುಮಾರಿಗೆ ಮೊದಲಾದ ಪತ್ರಿಕಾ ವ್ಯವಸಾಯವಾದರೂ ನಿಧಾನವಾಗಿ ಮುಂದೆ ಹೆಜ್ಜೆಗಳನ್ನಿಡುತ್ತ ಈ ಶತಮಾನದ ಮೊದಲು ವರ್ಷದ ವರೆಗೂ ಗದ್ಯಶೈಲಿಯು ಮೇಲೆ ತನ್ನ ವರ್ಚಸ್ಸನ್ನು ಬೀರುತ್ತಲೇ ಇತ್ತು. ಸಾಮಾನ್ಯವಾಗಿ ಗದ್ಯದ ಬೆಳವಣಿಗೆ ಈ ರೀತಿಯಲ್ಲಿ ನಡೆದಿದ್ದರೂ ಈ ಕೆಲಸದಲ್ಲಿ ವಿಶೇಷವಾಗಿ ಪರಭಾಷೆಯಿಂದ ಕನ್ನಡದಲ್ಲಿ ಬಂದ ಅನುವಾದಗಳಿಂದಲೇ ಕಾರ್ಯವು ವಿಶೇಷವಾಗಿ ಸಾಧಿಸಲ್ಪಟ್ಟಿತೆಂದೂ ಹೇಳಬಹುದು. ಈ ಅನುವಾದ ಕಾರ್ಯವಾದರೂ ಇಡೀ ಹತ್ತೊಂಬತ್ತನೆಯ ಶತಮಾನದ ಮೂರನೆಯ ದಶಕದಿಂದ ಪ್ರಾರಂಭವಾಗಿ ಕೊನೆಯ ಒಂದೆರಡು ದಶಕಗಳಲ್ಲಿ ವಿಶೇಷವಾಗಿ ನಡೆಯಿತು. ಶ್ರೀ ಗಳಗನಾಥರು ಬರೆಯಲಾರಂಭಿಸಿದಾಗ ಅನುವಾದಗಳಿಗೆ ಲೋಕಪ್ರಿಯತೆ ವಿಶೇಷವಾಗಿತ್ತಲ್ಲದೆ ಸಾಹಿತ್ಯದ ಮುನ್ನಡೆಗೆ ಈ ಅನುವಾದಗಳಿಂದ ಹೆಚ್ಚಾದ ಸ್ಫೂರ್ತಿ ದೊರಕುತ್ತಿತ್ತು ಎಂಬುದೂ ಸ್ಪಷ್ಟವಾಗಿತ್ತು. ಹೆಚ್ಚಾಗಿ ಗಳಗನಾಥರು

ಮರಾಠಿಯಿಂದ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದವರಾದುದ ರಿಂದ ಈ ಅನುವಾದಿತ ಕಾದಂಬರಿಯ ಹಿನ್ನೆಲೆಯನ್ನು ಸ್ವಲ್ಪವರಲ್ಲಿ ನಿರೀಕ್ಷಿಸುವುದು ಅಪ್ರಸ್ತುತವಾಗಲಿಕ್ಕಿಲ್ಲ.

ಹಾಗೆ ನೋಡಿದರೆ ಇಂದಿನ ಕನ್ನಡ ಕಾದಂಬರಿಯ ಹುಟ್ಟು ಮೊಟ್ಟ ಮೊದಲು ಅನುವಾದಿತ ಕಾದಂಬರಿಯಲ್ಲಿಯೇ ಆಯಿತೆಂದು ಹೇಳ ಬಹುದು. ಸ್ಪಷ್ಟವಾಗಿ ಪಾದ್ರಿಗಳ ಪ್ರಚಾರ ಸಾಧನಗಳಾದ ಬೈಬಲ್ಲಿನ ಕಥೆಗಳೊಂದು ಕಡೆಯಾದರೆ ಅದೇ ಉದ್ದೇಶವನ್ನು ಕಾಲ್ಪನಿಕ ಕಥೆ ಕಾದಂಬರಿಗಳ ಮೂಲಕವಾಗಿ ಪೂರೈಸುವುದಕ್ಕಾಗಿ ಅನುವಾದಿತವಾದ "ಪಿಲ್‌ಗ್ರಿಮ್ಸ ಪ್ರೊಗ್ರೆಸ್"ದಂಥ ಕಥೆ ಕಾದಂಬರಿಗಳು ಇನ್ನೊಂದು ಕಡೆಯಿಂದ ಬರಲಾರಂಭಿಸಿ ಪರಭಾಷೆಯಿಂದ ಕನ್ನಡದಲ್ಲಿ ಅನುವ್ರ ಉಂಟಾಯಿತು. ಈ ಅನುವಾದಗಳ ಐತಿಹಾಸಿಕ ಬೆಳವಣಿಗೆಯನ್ನು ನಾವು ಇಲ್ಲಿ ಸೂಕ್ಷ್ಮವಾಗಿ ಪರಿಶೀಲಿಸುವ ಆವಶ್ಯಕತೆಯಿಲ್ಲ. ಆದರೆ ೧೮೪೭ರಲ್ಲಿ T, Weigle ಅವರಿಂದ ಅನುವಾದಿತ Bunyan ನ Pilgrim's Progress, ೧೮೫೪ರಲ್ಲಿ ಎಸ್. ಬಿ. ಕೃಷ್ಣಸ್ವಾಮಿ ಅಯ್ಯಂಗಾರರಿಂದ ಕನ್ನಡಿಸಲ್ಪಟ್ಟ Defoe ನ Robinson Crusoe, ದಂಥ ಕೃತಿಗಳಿಂದ ಆಧುನಿಕ ಕಾದಂಬರೀ ಲೇಖನಕ್ಕೆ ಪ್ರೋತ್ಸಾಹಸಿಕ್ಕಿತೆಂದು ನಿಃಶ್ಶಂಕವಾಗಿ ಹೇಳಬಹುದು. ೧೮೪೦ರ ಸುಮಾರಿಗೆ ಪ್ರಸಿದ್ಧವಾದ Walter Eliot ರ ಇಸಾಪನ ನೀತಿಕಥೆಗಳ ಕನ್ನಡ ಅನುವಾದಗಳೂ, ಸುಮಾರು ಇಪ್ಪತ್ತು ವರ್ಷಗಳ ನಂತರ ಹೊರಬಿದ್ದ ವೆಂಕಟ ರಂಗೋ ಕಟ್ಟಿ ಅವರಿಂದ ಕನ್ನಡಿಸಲ್ಪಟ್ಟ ಅರಬ ಭಾಷೆಯಲ್ಲಿಯ ಸುರಸ ಕಥೆಗಳ ಸಂಗ್ರಹವೂ, ಅದರಂತೆ ಅದೇ ಸುಮಾರಿಗೆ ಪ್ರಸಿದ್ಧವಾದ Mary Mertha Sherwood ಳ (The Ayah and the lady) "ದೊರೆಸಾನಿಯನ್ನೂ ದಾದಿಯನ್ನೂ ಕುರಿತ ಕಥೆ" ಎಂಬ ಹೆಸರಿನಲ್ಲಿ ಬಂದ ಇಂಗ್ಲೀಷ ಕಾದಂಬರಿಯ C. Campbell ಅವರಿಂದ ಮಾಡಲ್ಪಟ್ಟ ಅನುವಾದವೂ ಇನ್ನೆಷ್ಟೋ ಕೃತಿ ಗಳು ಸೇರಿ ಅನುವಾದಗಳ ಮೂಲಕ ಕನ್ನಡ ಕಾದಂಬರಿ ಲೇಖನಕ್ಕೆ ಆಧುನಿಕತೆಯ ಸೊಬಗನ್ನು ತಂದುಕೊಡುವ ಕೆಲಸದಲ್ಲಿ ಸಹಕಾರಿ ಯಾದವು. ಇದಲ್ಲದೆ ಇಂಗ್ಲೀಷಿನಿಂದಲ್ಲದೆ ಇತರ ಭಾಷೆಗಳಿಂದ ಕೂಡ

ಅನುವಾದ ಕಾರ್ಯ ಆರಂಭವಾಗುವಂತೆ ಲೇಖಕರಲ್ಲಿಯೂ ಓದುಗರಲ್ಲಿಯೂ ಒಂದು ಹೊಸ ಮನೋಭೂಮಿಕೆಯನ್ನು ಸಿದ್ಧಗೊಳಿಸಿದವು. ಇಂಗ್ಲೀಷ ಕಾದಂಬರಿ—ನಾಟಕಗಳ ಈ ಅನುವಾದ ಕಾರ್ಯ ೧೮೬೫ರ ನಂತರ ವಿಶೇಷವಾದ ಭರದಿಂದ ಸಾಗಿ ಮೈಸೂರು ಪ್ರಾಂತದಲ್ಲಿ ರಾಜಾಶ್ರಯದ ಫಲವಾಗಿ ಸಂಸ್ಕೃತದಿಂದ ಕಾವ್ಯ, ನಾಟಕ ಕಥೆಗಳ ಅನುವಾದ ಕಾರ್ಯಕ್ಕೂ ಮೊದಲಾಯಿತು. ಸುಮಾರು ೧೮೭೦ ರಿಂದ ಮೂವತ್ತು ವರ್ಷಗಳಲ್ಲಿ ಹೆಚ್ಚುಕಡಿಮೆ ಸಂಸ್ಕೃತ ಸಾಹಿತ್ಯದಲ್ಲಿಯ ಲೋಕಪ್ರಿಯವಾಗಬಲ್ಲ ಪ್ರತಿಯೊಂದು ಕೃತಿಯೂ ಕನ್ನಡದಲ್ಲಿ ಅನುವಾದಿಸಲ್ಪಟ್ಟಿತೆಂದು ಹೇಳಿದರೆ ಯಾವ ಅತಿಶಯೋಕ್ತಿಯೂ ಆಗಲಾರದು. ಪರದೇಶಗಳಿಂದ ಬಂದ ಕಥೆಗಳ ಮೂಲಕವಾಗಿ ಕಾದಂಬರಿ ಲೇಖನಕ್ಕೆ ಒಂದು ತೆರದ ಆಧುನಿಕತೆಯು ಬಂದಿದ್ದರೆ ಸಂಸ್ಕೃತ ಕಥಾ ಸಾಹಿತ್ಯದ ಅನುವಾದಗಳ ಫಲವಾಗಿ ಬರವಣಿಗೆಯಲ್ಲಿ ಒಂದು ಅಚ್ಚುಕಟ್ಟೂ ಭಾಷಾ ದೃಷ್ಟಿಯಿಂದ ಒಂದು ಅನಿವಾರ್ಯವಾದ ಪ್ರೌಢಿಮೆಯೂ ಆ ಕಾಲದ ಗದ್ಯ ಸಾಹಿತ್ಯದಲ್ಲಿ ಬಂದು ನೆಲಸಿದವೆಂದು ನಿರ್ವಿವಾದವಾಗಿ ಹೇಳಬಹುದು. ಹೀಗೆ ಒಂದು ಕಡೆಯಿಂದ ದಶಕುಮಾರಚರಿತ, ಪಂಚತಂತ್ರಗಳಂಥ ಕಥಾಸಾಹಿತ್ಯ, ಇನ್ನೊಂದು ಕಡೆಯಿಂದ ಇಂಗ್ಲೀಷ ಭಾಷೆಯಿಂದ ನಾಟಕ, ಕಾದಂಬರಿಗಳ ಅನುವಾದ ಇವುಗಳಿಂದ ಕನ್ನಡ ಕಾದಂಬರಿ ಲೇಖನ ಹೊಸದಾರಿಯನ್ನು ಅನುಸರಿಸಹತ್ತಿತು. ಭಾಷಾಂತರವನ್ನು ಬಿಟ್ಟುಕೊಟ್ಟು ಮೂಲದ ಕಥೆಯನ್ನು ಇಲ್ಲಿಯ ಸಾಮಾಜಿಕ ಆವರಣಕ್ಕೆ ಸರಿಹೋಗುವಂತೆ ಮಾರ್ಪಡಿಸಿಕೊಂಡು ಹಳೆಯ ಕಥೆಗಳನ್ನೇ ಬೇರೊಂದು ರೂಪದಲ್ಲಿ ಹೇಳುವ ಇನ್ನೊಂದು ಸಂಪ್ರದಾಯವೂ ಇದೇ ಸುಮಾರಿಗೆ ಎಂದರೆ ೧೮೭೫ರ ಸುಮಾರಿಗೆ ತಲೆದೋರಹತ್ತಿತು. ಉದಾಹರಣೆಗೆಂದು ವೆಂಕಟೇಶ ಭೀಮರಾವ ಭಂಡಿವಾಡರು ಬರೆದ “ಕಮಲಾಕ್ಷ ಪದ್ಮಗಂಧಿಯ ಕಥೆ”ಯನ್ನು ನಿರ್ದೇಶಿಸಬಹುದು. ಇದಕ್ಕೆ ಮೂಲ ಕಥೆ ಶೇಕ್ಸಪಿಯರನ Romeo and Juliet ಆಗಿದ್ದರೂ ಕಥೆಯನ್ನು ನಮ್ಮಲ್ಲಿಯ ಆವರಣಕ್ಕೆ ಸರಿಹೋಗುವಂತೆ ಅಳವಡಿಸಿಕೊಳ್ಳಲಾಗಿದೆ. ಈ ಎಲ್ಲ ಪೂರ್ವಸಿದ್ಧತೆಯ ಫಲವಾಗಿ ಅನುವಾದಗಳು ಹೆಚ್ಚುಹೆಚ್ಚು ಜನದ

ಮನಸೆಳೆಯುತ್ತಿದ್ದವೆಂಬುದನ್ನು ಆಮೇಲೆ ಬರತೊಡಗಿದ ಎಂ. ಎಸ್. ಪುಟ್ಟಣ್ಣ ಅವರ ಅನುರೂಪಗಳ ಮೇಲಿಂದಲೂ ಅವರ ನಂತರ ಬಂದ ಬಿ. ವೆಂಕಟಾಚಾರ್ಯರ ಬಂಗಾಲಿ ಕಾದಂಬರಿಗಳ ಕನ್ನಡ ತರ್ಜುಮೆಗಳ ಮೇಲಿಂದಲೂ ತಿಳಿಯಬಹುದು. ಅನುವಾದಗಳಿಂದ ರೂಪಾಂತರವನ್ನು ಸಾಧಿಸಿ ಇನ್ನು ಒಂದು ಹೆಜ್ಜೆ ಮುಂದಕ್ಕೆ ಸಾಗಿ ಕನ್ನಡ ಕಾದಂಬರಿ ಸ್ವತಂತ್ರ ನಿರ್ಮಿತಿಯ ಸಾಹಸಕ್ಕೆ ಹಾತೊರೆಯುವ ಕಾಲ ವೆಂದರೆ ಶತಮಾನದ ಕೊನೆಯ ದಶಕವು. ಆಗಲೇ ಪುಟ್ಟಣ್ಣನವರ "ಮಾಡಿದ್ದುಣ್ಣೋ ಮಹಾರಾಯ" ಪ್ರಸಿದ್ಧವಾಗಿ ಹೋಗಿತ್ತು. ಇಂಗ್ಲೀಷು ಮತ್ತು ಸಂಸ್ಕೃತ ಭಾಷೆಗಳಿಂದ ಬಂದ ಕೃತಿಗಳಿಂದ ಒಂದು ಹದಕ್ಕೆ ಬಂದ ಕನ್ನಡದಲ್ಲಿಯ ಕಾಲ್ಪನಿಕ ಕಥೆ ಸಾಹಿತ್ಯವು ಪುಟ್ಟಣ್ಣ ಮತ್ತು ವೆಂಕಟಾಚಾರ್ಯರ ಯತ್ನಗಳಿಂದ ಇನ್ನೂ ಒಂದು ಹೆಜ್ಜೆ ಮುಂದುವರಿಯುವಂತಾಯಿತು. ಬಂಕಿಮಚಂದ್ರ ಚಟರ್ಜಿ, ಈಶ್ವರಚಂದ್ರ ವಿದ್ಯಾಸಾಗರ, ಯೋಗೀಂದ್ರನಾಥ ವಸು, ಸಂಜೀವಚಂದ್ರ ಚಟ್ಟೋಪಾಧ್ಯಾಯ ಮುಂತಾದವರ ವಂಗ ಸಾಹಿತ್ಯದಲ್ಲಿಯ ಉತ್ತಮ ಕಾದಂಬರಿಗಳನ್ನು ಕನ್ನಡಿಸಿ ಬಿ. ವೆಂಕಟಾಚಾರ್ಯರು ಕನ್ನಡ ಕಾದಂಬರಿಗೆ ಆ ಬರೆವಣಿಗೆಯ ಮೂಲಕ ಕೇವಲ ಮನೋರಂಜನೆಯಲ್ಲದೆ ಆನುಷಂಗಿಕವಾಗಿ ಪ್ರಚಲಿತ ಸಮಾಜ ಪದ್ಧತಿಯ ವಿಮರ್ಶೆಯೂ ಸಾಧ್ಯ ಎಂಬ ಅರಿವನ್ನು ತಂದು ಕೊಟ್ಟರು. ಸಮಾಜ ವಿಮರ್ಶೆಯನ್ನೊಳಗೊಂಡ ಸ್ವತಂತ್ರ ಕನ್ನಡ ಕಾದಂಬರಿಯ ಕಾಲ ಇನ್ನೂ ದೂರವಾಗಿದ್ದರೂ ಬಂಗಾಲಿ ಕಾದಂಬರಿಗಳ ಈ ಅನುವಾದಗಳು ಆ ತೆರದ ಕಾದಂಬರಿಗಳ ಸಾಧ್ಯಾಸಾಧ್ಯತೆಗಳನ್ನು ಕಟ್ಟು ನಿಟ್ಟುಗಳನ್ನು ಕನ್ನಡ ಓದುಗರ ಮುಂದಿಟ್ಟವು. ಶ್ರೀ ಗಳಗನಾಥರು ಕನ್ನಡ ಕಾದಂಬರೀ ವಾಙ್ಮಯಕ್ಕೆ ತಮ್ಮ ಕಾಣಿಕೆಯನ್ನು ಸಲ್ಲಿಸಲು ಮೊದಲು ಮಾಡಿದಾಗ ಈ ಎಲ್ಲ ವಿವಿಧ ಭಾಷೆಗಳಿಂದ ಬಂದ ಅನುವಾದಗಳು ಕನ್ನಡ ಓದುಗರೆದುರಿಗಿದ್ದವಲ್ಲದೆ ಬರೆವಣಿಗೆಯೂ, ಅದರ ಉದ್ದೇಶವೂ ಎಷ್ಟೋ ಪರಿಯಿಂದ ಬೆಳೆದು ಒಂದು ಹದವಾದ ಹಂತಕ್ಕೆ ಬಂದು ತಲುಪಿದ್ದವು.

ಕಳೆದ ಶತಮಾನದ ಕೊನೆಯ ಮೂವತ್ತು ವರ್ಷಗಳಲ್ಲಿಯ

ವಿಸ್ತಾರವಾದ ಈ ಅನುವಾದ ಕಾರ್ಯವು ಸ್ವಯಂ ನಿರ್ಮಿತಿಗೆ ಸ್ಫೂರ್ತಿ ಕೊಡುವಂತಾಗಿತ್ತು. ಆದರೂ ಕನ್ನಡ ಸಾಹಿತ್ಯವು ತನ್ನದೇ ಆದ ಒಂದು ವ್ಯಕ್ತಿತ್ವವನ್ನು ಹೊಸದಾರಿಯಲ್ಲಿ ಹರಿಯಿಸಲು ಇನ್ನೂ ಹವಣಿಸುವುದ ರಲ್ಲಿತ್ತೇ ಹೊರತು ಕೂಡಲೆ ಗುರಿಯನ್ನು ಮುಟ್ಟುವ ಸ್ಥಿತಿಯನ್ನು ಮುಟ್ಟಿರ ಲಿಲ್ಲ. ಗದ್ಯದ ದೃಷ್ಟಿಯಿಂದ ಬೇಕಾದಷ್ಟು ಬೆಳವಣಿಗೆಯಾಗಿದ್ದರೂ ಸಂಪ್ರದಾಯದ ಸಂಕೋಲೆಗಳು ಪೂರ್ಣವಾಗಿ ಬಸುಬಲ್ಪಟ್ಟಿರಲಿಲ್ಲ. ನೂರಾರು ಅನುವಾದಗಳ ಮೂಲಕ ಗದ್ಯಶೈಲಿಯು ಪಂಡಿತರಿಂದ ಪಾಮ ರರ ಕಡೆಗೆ ತನ್ನ ದೃಷ್ಟಿಯನ್ನು ತಿರುಗಿಸತೊಡಗಿತ್ತು. ನಾಲ್ಕಾರು ದಶಕ ಗಳಲ್ಲಿ ಮಂಗಳೂರಿನ Canarese Informer, "ಸಭಾಪತ್ರ" ಮತ್ತು ಇತರ ನಿಯತಕಾಲಿಕೆಗಳು, "ಮೈಸೂರ ವೃತ್ತಾಂತ ಬೋಧಿನಿ" "ಆರ್ಯ ಧರ್ಮೋಜ್ಜೀವಿನಿ" "ಅವಕಾಶ ತೋಷಿಣಿ" ವಿಜಾಪುರದ "ಕರ್ನಾಟಕ ವೈಭವ" ಧಾರವಾಡದ "ಕರ್ನಾಟಕ ವೃತ್ತ" ಮುಂತಾದ ನಿಯತ ಕಾಲಿಕೆಗಳಾದರೂ ತಮ್ಮ ತಮ್ಮ ಧ್ಯೇಯ ಶಕ್ತಿ ಅನುಕೂಲಗಳಿಗೆ ಅನು ಗುಣವಾಗಿ ಬರವಣಿಗೆಯ ರೀತಿಯನ್ನು ಸಾಮಾನ್ಯ ಜನರ ತಿಳುವಳಿಕೆಯ ಮಟ್ಟಕ್ಕೆ ತರುವ ಕೆಲಸದಲ್ಲಿ ಸಹಕಾರಿಯಾಗಿದ್ದುವು. ಈ ಸಂದರ್ಭದಲ್ಲಿ ಎಂ. ಶಾಮರಾವ ಮತ್ತು ಬಾಪು ಸುಬ್ಬರಾಯರ ಸಂಪಾದಕತ್ವದಲ್ಲಿ ನಡೆದ ಕರ್ನಾಟಕ ಗ್ರಂಥಮಾಲೆಯ ಸೇವೆಯನ್ನು, ಉಡುಪಿಯಿಂದ ಹೊರಡುತ್ತಿದ್ದ ಕೃಷ್ಣಸೂಕ್ತಿಯ ಹೊಸ ಹುಮ್ಮಸ್ಸನ್ನೂ ಕೃತಜ್ಞತೆಯಿಂದ ನೆನೆಯಬೇಕಾದದ್ದು.

ಗಳಗನಾಥರು ತಮ್ಮ ಲೇಖನಕ್ಕೆ ಪ್ರಾರಂಭ ಮಾಡಿದಾಗ ಸಾಹಿತ್ಯ ಪ್ರಪಂಚದಲ್ಲಿಯ ಹಿನ್ನೆಲೆಯನ್ನು ಇದು ವರೆಗೆ ಸಾಧ್ಯವಾದಷ್ಟರ ಮಟ್ಟಿಗೆ ಸಂಗ್ರಹವಾಗಿ ವಿವರಿಸಿದ್ದಾಯಿತು. ಈ ಶತಮಾನದ ಮೊದಲು ಹತ್ತು ವರ್ಷಗಳಲ್ಲಿ ಸ್ವತಂತ್ರ ಕೃತಿಗಳು ಮೊದಲು ಮಾಡಿದ್ದಕ್ಕೆ ಗುಳವಾಡಿ ವೆಂಕಟರಾಯರ "ಇಂದಿರಾಬಾಯಿ ಅಥವಾ ಸದ್ಧರ್ಮ ವಿಜಯವು" "ಸೀಮಂತಿನಿ" ಇವುಗಳನ್ನಲ್ಲದೆ ಬೋಲಾರ ವಿಠ್ಠಲರಾಯರ ಕೃತಿಗಳನ್ನೂ ನಿರ್ದೇಶಿಸಬಹುದು. ಅಲ್ಪಾವಧಿಯಲ್ಲಿಯೇ ವಾಸುದೇವಾಚಾರ್ಯ ಕೆರೂರ ಅವರಿಂದಲೂ ಸ್ವಯಂ ನಿರ್ಮಿತಿಗೆ ಪ್ರಾರಂಭವಾಯಿತು.

ಆದರೂ ಒಟ್ಟಿನಲ್ಲಿ ಅನುವಾದವೇ ಸಾಹಿತ್ಯ ಕ್ಷೇತ್ರದಲ್ಲಿಯ ಮಹತ್ತರವಾದ ಕಾರ್ಯವಾಗಿತ್ತು. ಸ್ವತಂತ್ರ ಕೃತಿಗಳು ಹೇರಳವಾಗಿ ಬೆಳೆಯುವುದಕ್ಕೆ ಬೇಕಾದ ಕನ್ನಡತನದ ಅರಿವು, ಕನ್ನಡ ಭಾಷೆಯಲ್ಲಿನ ಸ್ವಯಂ ನಿರ್ಮಿತಿಯ ಸಾಧ್ಯಸಾಧನಗಳು ಕನ್ನಡಿಗರ ಸಾಮಾಜಿಕ ಅರಿವಿನಲ್ಲಿ ಇಳಿದು ಇಂಗಿ ಹೊರಹೊಮ್ಮಬೇಕಾಗಿತ್ತು. ಉತ್ತರ ಕರ್ನಾಟಕದಲ್ಲಿಯಂತೂ ಮರಾಠಿಯ ಪ್ರಭಾವ ಮಿತಿಮೀರಿ ಕನ್ನಡ ಭಾಷೆ ಸಾಹಿತ್ಯಗಳಿಗೆ ಯಾವ ಸ್ಥಾನಮಾನಗಳೂ ಇರಲಿಲ್ಲ. ಕನ್ನಡದ ಉದ್ಧಾರಕ್ಕಾಗಿ ಒಬ್ಬಂಟಿಯಾಗಿ ಆ ಕಾಲದಲ್ಲಿ ಹೆಣಗಿದ ಸಂಸ್ಥೆಯೆಂದರೆ ೧೮೯೦ರಲ್ಲಿ ಸ್ಥಾಪಿತವಾಗಿ ನಿಧಾನವಾಗಿ ಮುಂದುವರಿಯಲಿಸಗುತ್ತಿದ್ದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ. ಈ ಸುಮಾರಿನ ವರ್ಷಗಳಲ್ಲಿಯ ಈ ಸಂಘದ ವರದಿಗಳನ್ನೋದಿದರೆ ಕನ್ನಡ ಯಾವ ಸ್ಥಿತಿಯಲ್ಲಿತ್ತು ಎಂಬುದರ ಅರಿವು ಉಂಟಾಗಲು ಸಾಧ್ಯ. ಕರ್ನಾಟಕತ್ವದ ಅರಿವಂತೂ ದೂರವೇ ಇರಲಿ, ಕನ್ನಡವೂ ಒಂದು ಉದ್ದಾಮ ಸಾಹಿತ್ಯ ಪರಂಪರೆಯುಳ್ಳ ಭಾಷೆಯೆಂದಾಗಲಿ, ಕನ್ನಡ ನಾಡಿನಲ್ಲಿ ಹುಟ್ಟಿ ಬೆಳೆದವರು ತಮಗೊಂದು ವಿಶಿಷ್ಟವಾದ ಇತಿಹಾಸ-ಸಂಸ್ಕೃತಿಗಳಿದ್ದಿರಬಹುದೆಂಬ ಮಾತನ್ನಾಗಲಿ ಸುಶಿಕ್ಷಿತರು ಕೂಡ ಒಪ್ಪಲು ಹಿಂದು ಮುಂದು ನೋಡುತ್ತಿದ್ದ ಕಾಲ ಅದು. ವಿದ್ಯಾವರ್ಧಕ ಸಂಘದ ಹನ್ನೊಂದನೆಯ ವಾರ್ಷಿಕ ವರದಿಯಲ್ಲಿ ಭಾಷಾಸೇವೆಗಾಗಿ, ಸಾಹಿತ್ಯ ನಿರ್ಮಿತಿಯ ಉತ್ತೇಜನಕ್ಕಾಗಿ ಆ ಕಾಲದಲ್ಲಿ ಸೇವೆ ಸಲ್ಲಿಸಿದ 'ವಾಗ್ಭೂಷಣ'ದ ವಿಚಾರದಲ್ಲಿ ಈ ಮಾತು ಬರುತ್ತದೆ. "ನಮ್ಮ ಕನ್ನಡವಲ್ಲಿ ಒಂದೇ ಮಾಸಿಕ ಪುಸ್ತಕ ಇದ್ದರೂ ಅದರ ವೆಚ್ಚ ಸಾಗಿಸುವಷ್ಟು ಹಣವು ನಮ್ಮ ಬಾಂಧವರ ಕಡಿಯಿಂದ ಬರದಿರುವುದು ದುಃಖಾಸ್ಪದ ಸಂಗತಿಯಾಗಿದೆ. ತಮ್ಮ ನುಡಿಯ ಅಭಿಮಾನವೂ ತಮ್ಮ ನಾಡಿನ ಅಭಿಮಾನವೂ ಇತರರಲ್ಲಿ ಇದ್ದಂತೆ ನಮ್ಮ ಕನ್ನಡಿಗರಲ್ಲಿ ಇರುವುದಿಲ್ಲೆಂದು ಇದರಿಂದ ವ್ಯಕ್ತವಾಗುತ್ತದೆ. ಇದರಂಥ ನಾಚಿಕೆಯ ಮಾತು ಎರಡನೆಯದಿಲ್ಲ .. ಇದು ಲೋಕೋಪಯೋಗವಾಗಲೆಂತಲೆ ಕೇವಲ ಪರಾರ್ಥ ಬುದ್ಧಿಯಿಂದಲೆ ನಡೆಸಲ್ಪಡುವುದು ... ಮುಖ್ಯತಃ ಈ ಕಾಲಕ್ಕೆ ಇದು ಗ್ರಂಥಪ್ರಚಾರಕ್ಕೆ ಅಮೌಲ್ಯ ಸಾಧನವಾಗಿದೆ" ಇತ್ಯಾದಿ. ಮುಂದೆ

ಎರಡು ವರ್ಷಗಳನಂತರವಾದರೂ ಪರಿಸ್ಥಿತಿ ಬದಲಾಯಿಸಿರಲಿಲ್ಲ "ಕನ್ನಡಿಗರೂ, ಶ್ರೀಮಂತರೂ, ದೊಡ್ಡ ದೊಡ್ಡ ಅಧಿಕಾರಿಗಳೂ ವರ್ಷದವರೆಗೆ ಪುಸ್ತಕಗಳನ್ನು ಸ್ವೀಕರಿಸಿ, ಕಡೆಯ ತಿಂಗಳ ಅಂಕವನ್ನು ವ್ಹಾಲ್ಯೂಪೇಬಲ್ ದ್ವಾರ (ವರ್ಗಣಿಯ ವಸೂಲಿಗಾಗಿ) ಕಳುಹಲು ನಿರಾಕರಿಸಿದ ಎಷ್ಟೋ ಸಭ್ಯಗೃಹಸ್ಥರ ಹೆಸರುಗಳನ್ನು ತಮ್ಮೆಲ್ಲರಿಗೆ ಇಲ್ಲಿ ಹೇಳುವುದು ನಮಗೇ ಅಲಾಘವವಾದ ಮಾತು" ಇದು ಸಾಮಾನ್ಯವಾಗಿ ಆ ಕಾಲದ ವಿದ್ಯಾವಂತರು ತಮ್ಮ ಸಾಹಿತ್ಯಿಕ ಸಾಂಸ್ಕೃತಿಕ ಪ್ರಶ್ನಗಳಿಗೆ ಕೊಟ್ಟ ಉತ್ತರವೆಂದೇ ಹೇಳಬೇಕಾಗುವದು. ಉತ್ತರಕರ್ನಾಟಕದ ಮಟ್ಟಿಗೆ ಹೇಳಬೇಕಾದರೆ ಈ ಪರಿಸ್ಥಿತಿಯು ಸಂಪೂರ್ಣವಾಗಿ ಅಳಿಯಬೇಕಾದರೆ ಇನ್ನೂ ಇಪ್ಪತ್ತು ಇಪ್ಪತ್ತೈದು ವರ್ಷಗಳು ಕಳೆಯಬೇಕಾಯಿತು. ೧೯೩೫ರ ಸುಮಾರಿಗೆ ಕೂಡ ಮರಾಠಿಯ ವರ್ಚಸ್ಸು ಕುಂದುತ್ತ ನಡೆದಿತ್ತೇ ಹೊರತು ಸಂಪೂರ್ಣವಾಗಿ ಅಳಿದಿರಲಿಲ್ಲ.

ಈ ವಿಷಮ ಪರಿಸ್ಥಿತಿಯನ್ನರಿತು ಅದನ್ನು ಹೋಗಲಾಡಿಸುವುದಕ್ಕೆ ವಿದ್ಯಾವರ್ಧಕ ಸಂಘವು ಮೊದಲಿನಿಂದಲೂ ಯತ್ನಿಸುತ್ತಿತ್ತು. ಜನರಲ್ಲಿ ಸಾಂಸ್ಕೃತಿಕ ಜಾಗೃತಿ, ಸಾಹಿತ್ಯ ವಿಷಯದಲ್ಲಿ ಆದರ, ಕರ್ನಾಟಕದ ವಿವಿಧಭಾಗಗಳಲ್ಲಿಯ ಭಾಷೆಗೆ ಏಕರೂಪತೆಯನ್ನು ತರಬೇಕೆಂಬ ಯತ್ನ, ಇವೆಲ್ಲವುಗಳನ್ನೂ ಸಾಧಿಸುವ ಹಟತೊಟ್ಟು ಸಂಘವು ಬೇರೆ ಬೇರೆ ಭಾಗಗಳಲ್ಲಿಯ ಬರೆಹಗಾರರನ್ನು, ಕನ್ನಡ ಸಂಸ್ಕೃತಿಯ ಪುನರುಜ್ಜೀವನದ ಬಗೆಯಲ್ಲಿ ಆಸ್ಥೆ ಉಳ್ಳವರನ್ನು, ಒಂದೆಡೆ ಸೇರಿಸಿ ವಿಚಾರವಿನಿಮಯದ ಮೂಲಕವಾಗಿ ಹೆಚ್ಚಿನ ಕಾರ್ಯವನ್ನು ಮುಂದುವರಿಸುವ ಕೆಲಸದಲ್ಲಿ ನಂಘವು ಏರ್ಪಡಿಸಿದ ಮೊಟ್ಟಮೊದಲನೆಯ ಸಾಹಿತ್ಯಸಮ್ಮೇಳನವು ಕನ್ನಡ ಜಾಗೃತಿಯ ಇತಿಹಾಸದಲ್ಲಿಯದೊಂದು ಮಹತ್ವದ ಮೈಲುಗಲ್ಲಾಗಿದೆ. ಈ ನಮ್ಮೇಳನದಲ್ಲಿ ಅಂಗೀಕೃತವಾದ ಗೊತ್ತುವಳಿಗಳನ್ನು ನೋಡಿದರೆ ಆಗಣ ಸಾಹಿತ್ಯಪ್ರಪಂಚದಲ್ಲಿಯ ಆಗುಹೋಗುಗಳು ಯಾವರೀತಿಯಾಗಿದ್ದುವೆಂಬುದನ್ನು ನಾವು ತಿಳಿಯಬಹುದು. ಕರ್ನಾಟಕದ ಎಲ್ಲ ಭಾಗಗಳಿಗೂ ಸಮ್ಮತವಾಗುವಂಥ ಭಾಷಾಶೈಲಿಯೊಂದನ್ನು ಬಳಕೆಯಲ್ಲಿ

ತರುವ ಉದ್ದೇಶದಿಂದ ಗ್ರಂಥಗಳನ್ನು ಬರೆಯಿಸಿ ಕರ್ನಾಟಕ ಗ್ರಂಥ ಮಾಲೆಯೊಂದನ್ನು ಮೊದಲು ಮಾಡಬೇಕೆಂದೂ, ಶಾಸ್ತ್ರೀಯ ವಿಷಯ ಗಳಲ್ಲಿ ಉಪಯೋಗಿಸಬೇಕಾದ ಪಾರಿಭಾಷಿಕ ಶಬ್ದಗಳ ಬಗೆಯಲ್ಲಿ ಚರ್ಚೆ ವಿಚಾರಗಳು ನಡೆದಿರುವುದಾಗಿಯೂ ಅಲ್ಲಿಯ ಸ್ವೀಕೃತವಾದ ಗೊತ್ತುವಳಿಗಳ ಮೇಲಿಂದ ತಿಳಿಯುವಂತಿದೆ. (ಈ ಪಾರಿಭಾಷಿಕ ಶಬ್ದಗಳ ಪ್ರಶ್ನೆಯು ಇದುವರೆಗೂ ಬಗೆಹರಿಯಲಿಲ್ಲವೆಂಬುದು ನಮ್ಮ ಕರ್ತೃತ್ವ ಶಕ್ತಿಗೆ ಸಾಕ್ಷಿಯಾಗುವಂತಿದೆ!) ಮುಂದಿನ ಎರಡನೇ ಸಮ್ಮೇಳನವನ್ನು ಬೆಂಗಳೂರಿನಲ್ಲಿ ಕೂಡಿಸಬೇಕೆಂಬ ಕಾರ್ಯಕರ್ತರ ಪ್ರಯತ್ನಗಳೇ ಕನ್ನಡ ಸಾಹಿತ್ಯ ಪರಿಷತ್ತಿನ ಸ್ಥಾಪನೆಗೆ ಸ್ಫೂರ್ತಿ ಒದಗಿಸಿದವೆಂಬ ಮಾತು ವಿಶೇಷವಾಗಿ ಗಮನಾರ್ಹವಾಗಿದೆ.

ಹೀಗೆ ಹತ್ತಾರು ರೀತಿಗಳಲ್ಲಿ ಕನ್ನಡದ ಅರಿವನ್ನು ಜನರಲ್ಲಿ ಹೆಚ್ಚು ಹೆಚ್ಚಾಗಿ ಹರಡುವ ಕೆಲಸ ನಡೆದಿತ್ತು. ಒಂದೆಡೆಯಲ್ಲಿ ಈ ಪ್ರಯತ್ನವು ನಾಡಿನ ಸಂಸ್ಕೃತಿಯನ್ನು ಉಳಿಸಿಕೊಂಡು ಅದರ ಬೆಳಕಿನಲ್ಲಿ ಬಾಳ ಬೇಕೆಂಬ ಹಂಬಲಕ್ಕೆ ಎಡೆಕೊಡುತ್ತಿತ್ತಾದರೆ ಇನ್ನೊಂದೆಡೆ ಅದೇ ಹಂಬಲ ಹೊಸ ಸಾಹಿತ್ಯ ನಿರ್ಮಿತಿಯ ಸ್ವರೂಪವನ್ನು ತಳೆಯುತ್ತಿತ್ತು. ಈ ಪ್ರಯತ್ನಗಳು ಕೆಲವು ಕಡೆಯಲ್ಲಿ ಸಂಘ ಸಮ್ಮೇಳನಗಳ ಫಲವಾಗಿ ನಿಧಾನವಾಗಿ ಫಲಿಸುತ್ತ ನಡೆದವು. ಇನ್ನು ಕೆಲವು ಕಡೆಯಲ್ಲಿ ಕೆಲವಾರು ಗಣ್ಯ ವ್ಯಕ್ತಿಗಳ ವೈಯ್ಯಕ್ತಿಕ ಯತ್ನಗಳ ಫಲವಾಗಿ ಮುಂದುವರಿದವು. ಭಾಷೆ, ಸಂಸ್ಕೃತಿ, ಸಾಹಿತ್ಯಗಳ ಈ ಪುನರುಜ್ಜೀವನದ ಕೆಲಸದಲ್ಲಿ ಪರಿ ಪರಿಯಾಗಿ ಸೇವೆ ಸಲ್ಲಿಸಿದವರಲ್ಲಿ ಕಡಪಾ ರಾಘವೇಂದ್ರರಾಯರು, ರೊದ್ದ ಶ್ರೀನಿವಾಸರಾಯರು, ಮುದವೀಡು ಕೃಷ್ಣರಾಯರು, ಆಲೂರು ವೆಂಕಟರಾಯರು ಇವರ ಹೆಸರುಗಳನ್ನು ಹೇಳದಿರುವುದು ಸಾಧ್ಯವಿಲ್ಲ. ಈ ರೀತಿಯಾದ ಬಹುಮುಖ ಪ್ರಯತ್ನಗಳಿಂದ ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಹೊಸ ಆಸೆಗಳು ತಲೆದೋರಲಿಕ್ಕೆ ಅನುವಾಯಿತು. ಈ ಹೊಸ ಆಸೆಗಳ ಮೂರ್ತಸ್ವರೂಪವೇ ಗಳಗನಾಥರ ಕೃತಿಗಳೆಂದು ಧಾರಾಳವಾಗಿ ಹೇಳಬಹುದು. ಸಾಹಿತ್ಯ ಕ್ಷೇತ್ರದಲ್ಲಿ ಹೊಸದಾರಿಗಳನ್ನು

ಮೆಟ್ಟಬೇಕಾದಾಗ ಅವಶ್ಯವಿರುವ ಆತ್ಮವಿಶ್ವಾಸ ಇನ್ನೂ ಅದೇ ಹುಟ್ಟಿ ಬಲಿಯುವುದರಲ್ಲಿತ್ತು. ಅನುವಾದಗಳ ಮೂಲಕವಾಗಿ ಅಂದಿನ ಪರಿಸ್ಥಿತಿಯಲ್ಲಿ ಅನಿವಾರ್ಯವಾಗಿದ್ದ ಅರೆಭರವಸೆಯನ್ನು ಕಳೆಯಲು ಎಲ್ಲೆಡೆಯಲ್ಲಿಯೂ ಯತ್ನನಡೆದಂತೆ ಗಳಗನಾಥರಲ್ಲಿಯೂ ನಡೆದಿತ್ತು. ನಮ್ಮ ಸಾಹಿತ್ಯದ ಈ ಶತಮಾನದಲ್ಲಿಯ ಬೆಳೆವಣಿಗೆಗಳ ಇತಿಹಾಸದಲ್ಲಿ ಈ ಕಾಲ ಒಂದು ಮಹತ್ವದ ಸಂಧಿಕಾಲವೆಂದು ಹೇಳುವುದು ಈ ದೃಷ್ಟಿಯಿಂದಲೇ. ಯಾವ ಬರೆವಣಿಗೆಯಾದರೂ ಒಂದು ನಿರ್ದಿಷ್ಟವಾದ ಉದ್ದಿಶ್ಯ ಸಾಧಿಸುವಂತಹದಿರಬೇಕು, ಮನರಂಜನೆಯೊಂದಿಗೆ ಮನಸ್ಸಿನ ವಿಕಾಸವನ್ನೂ ಸಾಧಿಸಬೇಕು, ಬರೆವಣಿಗೆಯ ರೀತಿ ನಮ್ಮ ಸಂಸ್ಕೃತಿಗಳ ಬಗೆಯಲ್ಲಿ ಕುತೂಹಲಪೂರ್ವಕವಾದ ಆದರವನ್ನು ಓದುಗನಲ್ಲಿ ಹುಟ್ಟಿಸುವಂತಹದಾಗಿರಬೇಕೆಂಬ ಕೆಲವಾರು ಸರ್ವಸಮ್ಮತವಾದ ನಿಯಮಗಳು ಆ ಕಾಲದ ಬರವಣಿಗೆಯಲ್ಲಿ ವಿಶೇಷವಾಗಿ ಎದ್ದು ಕಾಣುತ್ತವೆ. ಈ ಮಾತಿಗೆ ಸಾಕ್ಷಿಯಾಗಿ ಶ್ರೀ ಗಳಗನಾಥರ ಮೊಟ್ಟಮೊದಲಿನ ಸ್ವತಂತ್ರ ಕೃತಿಯಾದ 'ಪ್ರಬುದ್ಧ ಪದ್ಮನಯನೆ' ಕಾದಂಬರಿಗೆ ಮೊದಲುಮಾತಾಗಿ ಹೇಳಿದ ಅವರ ಹೇಳಿಕೆಯನ್ನೇ ಎತ್ತಿ ತೋರಿಸಬಹುದು. ಈ ಕಾದಂಬರಿಯ ಮುನ್ನಡಿ ಆ ಕಾಲದ ಸಾಹಿತ್ಯ ಕ್ಷೇತ್ರದಲ್ಲಿಯ ಪರಿಸ್ಥಿತಿಗಳೆದುರು ಕನ್ನಡಿ ಹಿಡಿದು ಸಮಕಾಲೀನ ಸನ್ನಿವೇಶದ ಚಿತ್ರವನ್ನು ನಮಗೆ ತೋರಿಸುವಂತಹದಾಗಿದೆ. "ಪ್ರಬುದ್ಧ ಪದ್ಮನಯನೆ" ಕಾದಂಬರಿಯು ಮಾರ್ಚ ೧೮೯೮ರಲ್ಲಿ ಪ್ರಸಿದ್ಧವಾಯಿತು. ಗಳನಾಥರು ಹೀಗೆ ಬರೆಯುತ್ತಾರೆ:—

"ಓದುವವನ ಯೋಗ್ಯತೆ ಇದ್ದಂತೆ ಬೇರೆ ಬೇರೆ ಜನರಿಗೆ ಬೇರೆ ಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹಗಳಾಗುವುವು. ಶಾಸ್ತ್ರೀಯ ವಿಷಯಗಳಂಥ ಗಹನ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದದ್ದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರು ಓದುವ ಲವಲವಿಕೆಯು ನಷ್ಟವಾಗುವ ಸಂಭವವುಂಟು. ಕಾರಣ ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು

ಹುಟ್ಟಿಸಲಿಕ್ಕೂ ಉದ್ಯೋಗಾತಿಶಯದಿಂದ ಕ್ರಾಂತರಾದವರಿಗೆ ವಿಶ್ರಾಂತಿ-ಯಲ್ಲಿ ಆನಂದಗೊಳಿಸಲಿಕ್ಕೂ ಮನೋರಂಜನವಾಗಿ ನೀತಿ ಬೋಧನವಾಗುವುದಕ್ಕೂ ಉತ್ತಮ ಕಾದಂಬರಿಗಳು ಬೇಕೇಬೇಕು........ ಮಾತೃಭಾಷಾಸೇವೆಯನ್ನು ಮಾಡಲೆಳಸಿ ನಾನು ಈ ಕಾದಂಬರಿ ರೂಪವಾದ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ. ಈ ಕಾದಂಬರಿಯಲ್ಲಿ "ಪದ್ಮನಯನಾ" ಎಂಬ ಸ್ತ್ರೀಯು ಮುಖ್ಯ ನಾಯಿಕೆಯಾದ್ದರಿಂದ ಇದಕ್ಕೆ (ಆ) ಹೆಸರು ಕೊಡಲ್ಪಟ್ಟಿದೆ. ಇದರಲ್ಲಿ ಕಪಿಂಜಲನ ಯೋಗದಿಂದ ಸತ್ಸಮಾಗಮದ ಮಹತ್ವವೂ ಸುಮತಿಯ ವರ್ತನದಿಂದ ಸನ್ಮಿತ್ರನ ಮಹತ್ವವೂ ಜೀವನಕಲಾ ಪದ್ಮನಯನೆಯರ ಸ್ಥಿತಿಯಿಂದ ಸುಶಿಕ್ಷಿತರಾದ ಕುಲೀನ ಸ್ತ್ರೀಯರ ನಿರ್ಮಲಾಂತಃಕರಣವೂ, ದುಷ್ಟಬುದ್ಧಿಯ ಕುಮಾರ್ಗದಿಂದ ದುರ್ಜನರ ಕುಟಿಲತ್ವವೂ, ಕಮಲಾಕ್ಷ ಪದ್ಮನಯನೆಯರಿಗೊದಗಿದ ಪ್ರಸಂಗಗಳಿಂದ ಅಪ್ರೌಢ ವಯಸ್ಕರ ಸ್ವತಂತ್ರ ಚರಣೆಯ ದುಷ್ಪರಿಣಾಮವೂ, ಮೇಘನಾದ ಸಿಂಹನಾದರ ನಡವಳಿಯಿಂದ ತಾಮಸಪ್ರಕೃತಿಯಿಂದಾಗುವ ಹಾನಿಗಳೂ ವ್ಯಕ್ತವಾಗುತ್ತವೆ. ಈ ಕಾದಂಬರಿಯು ಮುಖ್ಯವಾಗಿ ಶೃಂಗಾರ-ವೀರ-ಶೋಕಾತದ್ಭುತರಸಪ್ರಾಧಾನ್ಯವಾಗಿರುವುದು. ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ ..... .."

ಈ ಅವತರಣಿಕೆಯ ಮೇಲಿಂದ ಗಳಗನಾಥರು ಸಾಹಿತ್ಯಸೇವೆಯನ್ನು ಪ್ರಾರಂಭಮಾಡಿದಾಗ ಕನ್ನಡಕಾದಂಬರೀ ಲೇಖನವು ಯಾವ ಹಂತದಲ್ಲಿತ್ತು, ಯಾವ ಹವಣಿಕೆಗಳನ್ನು ತನ್ನೆದುರಿಗಿರಿಸಿಕೊಂಡಿತ್ತು, ಬರೆಯುವ ರೀತಿ ಯಾವುದಾಗಿತ್ತು, ಓದುಗರ ರುಚಿ ಯಾವ ತೆರದ್ದಿದ್ದು ಯಾವ ತೆರದ ಮಾರ್ಪಾಟನ್ನು ಮುನ್ನೋಡುತ್ತಿತ್ತು, ಎಂಬ ಎಷ್ಟೋ ವಿಷಯಗಳನ್ನು ನಾವು ತಿಳಿಯಬಹುದಾಗಿದೆ. ಒಟ್ಟಿನಲ್ಲಿ ಗಳಗನಾಥರ ಕಾಲವೆಂದರೆ ಕನ್ನಡ ಕಾದಂಬರಿಯು ತನ್ನ ಶೈಶವಾವಸ್ಥೆಯನ್ನು ಬಿಟ್ಟು

ಧೈರ್ಯವಾಗಿ ಹುಮ್ಮಸಿನ ಹೆಜ್ಜೆಯನ್ನು ಮುಂದಿಕ್ಕಿದ ಕಾಲ. ಕನ್ನಡ ಕಾದಂಬರಿಯ ಇಂದಿನ ಬೆಳವಣಿಗೆಯನ್ನೂ ರೀತಿಯನ್ನೂ ನೋಡಿ ಮೆಚ್ಚಿದವರಿಗೆ ಗಳಗನಾಥರ ಕೃತಿಗಳು ಕೃತ್ರಿಮವೆನಿಸಬಹುದು. ವಾಸ್ತವಿಕತೆಯಿಂದ ದೂರವಾಗಿವೆ ಎನಿಸಬಹುದು. ಆದರೆ ಈ ತೆರನಾಗಿ ನಾವು ಪ್ರತಿಪಾದಿಸುವಾಗ ಐತಿಹಾಸಿಕ ದೃಷ್ಟಿಯಿಂದ ಕಾದಂಬರಿಯ ಬೆಳವಣಿಗೆಯನ್ನು ಮರೆತುಬಿಡುತ್ತೇವೆ. ಈ ಐತಿಹಾಸಿಕ ದೃಷ್ಟಿ ನಮಗೆ ಒಂದು ವಿಷಯವನ್ನು ಸ್ಪಷ್ಟವಾಗಿ ತಿಳಿಸುವದುಂಟು. ಅದೆಂದರೆ ಗಳಗನಾಥರ ಆ ಕೃತಿಗಳು ಆ ಕಾಲದಲ್ಲಿ ಆ ರೀತಿಯಾಗಿ ಬರದೆ ಹೋಗಿದ್ದರೆ ನಮ್ಮ ಇಂದಿನ ಕಾದಂಬರಿ ಈ ರೀತಿಯಾಗಿ ಮುನ್ನಡೆಯನ್ನು ಸಾಧಿಸುವುದೇ ಸಾಧ್ಯವಿರಲಿಲ್ಲವೆಂದು ಖಂಡಿತವಾಗಿ ಹೇಳಬಹುದು. ಇದೇ ಗಳಗನಾಥರ ಕಾಣಿಕೆ. ಇದೇ ಗಳಗನಾಥರಕಾಲದ ಮಹತ್ವ.

# ಜೀವನ ವೃತ್ತಾಂತ

ಇಂದಿಗೆ ೨೨-೪-೪೫ ಮೂರು ವರುಷಗಳಾದವು, ಶ್ರೀ ಗಳಗನಾಥರವರು ಕಣ್ಮರೆಯಾಗಿ. ಮೂರು ವರುಷಗಳ ಹಿಂದಿನ ಆ ದಿನವನ್ನು (೨೨-೪-೪೨)- ಕನ್ನಡಿಗರು ಎಂದೂ ಮರೆಯುವಂತಿಲ್ಲ. ಆ ದಿನವು ಸಾಹಿತ್ಯರಂಗದ ಸಾಹಸಿಯ ಕೊನೆಯ ದಿನವು. ಆ ಸಾಹಸಿಯ ದೇಹ ಮಾತ್ರ ಮರೆಯಾಯಿತು. ಆ ಸಾಹಸಿಯ ಕಾರ್ಯ- ಹೆಸರು ಕನ್ನಡ ನಾಡಿನ ಪ್ರತಿಯೊಂದು ಜೀವಿಯ ಮನದ ಮೇಲೆ ಅಚ್ಚೊತ್ತಿದಂತೆ ಉಳಿದಿದೆ. ಇಂದು ನಾವು ಆ ಸಾಹಸಿಯ ಪುಣ್ಯದಿನವಾಚರಿಸುವುದು ಕೂಡ ಅವರು ಮಾಡಿದ ಕಾರ್ಯದ ಮೂಲಕವೆ; ಸಾಹಸದ ಮೂಲಕವೆ. ಇಂದಿನ ಕನ್ನಡ ಚಟುವಟಿಕೆಗಳು ಇಷ್ಟು ವಿಜೃಂಭಣೆಯಿಂದ ವೈಭವದಿಂದ ನಡೆಯಬೇಕಾದರೆ ಶ್ರೀ ಗಳಗನಾಥರಂತಹ ಅನೇಕರ ಸಾಹಸ- ಸ್ವಾರ್ಥತ್ಯಾಗ— ಕನ್ನಡ ಸೇವೆ, ಇವು ತಳಹದಿಯಲ್ಲಿವೆಯೆಂಬುದನ್ನು ಯಾರೂ ಮರೆಯ ಕೂಡದು.

'ಗಳಗನಾಥ' ಎಂಬುದು ಅವರ ಕಾವ್ಯನಾಮದಂತಾಗಿತ್ತು. ಮೂಲ ಹೆಸರು ವೆಂಕಟೇಶ ತಿರಕೊ ಕುಲಕರ್ಣಿ. ಗಳಗನಾಥ ಇದು ಅವರು ಹುಟ್ಟಿದ ಊರು. ಅವರ ತಂದೆಯವರು ಆ ಊರ ಹಕ್ಕಿನ ಕುಲ- ಕರಣಿಕರು. ಕುಲಕರಣಿಕರ ಹಕ್ಕಿನ ಇತಿಹಾಸ ನೋಡಿದರೆ, ಚಾಲುಕ್ಯ ರಾಷ್ಟ್ರಕೂಟರ ಕಾಲದ ವರೆಗೆ ಹೋಗುತ್ತದೆ. ಬಹಳ ಹಳೆಯ ಮನೆತನ. ಮೊದಲಿನಿಂದಲೂ ಕನ್ನಡತನಕ್ಕಾಗಿ ಮನ್ನಣೆ ಪಡೆದ ಮನೆತನ. ಕನ್ನಡತನವು ಗಳಗನಾಥರ ರಕ್ತದಲ್ಲಿಯೆ ಇತ್ತು.

ವೆಂಕಣ್ಣನೆ ಚೊಚ್ಚಲು ಮಗ. ಶಾಲಿವಾಹನ ಶಕದ (೧೭೯೦) ವಿಭವ ಸಂವತ್ಸರದ ಪುಷ್ಯಮಾಸದ ಷಷ್ಠಿಯ ದಿನ ವೆಂಕಣ್ಣ ಹುಟ್ಟಿದನು (೧೮೬೮). ಕುಲಕರಣಿಕರ ಮನೆಯಲ್ಲಿ ಚೊಚ್ಚಲು ಸಂಭ್ರಮವೆಂದರೆ ಇಡಿ ಊರಿಗೆ ಹಬ್ಬವಾಯಿತು. ಆ ಊರಲ್ಲಿಯ ಗಳಗೇಶ್ವರ ದೇವಸ್ಥಾನದಲ್ಲಿ ಹೆಚ್ಚಿನ ಸಂಭ್ರಮದ ಪೂಜೆ ಪುರಸ್ಕಾರ ನಡೆದುವು.

ವೆಂಕಣ್ಣನ ಎಳೆಯ ವಯಸ್ಸೆಲ್ಲ ಗಳಗನಾಥದಲ್ಲಿಯೆ ಕಳೆಯಿತು. ಚಿಕ್ಕಂದಿನಲ್ಲಿ ಆ ವಾತಾವರಣದ ಪ್ರಭಾವ ಬಲವಾಗಿ ಆಯಿತು. ಗಳಗನಾಥ ಊರು ತುಂಗಭದ್ರೆಯ ತಡಿಯಲ್ಲಿದೆ. ನದಿಯ ಅಂಚಿಗೆ ಅಂಟಿಕೊಂಡು ಉನ್ನತವಾಗಿ ನಿಂತಿದೆ ಗಳಗೇಶ್ವರ ದೇವಾಲಯ ಸುತ್ತಲೂ ಗಿಡುಮರ ಗಳಿವೆ. ಅಕ್ಕ ಪಕ್ಕದಲ್ಲೆಲ್ಲ ಹೊಲಗಳಿವೆ. ನದಿಯ ಪ್ರವಾಹದ ಗುಂಟ ತುಸು ಮುಂದಕ್ಕೆ ಹೋದರೆ ವರದಾ ನದಿಯ ಸಂಗಮ ಕಾಣುವುದು. ನದಿಗೆ ನದಿ ಸೇರುವುದು ದರ್ಶನೀಯ-ರಮ್ಯ. ಈ ಎಲ್ಲ ಪರಿಸರದ ಮೂಲಕ ಗಳಗನಾಥವು ರಮ್ಯವಾಗಿದೆ. ಪವಿತ್ರವಾಗಿದೆ.

ಇಂತಹ ರಮ್ಯ ವಾತಾವರಣದಲ್ಲಿ ಬಾಲ್ಯ ಕಳೆಯಿತು. ಪ್ರಥಮ ಪಾಠಗಳು ಗಳಗೇಶ್ವರನ ಸನ್ನಿಧಾನದಲ್ಲಿಯೆ ಆದುವು. ದೇವಾಲಯ— ನದಿ ತೀರ- ಗಿಡುಮರಗಳು, ಪಾಠಕ್ರಮ, ಇವೆಲ್ಲ ಗುರುಕುಲದ ಕಲ್ಪನೆ ಯನ್ನು ಕೊಡುವಂತಿದ್ದುವು. ಹೋದ ಶತಮಾನದ ೭ನೆಯ ದಶಕದಲ್ಲಿ ಇನ್ನೂ ಪರಕೀಯರ ಪ್ರಭಾವ ಹಳ್ಳಿಗಳತನಕ ಇಳಿದಿದ್ದಿಲ್ಲ. ಶಾಲೆಗಳು ಹಳೆಯ ಸಂಪ್ರದಾಯವನ್ನೇ ಹೆಚ್ಚಾಗಿ ವೈಗೂಡಿಸಿಕೊಂಡಿದ್ದುವು. ಸಂಸ್ಕೃತ ಪಾಠಶಾಲೆಗಳ ರೀತಿಯೆ ಕಂಡುಬರುತ್ತಿತ್ತು.

ವೆಂಕಣ್ಣನಿಗೆ ಗಳಗನಾಥ ಬೇಸರು ಬಂದರೆ ಸಮೀಪದಲ್ಲಿದ್ದ ತಂಗಿಯ ಊರಿಗೆ ಹೋಗುವನು. ತಂಗಿ ದುರಗಪ್ಪನನ್ನು ಹಾವನೂರಿಗೆ ಕೊಟ್ಟಿತ್ತು. ಅದೇನು-ಬಹಳ ದೂರವಲ್ಲ- ಹಾವನೂರಾದರೂ ಚೆಂದವಾದ ಹಳ್ಳಿ. ಹಳ್ಳಿಯ ಪ್ರಶಾಂತ ವಾತಾವರಣ, ದನಕರುಗಳು ಇವು ವೆಂಕಣ್ಣನ ಮೇಲೆ ಮಾಸಲಾರದ ಅಚ್ಚೊತ್ತಿದುವು. ಮೇಲಾಗಿ ವೆಂಕಣ್ಣನನ್ನು ಎಲ್ಲರೂ ಮನ್ನಿಸುವವರೆ! ಪಾಠಶಾಲೆಯಲ್ಲಿ ಜಾಣ ಹುಡುಗನೆಂದು. ಗಳಗನಾಥದಲ್ಲಿ ಕರಣಿಕರ ಮಗನೆಂದು; ಹಾವನೂರಲ್ಲಿಯೂ ಕೂಡ ಮನ್ನಣೆಯೆ.

ಚಿಕ್ಕ ವಯಸ್ಸಿನಲ್ಲಿಯೆ ಎಲ್ಲರೂ ಮುಂದಕ್ಕೆ ಕರೆದು ಮನ್ನಿಸು ತ್ತಿದ್ದುದರಿಂದ ವೆಂಕಣ್ಣನಲ್ಲಿ ಹಿರಿದಾದ ಸ್ವಾಭಿಮಾನದ ಸೆಲೆಯೊಡೆ ಯಿತು. ಅದು ಬೆಳೆಯತೊಡಗಿತು. ವೆಂಕಣ್ಣನನ್ನು ಇಂದು ಗೌರವದ ಗಳಗನಾಥನನ್ನಾಗಿ ಮಾಡಿದುದು ಅಂದು ಚಿಕ್ಕಂದಿನಲ್ಲಿ ಸೆಲೆಯೊಡೆದ

ಸ್ವಾಭಿಮಾನವು. ಸ್ವಸಾಮರ್ಥ್ಯದ ಅರಿವು ದಿನ ದಿನಕ್ಕೆ ಪುಟ ಮಾತ್ರ ಕೊಡುತ್ತಲಿತ್ತು.

ಮುಲ್ಕಿ ಪರೀಕ್ಷೆಗಾಗಿ ಹಾವೇರಿಗೆ ಬರಬೇಕಾಯಿತು ವೆಂಕಣ್ಣನಿಗೆ. ಹಾವನೂರು ಗಳಗನಾಥಗಳಕಿಂತ ದೊಡ್ಡದು ಹಾವೇರಿ. ಆದರೂ ಹೇಳಿಕೊಳ್ಳುವಷ್ಟು ಹೆಚ್ಚಿನದೇನೂ ಇರಲಿಲ್ಲ ಆಗಿನ ಹಾವೇರಿಯಲ್ಲಿ. ಅದೂ ಒಂದು ದೊಡ್ಡ ಪ್ರಮಾಣದ ಹಳ್ಳಿ. ವ್ಯಾಪಾರ ಹೆಚ್ಚು. ಬರಹೋಗುವ ಜನ ಹೆಚ್ಚು. ಅಷ್ಟೆ.

ಮುಲ್ಕಿಯಲ್ಲಿ ಮೇಲಿನ ನಂಬರು ಬಂತು ವೆಂಕಣ್ಣನಿಗೆ. ಅದೆ ಅವನನ್ನು ಮುಂದೆ ಧಾರವಾಡದ ಟ್ರೇನಿಂಗ ಕಾಲೇಜಿಗೆ ಸೇರಿಸಿತು. ಶಿಕ್ಷಕ ವೃತ್ತಿಗೆ ಎಳೆಯಿತು. ಸಂಸ್ಕಾರದ ಸೆಳೆದಾಟವೂ ಇತ್ತು. ಏಕೆಂದರೆ, ಹುಟ್ಟಿದುದು ಬ್ರಾಹ್ಮಣರ ಮನೆತನದಲ್ಲಿ; ಗಳಗನಾಥದಂತಹ ಗುರುಕುಲ ಸಮವಾದ ವಾತಾವರಣದಲ್ಲಿ ಬೆಳೆದುದು. ಒಳಗೆ ಹುದುಗಿದ ಜಾಣತನ; ಮೊಳಕೆಯೊಡೆದ ಸ್ವಾಭಿಮಾನ. ಈ ಪ್ರಸಂಗದಲ್ಲಿ ಶಿಕ್ಷಕವೃತ್ತಿಯೆ ಸಹಜವಾದುದಾಯಿತು. ಅದಕ್ಕಾಗಿ— ಹೆಚ್ಚಿನ ಶಿಕ್ಷಣಕ್ಕಾಗಿ ಧಾರವಾಡದ ಟ್ರೇನಿಂಗ ಕಾಲೇಜ ಸೇರಿದನು ವೆಂಕಣ್ಣ.

ಧಾರವಾಡವು ವೆಂಕಣ್ಣನ ಜೀವನದಲ್ಲಿ ಮಹತ್ವದ ಸ್ಥಾನ ಪಡೆದದೆ. ಧಾರವಾಡವು ವೆಂಕಣ್ಣನನ್ನು ವೆಂಕಣ್ಣ ಮಾಸ್ತರನನ್ನಾಗಿ ಮಾಡಿತು; ಸಾಹಿತ್ಯಕ್ಷೇತ್ರದಲ್ಲಿ ಕಾಲಿಡಿಸಿತು. ಸಾಹಿತಿಯನ್ನಾಗಿಸಿತು. ಸಾಹಿತಿಯಂಗು ಮನ್ನಣೆ ಕೊಡಿಸಿತು. 'ಗಳಗನಾಥ'ರನ್ನಾಗಿ ಮಾಡಿತು.

ಧಾರವಾಡದ ಟ್ರೇನಿಂಗ ಕಾಲೇಜದ ಜೀವನವೆ ಮುಂದಿನ ಜೀವನಕ್ಕೆ ತಳಹದಿಯಾಯಿತು. ಹೊಸ ವಿಚಾರಗಳನ್ನು ಅರಗಿಸಿಕೊಳ್ಳಲು ಅನುಕೂಲವಾಯಿತು.

ವೆಂಕಣ್ಣನ ಮೆಚ್ಚಿಗೆಯ ವಿಷಯಗಳು ಗಣಿತ ಮತ್ತು ಭಾಷೆ. ಸಂಸ್ಕೃತದ ಅಭ್ಯಾಸ ಹುಟ್ಟಿದೂರಿನಲ್ಲಿಯೆ ಮೊದಲಾಗಿತ್ತು. ಬ್ರಾಹ್ಮಣ್ಯದ ಮೂಲಕ ಚೆನ್ನಾಗಿ ಬರುತ್ತಿತ್ತು. ಕನ್ನಡ ಭಾಷೆಯ ಅಭ್ಯಾಸ— ಹೆಚ್ಚಿನ ಅಭ್ಯಾಸ ಮಾತ್ರ ಧಾರವಾಡದಲ್ಲಿ ಆಯಿತು. ವೆಂಕಣ್ಣನಿಗೆ ಕನ್ನಡ ಕಲಿಸಿದವರು ಕಿತ್ತೂರ ಅಯ್ಯನವರೂ ಮತ್ತು ಮುಳಬಾಗಲ ಪಂಡಿತರು.

ಮುಳಬಾಗಲ ಪಂಡಿತರಂವರೆ ಎಲ್ಲರಿಗೂ ಪರಚಿತರಾದ—ನುಡಿಗಟ್ಟಿನ ಗ್ರಂಥಕರ್ತರಾದ ಧೋಂಡೊ ನರಸಿಂಹ ಮುಳಬಾಗಲರವರೆ!

ಟ್ರೇನಿಂಗ ಕಾಲೇಜದಲ್ಲಿ ಹೆಚ್ಚಿನ ಪ್ರಭಾವ ಬೀರಿದವರು ಶ್ರೀ ರೊದ್ದರಾಯರು ಮತ್ತು ಶ್ರೀ ಕರಂದೀಕರರು. ಕರಂದೀಕರರ ಅಚ್ಚುಕಟ್ಟುತನ ಶಿಸ್ತು ವೆಂಕಣ್ಣನ ಸೊತ್ತುಗಳಾದುವು. ರೊದ್ದರಾಯರ ವಿಶಾಲ ಹೃದಯ ವೆಂಕಣ್ಣನ ಮನ ಮುಟ್ಟಿತು. ಜಾಣತನಕ್ಕಾಗಿ ರೊದ್ದರಾಯರು ವೆಂಕಣ್ಣನನ್ನು ಮೆಚ್ಚಿದ್ದರು. ಶಿಸ್ತು–ಅಚ್ಚುಕಟ್ಟುತನಕ್ಕಾಗಿ ಕರಂದೀಕರರು ವೆಂಕಣ್ಣನನ್ನು ಆದರದಿಂದ ನೋಡುತ್ತಿದ್ದರು.

ಅಪ್ರತ್ಯಕ್ಷವಾಗಿ ಪರಿಣಾಮ ಮಾಡಿದವರು ಮಹಾರಾಷ್ಟ್ರದ ವಿಭೂತಿ ಲೋಕಮಾನ್ಯ ಟಿಳಕರು. ಮಹಾರಾಷ್ಟ್ರದ ಕಾದಂಬರಿ ಕಾರರಾದ ಶ್ರೀ ಹರಿ ನಾರಾಯಣ ಆಪ್ಟೆ ಅವರು. ಈ ಇಬ್ಬರು ತಮ್ಮ ತಮ್ಮ ವಿಚಾರಗಳನ್ನು ತಮ್ಮ ಪತ್ರಿಕೆಗಳ ಮುಖಾಂತರ ಜನರಲ್ಲಿ ಪ್ರಸಾರ ಮಾಡುತ್ತಿದ್ದರು. ಟಿಳಕರ 'ಕೇಸರಿ' ಮತ್ತು ಆಪ್ಟೆ ಅವರ 'ಕರಮಣೂಕ' ಎರಡೂ ವಾರ ಪತ್ರಿಕೆಗಳು. ವೆಂಕಣ್ಣನು ಈ ಎರಡೂ ಪತ್ರಿಕೆಗಳನ್ನು ತಪ್ಪದೆ ಓದುವ. ಗೆಳೆಯರೊಂದಿಗೆ ಚರ್ಚಿಸುವ. ಟಿಳಕರ ವಿಚಾರ ವೈಖರಿಗೆ ತಲೆದೂಗಿ ಮುಗ್ಧನಾಗುವ; ಆಪ್ಟೆಯವರ ಕಾದಂಬರಿಗಳಲ್ಲಿಯ ಕಲ್ಪನಾ ವೈಭವಕ್ಕೆ ಬೆರಗಾಗಿ ಆನಂದಬಡುವ. ಧಾರಾವಾಹಿಯಾಗಿ ಬರುತ್ತಿದ್ದ ಅವರ ಕಾದಂಬರಿಗಳನ್ನು ಓದಿ ಅರಗಿಸಿಕೊಂಡು ಮುಂದಿನ ಪ್ರಕರಣಗಳಿಗಾಗಿ ಹಾತೊರೆಯುವ, ಕಾತರನಾಗುವ. ಗೆಳೆಯರೊಡನೆ ಚರ್ಚೆಮಾಡಿ ತನ್ನ ವಿಚಾರಗಳನ್ನು ಬಲಪಡಿಸಿಕೊಳ್ಳುವ. ತಾನೂ ಅನೇಕ ಕಲ್ಪನಾಮಂಟಪ ಗಳನ್ನು ಕಟ್ಟುವ. ಕೆಲವನ್ನು ಗೆಳೆಯರೆದುರು ಉಸಿರುವ; ಬಗೆಬಗೆಯ ಕನಸು ಕಾಣುವ.

ಟ್ರೇನಿಂಗ ಕಾಲೇಜದ ಪಾಠ ಪ್ರವಚನಗಳು ವೆಂಕಣ್ಣನನ್ನು ಸತ್ಯ ಸೃಷ್ಟಿಗೆ ಜಗ್ಗುತ್ತಿದ್ದವು. ಅವುಗಳಿಗಾದರೂ ಅಷ್ಟೇ ಆಸ್ಥೆ ವಹಿಸುತ್ತಿದ್ದನು. ಕೇವಲ ಕನಸು ಕಾಣುತ್ತ ಕುಳಿತಿದ್ದರೆ, ಕೊಂಕಣಸ್ಥ ಕರಂದೀಕರರ ಆದರಕ್ಕೆ ಪಾತ್ರನಾಗುತ್ತಿದ್ದನೆ? ತನ್ನಲ್ಲಿ ಒಳ್ಳೆಯ ಶಿಕ್ಷಕನಾಗುವ ಯೋಗ್ಯತೆಯಿದೆ ಎಂಬುದನ್ನು ತೋರಿಸಿಕೊಟ್ಟಿದ್ದ ವೆಂಕಣ್ಣ. ಆದರೂ

ಕೊನೆಗೆ ವೆಂಕಣ್ಣನಿಗೆ ಸಿಕ್ಕದ್ದು ೨೦ ರೂಪಾಯಿ ಸಂಬಳದ ಸರ್ಟಿಫಿಕೆಟು. ಮೊದಲ ತರಗತಿಯ ೨೫ ರುಪಾಯಿಯ ಸರ್ಟಿಫಿಕೆಟು ಸಿಕ್ಕಬಹುದೆಂದು ಬಹು ಆಸೆ ಪಟ್ಟುಕೊಂಡಿದ್ದ. ಆದರೆ ಅದು ಸಿಕ್ಕಲಿಲ್ಲ. ಅದರ ಕಾರಣವೂ ಅವನ ಮನಸಿಗೆ ತಾಕಿತು. ಅದು ಬಹುಕಾಲದವರೆಗೆ ಮನದಲ್ಲಿ ಕೂತಿತ್ತು. ಆಗಾಗ ಹೊರಗೂ ಬರುತ್ತಿದ್ದಿತು. ಆದರೆ ಮುಂದೆ ಜೀವನದಲ್ಲಿಯ ಕೆಲ ಒಳ್ಳೆಯ ಸನ್ನಿವೇಶಗಳು ಆ ಗಾಯವನ್ನು ಮಾಯಿಸಿದುವು.

೧೮೮೯ನೆಯ ಇಸ್ವಿಯಲ್ಲಿ ೨೦ ರೂಪಾಯಿಯ ಸರ್ಟಿಫಿಕೆಟು ಪಡೆದು ಕೊಂಡು ಶಿರಗುಪ್ಪಿ ಶಾಲೆಯ ಮುಖ್ಯಾಧ್ಯಾಪಕನೆಂದು ವೆಂಕಣ್ಣ ಮಾಸ್ತರರು ಧಾರವಾಡ ಬಿಟ್ಟರು. ಧಾರವಾಡವನ್ನು ಬಿಡಬೇಕಾದಾಗ ಮನ ಮುದುಡಿಕೊಂಡಿತು. ಆದರೂ ವಿಶಾಲ ಜಗತ್ತನ್ನು ನೋಡುತ್ತೇನೆಂಬ ಆನಂದವೂ ಆಗತೊಡಗಿತು. ಕಂಡ ಕನಸುಗಳನ್ನು ಸತ್ಯ ಸೃಷ್ಟಿಗಿಳಿಸಲು ಪ್ರಸಂಗ—ಅನುಕೂಲತೆ ಒದಗಬಹುದೆಂದು ಹುರುಪು ಬರತೊಡಗಿತು.

ಕಲಿವುದು ಮುಗಿದು ನವಕರಿ ಪ್ರಾರಂಭವಾಯಿತು; ಮದುವೆಯೂ ಆಯಿತು. ಮನವೂ ನೆಮ್ಮದಿ ಪಡೆಯಿತು. ವೆಂಕಣ್ಣ ಮಾಸ್ತರು ಒಳ್ಳೆಯ ಮಾಸ್ತರು ಎಂಬ ಹೆಸರೂ ಬರತೊಡಗಿತು. ಮೇಲಧಿಕಾರಿಗಳ ಕಿವಿತನಕ ಮುಟ್ಟತೊಡಗಿತು.

ಶಿರಗುಪ್ಪಿಯಿಂದ ನರೇಂದ್ರಕ್ಕೆ ವರ್ಗವಾಯಿತು. ನರೇಂದ್ರವು ಧಾರವಾಡದಿಂದ ಬೆಳಗಾವಿ ರಸ್ತೆಯ ಮೇಲೆ ನಾಲ್ಕು ಮೈಲಿನ ಮೇಲೆ ಇದೆ. ಧಾರವಾಡದ ಸಮೀಪ ಬಂದುದರಿಂದ ಮತ್ತೆ ಹಳೆಯ ಕನಸುಗಳಿಗೆ ಪುಟ ಸಿಕ್ಕಿತು. ಟ್ರೇನಿಂಗ ಕಾಲೇಜದಲ್ಲಿದ್ದಾಗಿನಿಂದಲೆ ಆಪ್ಟೆಯವರ ಕಾದಂಬರಿಗಳನ್ನು ಓದಿ ತಾವೂ ಕಾದಂಬರಿ ಏಕೆ ಬರೆಯ ಬಾರದು ಎಂಬ ವಿಚಾರ ಸುಳಿಸುಳಿದು ಹೋಗುತ್ತಿತ್ತು. ಕಲಿಯುವದನ್ನು ಮುಗಿಸಿ ಕೊಂಡು ಧಾರವಾಡ ಬಿಟ್ಟಾಗ ಆ ವಿಚಾರವಿನ್ನೂ ಮನದಲ್ಲಿಯೇ ಇತ್ತು. ಧಾರವಾಡದಿಂದ ದೂರ ಶಿರಗುಪ್ಪಿಗೆ ಹೋದಾಗ ತುಸು ಮಾಸಿತ್ತೇನೊ ಆ ವಿಚಾರ. ನರೇಂದ್ರಕ್ಕೆ ಬಂದಾಗ ಮತ್ತೆ ಅದು ಕೊನರೊಡೆಯಿತು. ಅದಕ್ಕೆ ಇನ್ನೂ ಒಂದು ಕಾರಣವಿದೆ.

ಧಾರವಾಡದಲ್ಲಿರುವ ಕರ್ನಾಟಕ ವಿದ್ಯಾವರ್ಧಕ ಸಂಘದವರು ಗ್ರಂಥಕರ್ತರಿಗೆ ಇನಾಮು ಕೊಡುತ್ತಿದ್ದರು. ಈ ಇನಾಮಿನ ವಿಚಾರ ವೆಂಕಣ್ಣಮಾಸ್ತರ ಮನಸೆಳೆಯಿತು. ತನ್ನ ಶಕ್ತಿಗೇ ಅಳವು ತಿಳಿಯಲು ಇದೊಳ್ಳೆ ಸುಸಂಧಿ ಎಂದು ಕಾದಂಬರಿ ಬರೆಯಲು ಮೊದಲು ಮಾಡಿದರು ನರೇಂದ್ರದಲ್ಲಿ. ಕೆಲದಿನಗಳಲ್ಲಿಯೆ ಹೊರ ಬಂತು ಅವರ ಕಾದಂಬರಿ— "ಪದ್ಮನಯನೆ" ಎಂಬ ಹೆಸರಿನಲ್ಲಿ. ಅದನ್ನು ಸಂಘಕ್ಕೆ ಇನಾಮಿಗಾಗಿ ಕಳಿಸಿದುದಾಯಿತು. ಓದಿದವರೆಲ್ಲ ಮೆಚ್ಚಿದರು. ಬಹಳ ಕೊಂಡಾಡಿದರು ಶ್ರೀ "ಎಂ. ಎ." ದೇಶಪಾಂಡೆಯವರು. ಇನಾಮು ಸಿಕ್ಕಿತು; ವೆಂಕಣ್ಣ ಮಾಸ್ತರರು ಹೊಸ ಕ್ಷೇತ್ರದಲ್ಲಿ ಕಾಲಿಟ್ಟರು. ಅಲ್ಲಿಯೂ ಮೊದಲ ಹೆಜ್ಜೆಗ ಮನ್ನಣೆ. ವೆಂಕಣ್ಣ ಮಾಸ್ತರ ಮನವು ಉಬ್ಬತೊಡಗಿತು.

ನರೇಂದ್ರ ಇನ್ನೊಂದು ರೀತಿಯಿಂದ ವೆಂಕಣ್ಣಮಾಸ್ತರ ಜೀವನದಲ್ಲಿ ನೆನಪುಳಿದಿದೆ. ಇದೆ ಸಮಯದಲ್ಲಿ ಒಂದೆರಡು ವರುಷದ ಅವಧಿಯಲ್ಲಿ ವೆಂಕಣ್ಣ ಮಾಸ್ತರರಿಗೆ ಬಲವಾದ ಪೆಟ್ಟು ಬಿತ್ತು. ಮಡದಿ ತೀರಿದಳಲ್ಲದ ತಂದೆತಾಯಿಗಳು ತೀರಿದರು. ಭಾವನಾಪ್ರಧಾನ ಜೀವಿಯಾದ ವೆಂಕಣ್ಣ ಮಾಸ್ತರಿಗೆ ನರೇಂದ್ರದಲ್ಲಿರುವುದೆಂದರೆ ಅಸಾಧ್ಯವಾಗತೊಡಗಿತು ಧಾರವಾಡದ ಸಾಮೀಪ್ಯದಿಂದ ಹೊಸ ವಿಚಾರಕ್ಕೆ ಪುಟಸಿಕ್ಕುವುದೆಂದರ ಕೌಟುಂಬಿಕ ಆಘಾತದ ಮೂಲಕ ನರೆಂದ್ರವು ಅಸಹನೀಯವಾಯಿತು ಮೇಲೇರುವ ಹವಣಿಕೆಯಲ್ಲಿದ್ದಾಗಲೆ ಕಾಲು ಕುಸಿಯಿತು ವೆಂಕಣ್ಣ ಮಾಸ್ತರರು. ಈ ಅವಧಿಯಲ್ಲಿಯೆ ವಿರಕ್ತಭಾವನೆಯು ಉದಯವಾಯಿತು.

ಕೆಲದಿನಗಳಲ್ಲಿಯ ವಾತಾವರಣ ಬದಲಾಯಿತು. ವೆಂಕಣ್ಣ ಮಾಸ್ತರಿಗೆ ಉಪ್ಪಿನಬೆಟಗೇರಿಗೆ ವರ್ಗವಾಯಿತು. ಅಲ್ಲಿ ಸಂಸ್ಕೃತ ಪಂಡಿತರಾದ ಕೃಷ್ಣಶಾಸ್ತ್ರಿಗಳ ಸನ್ನಿಧಿ ದೊರೆಯಿತು. ಮತ್ತೆ ಸಂಸ್ಕೃತದ ಅಭ್ಯಾಸದ ಕಡೆಗೆ ಗುರುಕುಲದ ಪದ್ಧತಿಯ ಕಡೆಗೆ ಮನ ಸೆಳೆಯಿತು. ಮನವು ನೆಮ್ಮದಿ ಪಡೆಯಿತು. ಅಲ್ಲಿಯೆ ಹೆಚ್ಚು ಕಾಲ ಇರಬೇಕೆಂದು ಮನದಲ್ಲಿ ಮೂಡಿತು ಆದರೆ, ನವಕರಿ. ಮನದ ವಿಚಾರಕ್ಕೆ ತಕ್ಕಂತ ಇರುವ ಸ್ವಾತಂತ್ರ್ಯವೆಲ್ಲಿ? ಬಂಕಾಪುರದ ಮುಖ್ಯಾಧ್ಯಾಪಕರಾದ ಗೋವಿಂದರಾವ ಪವಣೂರ ಅವರಿಗೆ ಧಾರವಾಡಕ್ಕೆ ವರ್ಗವಾದುದರಿಂದ

ಆ ಸ್ಥಳಕ್ಕೆ ವೆಂಕಣ್ಣ ಮಾಸ್ತರು ಹೋಗಬೇಕಾಯಿತು. ಮನಸಿಲ್ಲದೆಯೂ ಉಪ್ಪಿನಬೆಟಗೇರಿಯನ್ನು ಬಿಟ್ಟರು; ಬಂಕಾಪುರಕ್ಕೆ ಹೋದರು.

ಬಂಕಾಪುರದಲ್ಲಿ ಬೇರಾವ ವಿಷಯಗಳು ಮನ ಹಿಡಿಯಲೊಲ್ಲವಾದುವು. ಗೆಳೆಯರು, ಹಿತಚಿಂತಕರು ಎರಡನೆಯ ಮದುವೆ ಮಾಡಿಕೊಳ್ಳಲು ಒತ್ತಾಯಪಡಿಸತೊಡಗಿದರು. ಆದರಿಂದ ಮನದ ಹರಿದಾಟ ಕಡಮೆಯಾಗುವದೆಂದೂ ಒಂದು ಮಾರ್ಗಕ್ಕೆ ಹತ್ತಿದಂತಾಗುವುದೆಂದೂ ಎರಡನೆಯ ಮದುವೆ ಮಾಡಿಕೊಂಡರು ವೆಂಕಣ್ಣಮಾಸ್ತರರು. ಅವರೆ ಗಂಗಾಬಾಯಿ. ಕನವಳ್ಳಿ ಅವರ ಊರು.

ಹೊಸ ಸಂಸಾರವು ಹೊಸ ಹುರುಪನ್ನೂ ತಂದಿತು. ಹಳೆಯದೆಲ್ಲವನ್ನೂ ಮರೆಯಲೇ ಬೇಕೆಂದು ಸಾರುವಂತೆ ಹಳೆಯ ಶತಕವು ಮರೆಯಾಯಿತು. ೨೦ನೆಯ ಶತಕವು ಮೊಗದೋರಿತು. ೧೯೦೦ ನೆಯ ಇಸ್ವಿ. ಆ ಹೊತ್ತಿಗೆ ವೆಂಕಣ್ಣ ಮಾಸ್ತರು ಹೆಸರು ಗಳಿಸಿದ್ದರು. ಹತ್ತು ವರುಷದ ಅನುಭವ ಪಡೆದಿದ್ದರು.

ಹೊಸ ಶತಕದಲ್ಲಿ ಎಲ್ಲವೂ ಹೊಸದಾಗಲೇಬೇಕಲ್ಲವೆ? ಪುಣೆ—ಮುಂಬಯಿ ಅಹಮದಾಬಾದಗಳಲ್ಲಿ ಹೊಸಪದ್ಧತಿಯಿಂದ ಶಿಕ್ಷಣ ಕೊಡಲಾಗುತ್ತಿತ್ತು. ಅದನ್ನು ನೋಡಿಕೊಂಡು ಕಲಿತುಕೊಂಡು ಬರಬೇಕೆಂದು ಮಾಡಿದರು ಇಲ್ಲಿಯ ವಿದ್ಯಾಖಾತೆಯವರು. ದೊಡ್ಡರಾಯರ ಈ ವಿಚಾರದಿಂದ ಪ್ರಾಂತದಲ್ಲಿ ಒಳ್ಳೆಯ ಶಿಕ್ಷಕರೆಂದು ಹೆಸರುಗಳಿಸಿದ ಶಿಕ್ಷಕರನ್ನು ಕರೆದುಕೊಂಡು ಹೋಗಬೇಕೆಂದು ನಿಶ್ಚಯವಾಯಿತು. ವೆಂಕಣ್ಣ ಮಾಸ್ತರು, ಅಮ್ಮಿನಭಾವಿ ತಮ್ಮಣ್ಣ ಮಾಸ್ತರು, ಕುಂಚೂರ ಮಾಸ್ತರು ಮತ್ತು ಮೂರನೆಯ ವರುಷದ ೫೦ ವಿದ್ಯಾರ್ಥಿಗಳು, ದೊಡ್ಡರಾಯರು ಇಷ್ಟು ಜನ ಯಾತ್ರೆ ಬೆಳೆಸಿದರು.

ಮುಂಬಯಿಯಲ್ಲಿ ಮಾಧವಬಾಗದಲ್ಲಿ ಇಳಿದುಕೊಂಡರು. ಗಿರಗಾವದಲ್ಲಿದ್ದ ಪಾರಸಿಕರ ಚಚಿಗಾರ ಶಾಲೆಯನ್ನು ಸಂದರ್ಶಿಸಿ ಅಲ್ಲಿ ನಡೆವ ಪಾಠಕ್ರಮಗಳನ್ನು ನೋಡಿದರು. ಶಿಕ್ಷಕರು ಹೇಳಿದ್ದನ್ನೆ ಪಾಠ ಮಾಡಿ ಒಪ್ಪಿಸುವ ಪದ್ಧತಿಯ ಬದಲು ಮಕ್ಕಳು ತಾವೆ ನೋಡಿ, ಅನುಭವದಿಂದ—ವಸ್ತುಪಾಠದಿಂದ ಕಲಿವ ಪದ್ಧತಿ ಅಲ್ಲಿ ಇತ್ತು. ಅಲ್ಲಿಂದ ಮುಂದೆ

ಅಹಮುದಾಬಾದಕ್ಕೆ ಪ್ರಯಾಣ ಬೆಳಸಿದರು. ಆದರೆ ದಾರಿಯಲ್ಲಿಯೆ ಇವರು ನೋಡಲು ಹೊರಟಿದ್ದ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ ತ್ರಿವೇದಿ ಅವರು ತೀರಿದ ವಾರ್ತೆ ಬಂತು. ಆದರಿಂದ ಆ ಊರ ಪ್ರಯಾಣವು ಅಪ್ಪುಸಮವಾಗಲಿಲ್ಲ. ಅಲ್ಲಿಂದ ಮುಂದೆ ಬಡೋದೆ, ಭೋರ, ಮುಂತಾದ ಸ್ಥಳಗಳನ್ನು ನೋಡಿಕೊಂಡು ಪುಣೆಯ ಟ್ರೇನಿಂಗ ಕಾಲೇಜದ ಪಾಠಕ್ರಮವನ್ನು ಮನನಮಾಡಿಕೊಂಡು ವಿಜಯಪುರದ ಮಾರ್ಗವಾಗಿ ಈ ಜತ್ತಿನ ಯಾತ್ರಿಕರ ತಂಡವು ಧಾರವಾಡ ಮುಟ್ಟಿತು.

ಮುಂದೆ ಶಿಕ್ಷಕರೆಲ್ಲ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದರು. ವೆಂಕಣ್ಣ ಮಾಸ್ತರು ಕೆಲಕಾಲ ಮುಂಡರಗಿಯಲ್ಲಿ ಕಳೆದು ಗುತ್ತಲ ಶಾಲೆಗೆ ಬಂದರು ಗುತ್ತಲ ಶಾಲೆಯನ್ನು ಮಾದರಿಯ ಶಾಲೆಯನ್ನಾಗಿ ಮಾಡಿದರು.

ಉಪ್ಪಿನ ಬೆಟಗೇರಿ ಬಿಟ್ಟನಂತರ ಗುರುಕುಲದ ವಿಚಾರ ಸುಳಿದುದು ಮತ್ತೆ ಗುತ್ತಲದಲ್ಲಿ. ಗುತ್ತಲದಲ್ಲಿ ತಮ್ಮ ಶಾಲೆಯನ್ನು ಅವರು ಒಂದು ಗುರುಕುಲವನ್ನಾಗಿ ಮಾಡಿದ್ದರು. ಮಕ್ಕಳಿಗೆ ಆ ತರಹದ ಶಿಸ್ತು-ಪಾಠ ಕಲಿಸುತ್ತಿದ್ದರು. ಈ ವಿಚಾರಕ್ಕೆ ಪುಟ ಸಿಕ್ಕುವಂತಹ ಪ್ರಸಂಗವೂ ಒಂದು ಬಂತು. ಗುತ್ತಲದ ಸಮೀಪ ಇರುವ ಅಗಡಿಯಲ್ಲಿಯ ಶ್ರೀ ಶೇಷಾಚಲ ಸ್ವಾಮಿಗಳ ಪ್ರಭಾವ ವೆಂಕಣ್ಣ ಮಾಸ್ತರರ ಮೇಲೆ ಆಗತೊಡಗಿತು. ಅದಕ್ಕೆ ಕಾರಣ ಅಲ್ಲಿಯವರೆಗೆ ಇವರಿಗೆ ಮಕ್ಕಳಾಗದಿರೋಣವೆ. ಅವರ ಸಹವಾಸ ಸೇವೆಯಿಂದ ಮಕ್ಕಳಾಗಬಹುದೆಂಬ ಭಾವಿಕತನದಿಂದ ಆಗಾಗ ವೆಂಕಣ್ಣ ಮಾಸ್ತರು ಅಗಡಿಗೆ ಹೋಗಿ ಬರುತ್ತಿದ್ದರು. ಅಗಡಿಯ ಸಳೆತ ಹೆಚ್ಚಾಗುತ್ತಿರುವ ವೇಳೆಯಲ್ಲಿಯೆ ಮತ್ತೆ ಸ್ಥಳಾಂತರ ಮಾಡುವ ಪ್ರಸಂಗ ಬಂತು. ಹೊಸ ಶಿಕ್ಷಣದ ಪದ್ಧತಿಯನ್ನು ನೋಡಿಕೊಂಡು ಬಂದ ಶಿಕ್ಷಕರನ್ನು ಧಾರವಾಡಕ್ಕೆ ಕರೆಸಿಕೊಂಡು ಅವರಿಂದ ಉಳಿದ ಶಿಕ್ಷಕರಿಗೆ ಶಿಕ್ಷಣ ಕೊಡಿಸಬೇಕೆಂಬ ಏರ್ಪಾಡು ಆದುದರಿಂದ ವೆಂಕಣ್ಣ ಮಾಸ್ತರು ಧಾರವಾಡದ ಪ್ರಾಕ್ಟೀಸಿಂಗ ಸ್ಕೂಲಿಗೆ ವರ್ಗ ಮಾಡಲ್ಪಟ್ಟರು. ಮನಸ್ಸು ಅಗಡಿಯ ಕಡೆಗೆ ಎಳೆಯುತ್ತಿತ್ತು. ನವಕರಿ ಧಾರವಾಡದ ಕಡೆಗೆ ಎಳೆಯುತ್ತಿತ್ತು. ಮೊದಲಿದ್ದ ಧಾರವಾಡದ ಸೆಳೆತ ಅಗಡಿಯ ಪ್ರಭಾವದ ಮೂಲಕ ಕಡಮೆಯಾಗಿತ್ತು. ಆದರೆ ನವಕರಿಯ ಒತ್ತಾಯ ಧಾರವಾಡಕ್ಕೆ ತಂದಿತು ವೆಂಕಣ್ಣ ಮಾಸ್ತರರನ್ನು.

ಧಾರವಾಡವು ಮತ್ತೆ ತನ್ನ ಪ್ರಭಾವ ಬೀರಿತು ವೆಂಕಣ್ಣ ಮಾಸ್ತರ ಮೇಲೆ. ಓದುವುದು ಬರೆವುದು ಪ್ರಾರಂಭವಾಯಿತು. 'ಪದ್ಯಾರ್ಥಸಾರ' "ನಿಬಂಧ ಸಂಗ್ರಹ" 'ಕನ್ನಡ ಲೇಖನ ಪದ್ಧತಿ' ಇವು ಈ ಅವಧಿಯಲ್ಲಿ ಹೊರಬಂದ ವೆಂಕಣ್ಣ ಮಾಸ್ತರ ಕೃತಿಗಳು. ಹೆಚ್ಚಾಗಿ ಅವು ಶಾಲೋಪಯೋಗಿ ಪುಸ್ತಕಗಳು.

ಆಗಿನ ಒಂದು ಸನ್ನಿವೇಶ ವೆಂಕಣ್ಣ ಮಾಸ್ತರ ಮೇಲೆ ವಿಶೇಷ ಪರಿಣಾಮ ಮಾಡಿತು. ಕರ್ನಾಟಕದ ಜನರು ಹೆಚ್ಚಾಗಿ ಮರಾಠಿ, ಪತ್ರಿಕೆ-ಪುಸ್ತಕಗಳನ್ನೆ ಓದುವುದು-ಅವುಗಳ ಬಣ್ಣನೆ ಮಾಡುವುದು, ಕನ್ನಡ ಹೀಗಳೆವುದು. ಇದಕ್ಕೆ ಕಾರಣ ಆಗಿನ ಮಹಾರಾಷ್ಟ್ರದ ವಿಭೂತಿ ಪುರುಷ ಟಿಳಕ. ಆ ವ್ಯಕ್ತಿ ಮಹಾತ್ಮೆಯ ಮೂಲಕ ಕರ್ನಾಟಕದಲ್ಲಿ 'ಕೇಸರಿ' ಪತ್ರದ ಪ್ರಸಾರ ಹೆಚ್ಚಿತ್ತು. ರಸಭರಿತ ಕಾದಂಬರಿಕಾರರೆಂದು ಆಪ್ಟೆಯವರು ಪ್ರಸಿದ್ಧಿ ಪಡೆದುದು "ಕರಮಣೂಕ" ಪತ್ರಿಕೆಯ ಮುಖಾಂತರ. ಈ ಕನ್ನಡ ಜನತೆಯನ್ನು ಮರಾಠೀ ಮೋಹದಿಂದ ಹೇಗೆ ಹೊರಳಿಸಬೇಕು ಎಂಬ ವಿಚಾರ ಆಗಾಗ ಹಣಿಕಿಕ್ಕಿ ಹೋಗತೊಡಗಿತು. ಗೆಳೆಯ ಅಮ್ಮಿನಭಾವಿ ತಮ್ಮಣ್ಣನೊಂದಿಗೆ ಚರ್ಚೆಯೂ ಆಯಿತು.

ಜನತೆಗೆ ಬೇಕಾದುದು ಮರಾಠಿ ಭಾಷೆಯೊ, ಅದರಲ್ಲಿ ಅಚ್ಚಾಗುತ್ತಿದ್ದ ವಿಚಾರವೊ? ಅದೆ ವಿಚಾರವನ್ನು ಕನ್ನಡ ಭಾಷೆಯಲ್ಲಿ ಒದವಿಸಿದರೆ ಜನ ಕನ್ನಡಕ್ಕೆ ತಿರುಗಲಿಕ್ಕಿಲ್ಲವೆ? ಅದೆ ಟಿಳಕರು ಇರಲಿ, ಅದೆ ಆಪ್ಟೆಯಿರಲಿ, ಆವರೆ ಭಾಷೆ ಕನ್ನಡವಾಗಲಿ, ಎಂದು ತಿಳಿದು ಭಾಷಾಂತರ ಮಾಡಬೇಕೆಂಬ ವಿಚಾರ ಬರತೊಡಗಿತು. ಮತ್ತು ಅದು ಕೃತಿಯಲ್ಲಿ ಬರತೊಡಗಿತು. 'ಕರಮಣೂಕ'ದಲ್ಲಿ ಧಾರಾವಾಹಿಯಾಗಿ ಬರುತ್ತಿದ್ದ ಕಾದಂಬರಿ ಪ್ರಕರಣಗಳನ್ನು ಭಾಷಾಂತರಿಸುವ ಕಾರ್ಯ ಮೊದಲಾಯಿತು.

ಆಗ ಇನ್ನೊಂದು ಸಂಗತಿಯೊದಗಿತು ಕನ್ನಡ ನಾಡಿನ ಸುದೈವದಿಂದ. ಒಳ್ಳೆ ಅಭಿಮಾನಿಯಾದ ವೆಂಕಣ್ಣ ಮಾಸ್ತರರ ಅಭಿಮಾನಕ್ಕೆ ತುಸು ಧಕ್ಕೆತಗಲಿತು. ಪ್ರಾಕ್ಟೀಸಿಂಗ ಸಾಲೆಯಿಂದ ಸಂಸ್ಕೃತದ ಅಧ್ಯಾಪಕರೆಂದು ವೆಂಕಣ್ಣ ಮಾಸ್ತರರನ್ನು ಟ್ರೇನಿಂಗ ಕಾಲೇಜದ ಶಿಕ್ಷಕ

ವರ್ಗಕ್ಕೆ ಸ್ಥಳಾಂತರಿಸಲಾಯಿತು. ಅಲ್ಲಿ ಉಚ್ಚ ಪದವೀಧರರಾದ ಶ್ರೀ ಮುಗದಾಲ ಅವರ ಕೂಡ ತುಸ ತಿಕ್ಕಾಟ ಬಂತು. ಮುಗದಾಲರು ಬಿ. ಎ. ಪದವೀಧರರು. ವೆಂಕಣ್ಣ ಮಾಸ್ತರರು ೩ ವರುಷ ಟ್ರೇಂಡ. ಉಚ್ಚ ಶಿಕ್ಷಣದ ಮುದ್ರೆಯುಳ್ಳವರೊಂದಿಗೆ ತಮಗೆ ಅಷ್ಟು ಸಮಾನ ಗೌರವ ದೊರೆಯಲಿಲ್ಲವೆಂದು ತಿಳಿದು ಈ ನವಕರಿಗೆ ತಿಲಾಂಜಲಿ ಕೊಡಬೇಕೆಂದು ಬಯಸಿದರು.

ವಿದ್ಯೆಗೆ, ಗುಣಕ್ಕೆ ಮನ್ನಣೆ ಕೊಡದೆ ಕೇವಲ ವಿದ್ಯೆಯ ಮುದ್ರೆಗೆ ಮಣೆ ಹಾಕುವ ಆ ಸಂದರ್ಭವನ್ನು ಅಭಿಮಾನಿಯಾದ ವೆಂಕಣ್ಣ ಮಾಸ್ತರು ತಡೆಯದಾದರು. ಅಧಿಕಾರಿಗಳಾಗಿದ್ದ ಶ್ರೀ. ರಾ. ಬಾ. ಕರಂದೀಕರರಿಗೆ ಹೇಳಿಕೊಂಡು ತಾವು ಸೇವಾ ನಿವೃತ್ತರಾಗಬೇಕೆಂದರು. ಅಲ್ಲದೆ ಭಾಷಾ ಸೇವೆ ಮಾಡುವುದು ನವಕರಿಯಲ್ಲಿ ಆಗದೆಂಬ ವಿಚಾರವೂ ಅವರನ್ನು ಸೇವಾ ನಿವೃತ್ತಿಗೆ ತೊಡಗಿಸಿತು.

"ನಿನ್ನ ಗುಣಕ್ಕೆ ಮನ್ನಣೆ ಸಿಕ್ಕಲಿಲ್ಲವೆ ವೆಂಕಣ್ಣ" ಎಂದು ಕರಂದೀಕರರು ಸಂತೈಸತೊಡಗಿದರು: "೧೯೦೫ ರಿಂದ ೧೯೦೭ರ ವರೆಗೆ ಪಠ್ಯ ಪುಸ್ತಕದ ಕಮಿಟಿಯಲ್ಲಿ ನನ್ನ ಜತೆಗೆ ನೀನು ಕೆಲಸ ಮಾಡಿದೆ ವೆಂಕಣ್ಣ—ಪದವೀಧರರಲ್ಲ! ವೆಂಕಟರಂಗೋ ಕಟ್ಟಿಯವರ ಪಠ್ಯ ಪುಸ್ತಕಗಳು ಗೊತ್ತುಗೆಟ್ಟಮೇಲೆ ಸಿದ್ಧವಾದ ಪಠ್ಯ ಪುಸ್ತಕಗಳು ನಿನ್ನ ಕಣ್ಣಾರಿಕೆಯಲ್ಲಿ. ನಿನ್ನ ಲೇಖನಿಯಿಂದ ಸಿದ್ಧವಾಗಿಲ್ಲವೆ? ನಿನ್ನ ಮಾತೇನು? ಪದವೀಧರರ ಮಾತೇನು? ಅನುಭವದ ಮುಂದ ಪದವಿಗಳೇನು ಮಾಡಿಯಾವು, ವೆಂಕಣ್ಣ!"

ಕರಂದೀಕರರು ಅದೆಷ್ಟು ಸಂತೈಸಿ, ಸಮಾಧಾನ ಹೇಳಿದರೂ ವೆಂಕಣ್ಣನ ಮನಸ್ಸು ನಿರ್ಧಾರ ಹೊಂದಿತ್ತು. ದಯಮಾಡಿ ಈ ನವಕರಿಯಿಂದ ನನ್ನನ್ನು ಮುಕ್ತನನ್ನಾಗಿ ಮಾಡಿರಿ, ಎಂದು ಬೇಡಿಕೊಂಡು ಕೊನೆಗೆ ೩ ಪೆನ್‌ಶನ್ (ಕೈಲಾಗದವನ ಪೆನಶನ್‌ನಿನ ಸೋಗು) ಪಡೆದುಕೊಂಡರು. ತಿಂಗಳೊಂದಕ್ಕೆ ೧೭ ರೂಪಾಯಿ ಬರುತ್ತಿತ್ತು.

ಇದೆ ಸಮಯಕ್ಕೆ ಧಾರವಾಡದಲ್ಲಿ ಗ್ರಂಥಕರ್ತರ ಸಮ್ಮೇಲನ ವೊಂದು ನಡೆಯಿತು. ಅದಕ್ಕೆ ಎಸ್. ಜಿ. ನರಸಿಂಹಾಚಾರ್ಯರು ಅಧ್ಯಕ್ಷರಿದ್ದರು. ಈ ಮಾದರಿಯ ಸಮ್ಮೇಲನವು ಸಾಹಿತ್ಯ ಸಮ್ಮೇಲನದ ಮೊದಲ

ರೂಪವು. ಅಲ್ಲಿ ಸಿಕ್ಕ ಗೌರವವು ವೆಂಕಣ್ಣ ಮಾಸ್ತರರ ಭಾಷಾಸೇವೆಯ ಸಿಧ್ಧಾರಕ್ಕೆ ಪುಟಕೊಟ್ಟಿತು. ಅಲ್ಲಿಯೆ ಆದ ಗ್ರಂಥಕರ್ತರ ಸಮ್ಮೇಲನದ ಶುಭ ಪ್ರಸಂಗದಲ್ಲಿಯು ತಮ್ಮ ಪ್ರತಿಜ್ಞೆಯನ್ನೂ ಮಾಡಿದರು; ಸಾರಿ ಹೇಳಿದರು.

ಭಾಷಾಸೇವೆ– ಗುರುಕುಲವಾಸ ಎರಡು ವೆಂಕಣ್ಣ ಮಾಸ್ತರರ ಮನ ದಲ್ಲಿ ಅಚ್ಚೊತ್ತಿಬಿಟ್ಟಿದ್ದುವು. ಈ ಎರಡು ಸಾಧ್ಯವಾಗುವ ಸ್ಥಳವಾವುದು? ಎಂದು ವಿಚಾರ ಮಾಡುತ್ತಿರುವಾಗಲೆ, ಆದರ್ಶವಾದ ಅಗಡಿಯ ಅಗ್ರಹಾರ-ಆನಂದವನವನ್ನು ತಮ್ಮ ಮುಂದಿನ ಕಾರ್ಯ ಭೂಮಿಯನ್ನಾಗಿ ಮಾಡಿಕೊಳ್ಳಬೇಕೆಂದು ಸಿಧ್ಧಾರಮಾಡಿದರು; ಆ ದಿಕ್ಕಿನಲ್ಲಿ ಕಾರ್ಯ ಮಾಡತೊಡಗಿದರು.

ಅಗಡಿಗೆ ಬಂದು ಶ್ರೀ ಶೇಷಾಚಲ ಸ್ವಾಮಿಗಳ ಆಶೀರ್ವಾದ ಪಡೆದು ಒಂದು ಪ್ರಿಂಟಿಂಗ ಪ್ರೆಸ್ ಹಾಕಿದರು ಅಗಡಿಯಲ್ಲಿ. ಅದೇ ಶ್ರೀ ಶೇಷಾಚಲ ಪ್ರೆಸ್ಸು. ಧಾರವಾಡದ ಜಠಾರ ಪ್ರೆಸ್ಸಿನಲ್ಲಿ ಕೆಲಸ ಮಾಡುತ್ತಿದ್ದ ಶ್ರೀ. ಭೀ. ಪ. ಕಾಳೆಯವರನ್ನು ಅಗಡಿಗೆ ಕರೆಸಿಕೊಂಡರು. ಆನಂದವನದ ಆವಾರದಲ್ಲಿ ಸಂಸ್ಕೃತ ಪಾಠಶಾಲೆಯನ್ನು ಪ್ರಾರಂಭಿಸಿ ದರು. ಆ ಪಾಠಶಾಲೆಯಲ್ಲಿ ನಾಲ್ಕು ವೇದದ ಅಭ್ಯಾಸ ನಡೆಯುತ್ತಿತ್ತು. ಬಿಡುವಿನ ವೇಳೆಯಲ್ಲಿ ಆಪ್ಟೆಯವರ ಕಾದಂಬರಿಗಳನ್ನು ಭಾಷಾಂತರ ಮಾಡುವುದು. ತಮ್ಮದೆ ಆದ 'ಸದ್ಬೋಧ ಚಂದ್ರಿಕೆ'ಯಲ್ಲಿ ಧಾರಾವಾಹಿ ಯಾಗಿ ಪ್ರಕಟಿಸುವುದು, ಆಮೇಲೆ ಪುಸ್ತಕಗಳನ್ನು ಮಾಡುವುದು.

ಸ್ವಲ್ಪ ದಿನಗಳಲ್ಲಿಯೆ 'ಸದ್ಬೋಧ ಚಂದ್ರಿಕೆ'ಗೆ ೭೦೦೦ದಷ್ಟು ವರ್ಗಣಿದಾರರು ಆದರು. ಹೆಚ್ಚಾಗಿ ಮೈಸೂರು ನಿಜಾಮು ಕರ್ನಾಟಕದಲ್ಲಿ ಅದರ ಪ್ರಸಾರವಾಯಿತು. ಕರ್ನಾಟಕದಲ್ಲಿಯೆ ಒಂದು ಹೊಸ ಝುರಿಯು ಹುಟ್ಟಿತು. ಮರಾಠಿ ಮುಖಾಂತರ ಕಾದಂಬರಿಗಳನ್ನೋದುವವರಿಗೆ ಕನ್ನಡದಲ್ಲಿ ಸಿಕ್ಕತೊಡಗಿತು. ತನ್ಮೂಲಕ ಕನ್ನಡದ ಅಭಿಮಾನ ಸಾವಕಾಶವಾಗಿ ಬೆಳೆಯ ತೊಡಗಿತು. ಕನ್ನಡಿಗರು ಕನ್ನಡ ಮುಖಾಂತರ ಓದುವ ಚಟವನ್ನು ಹಾಕಿದರು ವೆಂಕಣ್ಣ ಮಾಸ್ತರು—ಗಳಗನಾಥರು.

ಸದ್ಬೋಧ ಚಂದ್ರಿಕೆಯಂತೆ ಪಾಠಶಾಲೆಯಾದರೂ ಪ್ರಸಿದ್ಧಿ ಪಡೆಯಿತು. ಶ್ರೀ ರಾಘವೇಂದ್ರ ಮಠದ ಶ್ರೀ ಶ್ರೀ ಸುಶೀಲೇಂದ್ರ ಸ್ವಾಮಿಗಳು ಪಾಠಶಾಲೆಯ ಪ್ರಸಿದ್ಧಿ ಪ್ರಯೋಜನವನ್ನು ಕಂಡು ವರುಷಕ್ಕೆ ನೂರು ರುಪಾಯಿಯ ಕಾಣಿಕೆ ದಾನ ಕೊಟ್ಟರು. ಆಗ ಧಾರವಾಡದಲ್ಲಿ ಡಿ. ಡಿ. ಸಿ. ಆಗಿದ್ದ ಶ್ರೀ ಸೇನರೆಂಬ ಸಂಸ್ಕೃತ ವಿದ್ಯಾಭಿಮಾನಿಗಳು ಪಂಡಿತರು ಸರಕಾರಕ್ಕೆ ಬರೆದು ಸರಕಾರದ ಸಹಾಯವನ್ನು ಒದವಿಸಿದರು. ಪಾಠಶಾಲೆಯಲ್ಲಿ ೧೦೦ ವಿದ್ಯಾರ್ಥಿಗಳಿದ್ದರು.

ಪಾಠಶಾಲೆಯ ಕಾರ್ಯಕ್ರಮವು ಗುರುಕುಲವನ್ನು ಆದರ್ಶವಾಗಿಟ್ಟು ಕೊಂಡುದು. ಬೆಳಗಿನಲ್ಲೆದ್ದು ಸೂರ್ಯ ನಮಸ್ಕಾರ, ಅಗ್ನಿಕಾರ್ಯ ಗೋಸೇವಾ ಅವಮೇಲೆ ಪಾಠಪ್ರವಚನಗಳು ನಡೆಯುತ್ತಿದ್ದವು. ಟ್ರೇನಿಂಗ ಕಾಲೇಜದಲ್ಲಿ ಶ್ರೀ ಕರಂದೀಕರ ಹತ್ತಿರ ಕಲಿತಿದ್ದ ಶಿಸ್ತು—ಅಚ್ಚುಕಟ್ಟುತನ ಆ ಪಾಠಶಾಲೆಯಲ್ಲಿ ಬಂದು ನೋಡುಗರಿಗೆ ಒಳ್ಳೇ ಅಚ್ಚರಿಯಾಗುವಂತಿತ್ತು.

ಹನ್ನೆರಡು ವರುಷ ಕಾಲ ಅಗಡಿಯಲ್ಲಿ ವಾಸವಾಯಿತು. ಆ ಅವಧಿಯಲ್ಲಿ ಪ್ರೆಸ್ಸು, ಪಾಠಶಾಲೆ, ಮತ್ತು ಪತ್ರಿಕೆ ಇವೇ ಅವರ ಕಣ್ಣು ಮುಂದಿನ ಕಾರ್ಯಗಳಾಗಿದ್ದುವು. ಅದರ ಹೊರತು ಬೇರೊಂದು ವಿಚಾರ ಬರುತ್ತಿದ್ದಿಲ್ಲ.

ಬಹುದಿನಗಳ ಮೇಲೆ ಗಳಗನಾಥರಿಗೆ ಹೆಣ್ಣು ಮಗು ಹುಟ್ಟಿತು. ಆಗಂತೂ ಶ್ರೀ ಶೇಷಾಚಲ ಸ್ವಾಮಿಗಳ ಮೇಲೆ ಅತೀವ ಶ್ರದ್ಧೆ ಹೆಚ್ಚಿತು. ಆನಂದವನದಲ್ಲಿಯೆ ತಮ್ಮ ಆಯುಷ್ಯವನ್ನೆಲ್ಲ ಕಳೆಯಬೇಕೆಂದು ಮನ ಮಾಡಿದರು ಆದರೆ,.... ...

ಅಲ್ಲಿ ೧೨ ವರುಷಗಳ ವಾಸವಾಗುವಷ್ಟರಲ್ಲಿ ಶ್ರೀ ಶ್ರೀ ಶೇಷಾಚಲ ಸ್ವಾಮಿಗಳು ಕಾಲವಾದರು. ಆಗ ಅವರ ಶಿಷ್ಯರಾದ ನಾರಾಯಣ ಭಗವಾನರ ಜತೆಗೆ ಇವರಿಗೆ ಹೊಂದಲಿಲ್ಲ. ಅದಕ್ಕಾಗಿ ತುಸ ತಿಕ್ಕಾಟವಾಯಿತು. ಈ ತಿಕ್ಕಾಟ ತೀರಿಸಲು ಗಂಗಾಮಠದ ಸ್ವಾಮಿಗಳು ಮಧ್ಯಸ್ಥಿಕೆ ಮಾಡಿದರು. ಇಡಿ ಅಗಡಿ ಊರು ಒತ್ತಟ್ಟು, ಗಳಗನಾಥರು ಒತ್ತಟ್ಟು. ಕೊನೆಗೆ ಶ್ರೀ ಶೇಷಾಚಲ ಪ್ರೆಸ್ಸು, ಮಠದ ಸೊತ್ತಿಂದಾಗ ಗ್ರಂಥಗಳು ಗಳಗನಾಥರವೆಂದೂ ನಿರ್ಣಯವಾಗಿ, ಗಳಗನಾಥರು

ಅಗಡಿಯ ಆನಂದವನವನ್ನು ಬಿಡಬೇಕಾಯಿತು. ಹನ್ನೆರಡುವರುಷದ ತಪವೂ ಅಲ್ಲಿಯೆ ಉಳಿಯಿತು. ಆನಂದವನದಲ್ಲಿಯೆ ಅವರ ಆಯುಷ್ಯದ ಆನಂದ ಉಳಿಯಿತು.

ಆ ತಿಕ್ಕಾಟದ ನಂತರ—ಗಳಗನಾಥರು ಹಾವೇರಿಗೆ ಬಂದರು. ಅಲ್ಲಿನ ರಾಮದೇವರ ಗುಡಿಯ ಆವಾರವನ್ನೆ ತಮ್ಮ ಆಶ್ರಮವನ್ನಾಗಿ ಮಾಡಿಕೊಂಡರು. ಆ ಗುಡಿಯ ಒಡೆಯರಾದ ಮೋರೋಪಂತ ಅಭ್ಯಂಕರ ಮತ್ತು ಬದಾಮಿ ಹನುಮಂತನಾಯಕರು ಗಳಗನಾಥರಿಗೆ ಬಹಳ ನೆರವಿತ್ತರು. ಹಾವೇರಿಗೆ ಬಂದು ಮತ್ತೊಂದು ಮುದ್ರಾಲಯ ತೆಗೆದು ಕೊಂಡು 'ಸದ್ಗುರು' ಎಂಬ ಪತ್ರಿಕೆ ಪ್ರಾರಂಭಿಸಿದರು. ಅಗಡಿಯಲ್ಲಿಯ ಪಾಠಶಾಲೆಯಂತೆಯೆ ಹಾವೇರಿಯಲ್ಲಿ ಪಾಠಶಾಲೆಯೊಂದನ್ನು ಪ್ರಾರಂಭಿಸಿದರು. ಅಲ್ಲಿಯಂತೆ ಎಲ್ಲ ಉತ್ಸವಾದಿಗಳನ್ನು ಮಾಡತೊಡಗಿದರು. ನೋಡಿದವರಿಗೆ, ಹಾವೇರಿಯ ಗಳಗನಾಥರ ಆಶ್ರಮವು ಅಗಡಿ ಮತ್ತೊಂದು ಪ್ರತಿ ಎನ್ನಿಸುವಂತಿತ್ತು. ಅದೆ ಗಳಗನಾಥರ ಹೇವವನ್ನು ತೋರುವುದು. ಅಭಿಮಾನಿಯಾದವನಿಗೆ ಹೇವ ಬೇಕು. ಆದರೆ ಹೇವದ ಗುಲಾಮನಾಗಿ ಕಾರ್ಯಮಾಡತೊಡಗಿದರೆ ಮೂಲಗುರಿಯೊತ್ತಟ್ಟಿಗುಳಿದು ಹೇವವೆ ಮೇಲೆ ಬಂದು ಹೇವವು ಮಾನವನನ್ನು ನುಂಗುವುದು. ಆ ಮುಂದಿನ ಗಳಗನಾಥರ ಜೀವನವು ಹೀಗೆಯೆ ಆಯಿತು.

ಅಗಡಿಯಲ್ಲಿಯಂತೆ ಚಾಚೂ ತಪ್ಪದೆ ಎಲ್ಲವನ್ನೂ ನಡೆಯಿಸ ಬೇಕೆಂಬ ಹಟ ಬಂತು. ಅದಕ್ಕಾಗಿ ಹಣದ ಕೊರತೆ ಎನ್ನಿಸತೊಡಗಿತು. ಸಾಲ ಮಾಡಬೇಕಾಯಿತು. ಪುಸ್ತಕದ ಪ್ರಸಾರಕರು ಹಣ ಎತ್ತಿ ಹಾಕ ತೊಡಗಿದರು. ಗಳಗನಾಥರ ಭಾವಿಕತನ, ಧಾರ್ಮಿಕ ವೃತ್ತಿಗಳು ವ್ಯವಹಾರದ ರೀತಿಗಳನ್ನು ಲೆಕ್ಕಿಸದಾದವು. ಹೀಗಾಗಿ ಎಲ್ಲವೂ ತಲೆಭಾರವಾಗ ತೊಡಗಿತು.

ಅವರು ತಮ್ಮ ೬೦ ವರುಷದ ಶಾಂತಿ ಮಾಡಿಕೊಂಡಾಗ ಬಂದ ಶಾಸ್ತ್ರಿ–ಪಂಡಿತರಿಗೆ ತಕ್ಕ ಮರ್ಯಾದೆ ಸಂಭಾವನೆ ಮಾಡಿದರು. ಸಿರ್ವಂಚನೆಯಿಂದ ಮಾಡಿದರು. ಲೌಕಿಕರ ದೃಷ್ಟಿಯಿಂದ ಅದು ತಪ್ಪೆನಿಸಿತು. ತಮ್ಮ ಯೋಗ್ಯತೆಗೆ ತಕ್ಕ ಮರ್ಯಾದೆ ಮಾಡದೆ ಪಂಡಿತರ

ಯೋಗ್ಯತೆಯನ್ನೆ ಮಟ್ಟವಾಗಿರಿಸಿಕೊಂಡರು. ಅದು ಹೊರಲಾರದ ಸಾಲ ತಂದಿತು.

ಇಳಿವಯಸ್ಸಾಯಿತು. ಕಾಲ ಬದಲಾಯಿತು. ಗಳಗನಾಥರ ಪುಸ್ತಕ ಓದಿ ಹೊಸ ಪುಸ್ತಕಗಳ ಹಂಬಲ ಹೆಚ್ಚಿತು. ಹೊಸಪುಸ್ತಕಗಳು ಹೊ ಬರ ತೊಡಗಿದವು. ಆಗ ಗಳಗನಾಥರ ಭಾಷಾಂತರಗಳನ್ನು ಯಾರು ಕೇಳಬೇಕು? ಅದಕ್ಕೆಂದು ಅವರು 'ಮಾಧವ ಕರುಣಾವಿಲಾಸ' ಎಂಬ ಸ್ವತಂತ್ರ ಐತಿಹಾಸಿಕ ಕಾದಂಬರಿಯನ್ನು ಬರೆದರು. ಆದರೂ ಜನರ ಓದಿನ ಹಸಿವು ಹಿಂಗದಾಯಿತು. ಹೊಸ ಮಾದರಿಯ ಗ್ರಂಥಗಳ ಹೆಚ್ಚಾಗ ತೊಡಗಿದ್ದುದರಿಂದ ಗಳಗನಾಥರ ಗ್ರಂಥಗಳ ಕಾರ್ಯ ಮುಗಿಯಿತು. ಆದರೆ ಅವರು ಮಾಡಿದ ಸಾಲ ಮಾತ್ರ ತೀರದಾಯಿತು.

ಗಳಗನಾಥರ ಕೊನೆಯ ದಿನಗಳನ್ನು ನೆನೆದರೆ, ಕನ್ನಡಿಗರ ಬಗ್ಗೆ ಅದೆಷ್ಟು ರೋಷ ಬರುವುದೊ? ಸಾಲವೆಂದರೇನು ೧೦೦೦೦ ರದ ಒಳಗೆಯೆ ಇತ್ತು. ಅದನ್ನು ಅವರು ತೀರಿಸಲೆಂದು ಸಾಲ ತೀರಿಸುವ ಪುಸ್ತಕಗಳಿಂದ ಕೆಲವನ್ನು ಅಚ್ಚಿಸಿದರು. ಹೆಗಲಮೇಲೆ ಹೊತ್ತುಕೊಂಡು ಮನೆಮನೆಗೆ ಅಲೆದರು. ಹಣ ಹೆಚ್ಚಾಗುವುದೆಂದು ಹೋದಲ್ಲಿ ಗೆಳೆಯರ ಮನೆ ಬಾಗಿ ಹಚ್ಚಿಕೊಂಡು ಹಣ ಕೂಡಿಸಲು ಪ್ರಯತ್ನಿಸಿದರು. ಆದರೆ ಆಗ 'ಗಳಗನಾಥ'ರ ಕಾಲ ಮುಗಿಯುತ್ತ ಬಂದಿತ್ತು. ಗಳಗನಾಥರು ಹಳೆಯ ಸಾಹಿತಿಯಾಗಿದ್ದರು. ಅವರೆಡೆಗೆ ಕಣ್ಣೆತ್ತಿ ನೋಡುವರು ಇದ್ದಿಲ್ಲ. ೬೦ ವರುಷಗಳವರೆಗೆ ಅವ್ಯಾಹತವಾಗಿ ಸಾಹಸದಿಂದ ಕನ್ನಡದ ಸೇವೆ ಮಾಡಿದವನ ಸಾಲ ತೀರಿಸಲು ಕೂಡ ಕನ್ನಡ ಧನಿಕರು ಬರಬಾರದೆಂದ ರೇನು? ಅವರು ಅಂದು ಸಾಹಸ ಮಾಡದೆ—ಭಾಷಾಂತರದ ಸಾಹಸ ಮಾಡದಿದ್ದರೆ, ನವಕರಿಗೆ ತಿಲಾಂಜಲಿ ಕೊಡದಿದ್ದರೆ, 'ಸದ್ಬೋಧಚಂದ್ರಿಕೆ' ನಡೆಸದಿದ್ದರೆ—ಇಂದು ಕನ್ನಡದ ಪರಿಸ್ಥಿತಿ ಏನಾಗುತ್ತಿತ್ತೊ?

ಸಾಹಸ ಜೀವ ಗಳಗನಾಥರದು. ಆ ಕಾಲದ ಸಂಪ್ರದಾಯದಲ್ಲಿ ಬೆಳೆದವರಾದುದರಿಂದ ತುಸ ಧಾರ್ಮಿಕರಾದರು. ಅದಕ್ಕಾಗಿ ತುಸ ಅಳವು ಮೀರಿ ವೆಚ್ಚ ಮಾಡಿದರು. ಅದಕ್ಕೆ ಸಾಲವಾಯಿತು ನಿಜ. ಆದರೆ ಅವರ ಶ್ರಮದ ಫಲವಾಗಿ ಇಂದು ಕನ್ನಡನಾಡು ಮೇರೆವರಿದು ಮುಂದೆ

ಬಂದುದರ ಅರಿವು ಬಂದಾಗ ಅವರು 'ವೃಷ್ಟಿ' ಸಂಪ ಮಾಡಿದ ೪-೬ ಸಾವಿರ ರೂಪಾಯಿಯ ಸಾಲ ತೀರಿಸುವ ಹೊಣೆಗಾರಿಕೆಯನ್ನು ಕನ್ನಡ ಸಮಾಜ ಹೊರಬಾರದಿತ್ತೇನು?

ಈಗ ಅದೆಲ್ಲ ಏನು ಪ್ರಯೋಜನ? ಸಾಹಸದ ರೀತಿಯನ್ನು ನೆನೆದಾಗ ಮೈಗೆ ನವಿರು ಬರುವುದು. ಅವರು ಮುಪ್ಪಿನ ವಯಸ್ಸಿನಲ್ಲಿಯೂ ವಿರೂಪಾಕ್ಷನ ಗೋಪುರದೆತ್ತರಷ್ಟು ಪುಸ್ತಕದ ಗಂಟನ್ನು ಹೆಗಲ ಮೇಲೆ ಹೊತ್ತು ಕೈಯಲ್ಲಿ ಹಿಡಿದು ಬರಗಾಲಿನಿಂದ ದಾರಿಸವೆದು ಸಾಲ ತೀರಿಸಿಯೆ ತೀರುವೆನೆಂಬ ಹಟದಿಂದ ಕನ್ನಡನಾಡಿನಲ್ಲಿ ಅಡ್ಡಾಡುವುದನ್ನು ನೋಡಿದಾಗ ಕರಳು ಕಿತ್ತಿ ಕೈಯಲ್ಲಿ ಕೊಟ್ಟಂತಾಗುತ್ತಿತ್ತು? ಕನ್ನಡ ಭಾಷೆಗಾಗಿ ತನುಮನಧನವನ್ನೆಲ್ಲ ಅರ್ಪಿಸಿದ ಗಳಗನಾಥರ ಸಾಹಸ ಜೀವನವೆ ಧನ್ಯ! ಅವರನ್ನು ಅಷ್ಟು ಕಷ್ಟಪಡಿಸಿ, ಕೊನೆಗೆ ಅದರ ಭಾರಕ್ಕೆ ಬಾಗಿ ಗತಿಸುವಂತೆ ಮಾಡಿದ ಕನ್ನಡಿಗರು ಮಾತ್ರ ಹತಭಾಗ್ಯರು.

ಕನ್ನಡ ಸೇವೆಯ ಹುರುಪು ಎದೆಯಲ್ಲಿ; ಅದರ ಭಾರ ತಡೆವ ಸಾಮರ್ಥ್ಯ ಮೈಯಲ್ಲಿ ಬಾರದ್ದರಿಂದ ಕೊನೆಗೆ ಕ್ಯಾನ್ಸರಕ್ಕೆ ಆಹುತಿಯಾದರು ಶ್ರೀ ಗಳಗನಾಥರು ೧೯೪೨ರ ಏಪ್ರಿಲ ತಿಂಗಳ ೨೨ನೆಯ ದಿನ ಬೆಂಗಳೂರ ವಿಕ್ಟೋರಿಯಾ ಆಸ್ಪತ್ರಿಯಲ್ಲಿ.

ಈಗ ನಡೆಸುವ ಸ್ಮಾರಕದಿನಗಳ ಸುಳಿವು ಗಳಗನಾಥರ ಆತ್ಮಕ್ಕೆ ಸುಸು ತಾಕಿದರೆ, ಹಾಯೆಂದೀತು ಆ ಜೀವ! ಗಳಗನಾಥರ ಸಾಹಸ ಜೀವನ!

# ಕೃತಿಗಳು

ಶ್ರೀ ಗಳಗನಾಥರ ಈ ಮೂರನೆಯ ಪುಣ್ಯತಿಥಿಯ ದಿವಸ ಅವರ ಕೃತಿಗಳ ಒಂದು ಪರಿಚಯಾತ್ಮಕವಾದ ಪ್ರಬಂಧವನ್ನು ಬರೆಯುವ ಸುಯೋಗವು ನನಗೆ ದೊರೆತಿದುದು ನನ್ನ ಭಾಗ್ಯವೆಂದೇ ನಾನು ಭಾವಿಸುವೆ. ಅವರ ಕೃತಿಗಳ ವಿಷಯವಾಗಿಯೆ ಆಗಿ ಎಷ್ಟೆ ಚಿಕ್ಕ ಪ್ರಬಂಧವನ್ನು ಬರೆಯಬೇಕೆಂದರೂ ಅದೊಂದು ದೊಡ್ಡ ಲೇಖನವೇ ಆಗಬೇಕಾಗುವದು. ಯಾಕೆಂದರೆ ಶ್ರೀ ಗಳಗನಾಥರ ಬರೆಹ ಎಂದರೆ ಅದೊಂದು ಮಹಾ ಸಾಗರವಿದ್ದಂತೆ. ಆ ಸಮುದ್ರದಲ್ಲಿ ಹುಡಿಕಿದಷ್ಟು ಹೊಸ ಹೊಸ ಮುತ್ತುಗಳು ಹೊರಡುವವು: ಅದನ್ನು ಕಡೆದಷ್ಟು ತರತರದ ಕೌಸ್ತುಭಗಳು ಅದರೊಳಗೆ ಕಾಣಿಸುವವು. ಅಂತೆಯೆ ಇಂದು ನಾನು ಅವರ ಕೃತಿಗಳ ವಿಷಯವಾಗಿ ವಿಮರ್ಶಾತ್ಮಕವಾದ ನಿಬಂಧವನ್ನು ಪ್ರಯತ್ನಿಸದೆ ಕೇವಲ ಪರಿಚಯದ ಒಂದೆರಡು ಮಾತುಗಳನ್ನು ಮಾತ್ರ ತಿಳಿಸಬಯಸುತ್ತೇನೆ.

ಶ್ರೀ ಗಳಗನಾಥರ ಕೃತಿಗಳಲ್ಲಿ ಮೊದಲು ಸ್ಥೂಲವಾಗಿ ಮೂರು ವಿಭಾಗಗಳನ್ನು ಮಾಡಬಹುದು. ಒಂದನೆಯದಾಗಿ ಸ್ವತಂತ್ರ ಕೃತಿಗಳು, ಎರಡನೆಯದಾಗಿ ಅನುವಾದಗಳು ಮತ್ತು ಕೊನೆಯದಾಗಿ ಪತ್ರಿಕಾ ಲೇಖನಗಳು. ಅವರು ಮೊತ್ತ ಮೊದಲು ತಮ್ಮ ಲೇಖನಕಾರ್ಯವನ್ನು ಆರಂಭಮಾಡಿದುದು ಅವರ 'ಪದ್ಮನಯನೆ'ಯೆಂಬ ಕಾದಂಬರಿಯಿಂದ. ಆದರೂ ಸಹಿತ ಈ ಕೃತಿಗೆ ಮೂಲ ಪ್ರೇರಣೆಯೆಂದರೆ ಅವರ ವಾಚನ ಎಂದು ಹೇಳಬಹುದು; ಅದರಲ್ಲಿಯೂ ಮಹಾರಾಷ್ಟ್ರ ಭಾಷೆಯಲ್ಲಿ ಹೊರಡುತ್ತಿರುವ ಕೇಸರಿ, ಕರಮಣೂಕ ಎಂಬ ಪತ್ರಿಕೆಗಳು ಮತ್ತು ಮಿಕ್ಕ ಕಾದಂಬರಿ ಇವುಗಳ ಲೋಕಪ್ರಿಯತೆಯನ್ನು, ಅವುಗಳು ಜನರ ಜೀವನದ ಮೇಲೆ ಮಾಡುತ್ತಿರುವ ವಿಶಿಷ್ಟವಾದ ಪರಿಣಾಮವನ್ನು ಕಂಡು, ನಮ್ಮ ಜನರನ್ನು ಆ ಬಗೆಯಾಗಿ ಪ್ರೇರೇಪಿಸಬೇಕು ಎಂಬ ಉದಾತ್ತಭಾವನೆಯಿಂದ ಅವರು ತಮ್ಮ ಲೇಖನಕಾರ್ಯಕ್ಕೆ ಕೈಹಾಕಿದರು. ಅದರಂತೆಯೆ ಎಂದಾದರೊಮ್ಮೆ ಹೊರಬೀಳುವ ಪುಸ್ತಕಗಳಿಗಿಂತ ನಿಯಮಿತವಾಗಿ

ಸುನಿರ್ದಿಷ್ಟವಾದ ಆಲೋಚನೆ ಅಭಿಪ್ರಾಯಗಳಿಂದ ತುಂಬಿದ ಪತ್ರಿಕೆಗಳಿಂದ ತಮ್ಮ ಉದ್ದೇಶ ಸಾಧನೆಯು ಹೆಚ್ಚು ಸುಗಮವಾಗಬಹುದು ಎಂಬ ವಿಚಾರದಿಂದ ಅವರು ಮೊದಮೊದಲು ಸದ್ಬೋಧಚಂದ್ರಿಕೆ ಆಮೇಲೆ ಸದ್ಗುರು ಎಂಬ ನಿಯತಕಾಲಿಕೆಗಳನ್ನು ಹೊರಡಿಸುತ್ತಿದ್ದರು.

ಇನ್ನು ಅವರು ಬರೆದ ಸ್ವತಂತ್ರ ಕೃತಿಗಳಲ್ಲಿಯೆ ಕತೆಗಳು. ಕಾದಂಬರಿಗಳು, ಪೌರಾಣಿಕ ಗ್ರಂಥಗಳು ಎಂಬಂತೆಯೆ ಅವರು ಮಾಡಿದ ಭಾಷಾಂತರಗಳಲ್ಲಿಯಾಗಲಿ, ಲೇಖನಗಳಲ್ಲಿಯಾಗಲಿ ನಾವು ಅದೇ ಬಗೆಯ ವಿಭಾಗಗಳನ್ನು ಮಾಡಬಹುದು. ಸಣ್ಣಕತೆಗಳ ಪ್ರಮಾಣ ಮತ್ತು ಪೌರಾಣಿಕ ಗ್ರಂಥಗಳ ಸಂಖ್ಯೆಯು ಅವರ ಕಾದಂಬರಿಗಳೊಡನೆ ಹೋಲಿಸಿ ನೋಡಿದಾಗ್ಗೆ ಸಣ್ಣದೆನಿಸಿದರೂ ಅವುಗಳ ಪರಿಣಾಮದ ದೃಷ್ಟಿಯಿಂದ ನೋಡಿದಲ್ಲಿ ಹಾಗು ಅವುಗಳು ನೀಡಿದ ಸೇವೆ, ಹರಡಿದ ಸಂತಸ, ಬೀರುತ್ತಿರುವ ಆನಂದ ಇವುಗಳನ್ನು ಲಕ್ಷ್ಯಕ್ಕೆ ತಂದುಕೊಂಡರೆ ಅವುಗಳ ಸ್ಥಾನವು ಎಷ್ಟು ಮಹತ್ವದ್ದು ಎಂಬುದು ತಾನೇ ಸ್ಪಷ್ಟ ವಾಗುವದು.

ಅವರ ಲೇಖನಕಾರ್ಯವು ಕೇವಲ ಪ್ರಾಸಂಗಿಕವಾಗಿರಲಿಲ್ಲ; ಇಲ್ಲವೆ ಪ್ರಚಾರಕವಾದುದಿರಲಿಲ್ಲ ಮೊದಲು ಬರೆಯಲಿಕ್ಕೆ ಮನಸ್ಸು ಮಾಡುವಾಗ್ಗೆ ಅವರು ಒಂದು ಉದಾತ್ತವಾದ ಭಾವನೆಯಿಂದ, ದಿವ್ಯ ವಾದ ಆದರ್ಶದಿಂದ, ಅದ್ಭುತವಾದ ದೃಷ್ಟಿಯಿಂದ, ಆ ಕಾರ್ಯದಲ್ಲಿ ಧುಮುಕುವದು ಎಂದು ನಿರ್ಧರಿಸಿದರು ಎಂದು ಹೇಳಬಹುದು. ಜನರನ್ನು ಜಾಗ್ರತಗೊಳಿಸಬೇಕು; ಜನರಲ್ಲಿ ಪ್ರೇಮ, ದಯೆ, ತ್ಯಾಗ, ಸ್ವಾತಂತ್ರ್ಯ, ಸ್ವಾಭಿಮಾನಗಳು ಒಡಮೂಡಬೇಕು, ನೆಲೆನಿಲ್ಲಬೇಕು, ಬೆಳಬೆಳಗಬೇಕು ಎಂಬುದೇ ಅವರ ಹೆಗ್ಗುರಿಯಾಗಿತ್ತು. ಇತ್ತ ಕಲ್ಪನೆಗಳ ಕನಸನ್ನು ಕಾಣುತ್ತ ಮಳಲಿನ ಮೇಲೆ ಮಂದಿರವನ್ನು ಕಟ್ಟುವ ಕೆಲಸಗೇಡಿ ಗಳಾಗಿರಲಿಲ್ಲ; ಅವರು ತಮ್ಮ ಆದರ್ಶವನ್ನು ಪಡೆಯಬೇಕಾದರೆ ಮೊದಲು ಏನು ಮಾಡಬೇಕು ಎಂಬ ಪ್ರತ್ಯಕ್ಷಪ್ರಶ್ನೆಗಳ ಕಡೆಗೇ ಅವರು ತಮ್ಮ ಹೆಜ್ಜೆಯನ್ನು ಹೊರಳಿಸಿದರು. ಮೊದಲು ಆಕರ್ಷಕವಾದ ಬರೆಹ, ಹೊತ್ತಗೆಗಳಿಂದ ಜನರಲ್ಲಿ ಓದುವ ಅಭ್ಯಾಸವನ್ನು ಕಲ್ಪಿಸಬೇಕು;

ಆಮೇಲೆ ಅವುಗಳಲ್ಲಿ ನಿರೂಪಿತವಾದ ವಿಷಯಗಳ ಕಡೆಗೆ ಅವರ ಚಿತ್ತವನ್ನು ಸೆಳೆದು, ಅವುಗಳ ಬಗೆಯಲ್ಲಿ ಜನರು ತಮ್ಮ ತಮ್ಮಲ್ಲಿಯೆ ಚರ್ಚೆಮಾಡ ಹತ್ತಬೇಕು. ಆಮೇಲೆ ಜನರು ತಾವಾಗಿಯೆ ಆ ಯೋಚನೆಗಳ ಪ್ರಚಾರ ನಡೆಯಿಸಿ ಕಾರ್ಯದಲ್ಲಿ ಧುಮುಕಬೇಕು. ಆದರ್ಶವನ್ನು ನಿಲಿಸಬೇಕು ಎಂಬುದೇ ಅವರ ಕಾರ್ಯಮಾರ್ಗವಾಗಿತ್ತು ಎಂದು ಧಾರಾಳವಾಗಿ ಹೇಳಬಹುದು. ಅದಕ್ಕಾಗಿಯೆ ಅವರು ಮೊದಲಾಗಿ ಕತೆಗಳು, ಕಾದಂಬರಿಗಳು, ಪತ್ರಲೇಖನಗಳು ಮುಂತಾದ ಮಾಧ್ಯಮಗಳಿಂದ ಜನರಲ್ಲಿ ಜಾಗ್ರತಿಯನ್ನುಂಟುಮಾಡುತ್ತ ಮೆಲ್ಲನೆ ಅದರೊಳಗಿನ ದಿವ್ಯಸಂದೇಶದ ಹುಚ್ಚನ್ನು ಜನರಿಗೆ ಹಿಡಿಸಿದರು. ಅವರ ಕಾದಂಬರಿಗಳಲ್ಲಿ, ಅದರಲ್ಲಿಯೂ ವಿಜಯನಗರಕಾಲದ ಕಾದಂಬರಿಗಳಲ್ಲಿ, ರಜಪೂತವೀರರ ಭವ್ಯಕಥನಗಳಲ್ಲಿ, ಮರಾಟರ ಯುಕ್ತಿಪೂರ್ಣ ರಹಸ್ಯಗಳಲ್ಲಿ ಒಡೆದುಕಾಣುವ, ಸಾರಿಹೇಳುವ, ಕೂಗಿ ತಿಳಿಸುವ ಅನೇಕ ಗುಣಗಳು ಜನರಲ್ಲಿ ಶತಾಂಶದಲ್ಲಿಯಾದರೂ ಮೂಡಿದರೆ ನನ್ನ ಕೆಲಸ ಧನ್ಯ ಎಂಬುದು ಅವರ ಭಾವನೆಯಾಗಿತ್ತು.

ಅದೇ ಮೇರೆಗೆ ಅವರ ಕೃತಿಗಳ ಕಥಾನಕಗಳ ವಿಷಯವಾಗಿಯೂ ನಾವು ತ್ರಿಕಾಲಗಳಂತೆ ಪುರಾಣಗಳು, ಚರಿತ್ರೆ ಮತ್ತು ಸಮಾಜ ಎಂಬ ಮೂರು ಹಿಂದು--ಇಂದು--ಮುಂದು ಎಂಬ ಭಾಗಗಳನ್ನು ಮಾಡಬಹುದು. ಪುರಾಣಗಳೆ ಅವರ ಕಣಜ ಎಂದರೂ ಸಲ್ಲುವದು. ಮೊದಲ ಪಾಠಗಳು ಆದರ್ಶವಾದ ರೀತಿಯಲ್ಲಿ ಗುರುಕುಲದಲ್ಲಿ ದೊರೆತುದರಿಂದ, ಸಾಮಾನ್ಯವಾಗಿಯೆ ಅವರಿಗೆ ಸಂಸ್ಕೃತ ಸಾಹಿತ್ಯವು ಕರಗತವಾಗಿತ್ತು; ಪುರಾಣಗಳು ಪುಣ್ಯಕಥೆಗಳು ಮನೋಗತವಾದಂತೆಯೆ ಇದ್ದುವು. ಇನ್ನು ಪ್ರಚಲಿತ ಸಾಹಿತ್ಯದ ಅಭ್ಯಾಸಬಲದಿಂದ ಮತ್ತು ಸ್ವಂತದ ಅವಲೋಕನೆಯ ಸಹಾಯದಿಂದ ಮಾಡಿಕೊಂಡ ಅಭಿಪ್ರಾಯಗಳಿಂದ ಅವರಿಗೆ ಒಂದು ಕಡೆಯಿಂದ ಮರಾಟ--ರಜಪೂತ--ಕನ್ನಡಿಗರ ಇತಿಹಾಸವೂ, ಇನ್ನೊಂದು ಕಡೆಯಿಂದ ಸುತ್ತಲಿನ ಸಮಾಜವೂ ಅನೇಕ ಬಗೆಯಿಂದ ಸ್ಫೂರ್ತಿಯು ಬಗ್ಗೆಯಾದಂತೆ ಅಣಿಯಾದುವು. ಯಾವುದೇ ಕಥಾನಕ, ವಾತಾವರಣ, ಸನ್ನಿವೇಶ ಇಲ್ಲವೆ ಪಾತ್ರರಚನೆಯನ್ನು ಕೈಕೊಳ್ಳಲಿ, ತಮ್ಮ ಉದ್ದೇಶವನ್ನು

ಮಾತ್ರ ಅವರು ಎಂದೂ ಮರೆಯುತ್ತಿರಲಿಲ್ಲ; ಮಾಸಿಸುತ್ತಿರಲಿಲ್ಲ. ಎಂಬ ಒಂದು ಮಾತು ಮಾತ್ರ ಅವರ ಕೃತಿಗಳ ವಿಷಯದಲ್ಲಿಯೆ ಮುಖ್ಯವಾದುದು.

ಇಲ್ಲಿ ಶ್ರೀ ಗಳಗನಾಥರು ತಮ್ಮ ಆಯುಷ್ಯದ ಕೊನೆಯ ಭಾಗದಲ್ಲಿ ಪೌರಾಣಿಕ ಗ್ರಂಥಗಳನ್ನು ಬರೆಯುವ ವಿಷಯವಾಗಿ ಹೇಗೆ ಉತ್ಸುಕರಾಗಿದ್ದರು, ಅದೇಕೆ ಹುಚ್ಚರಾಗಿದ್ದರು ಎಂಬ ಬಗೆಯಲ್ಲಿ ಒಂದೆರಡು ಸಂಗತಿಗಳನ್ನು ಹೇಳಬಹುದು. ಮೊದಲಿನ ದಿನಗಳಲ್ಲಿ ಕೇವಲ ಕತೆ-ಕಾದಂಬರಿಗಳನ್ನು ಬರೆದ. ಆಗಿನ ಮಟ್ಟಿಗೆ ಜನರಲ್ಲಿ ಅಭಿರುಚಿಯ ಮಟ್ಟವು ಏರುವಂತೆ ಹೆಣಗಿದ್ದರೂ, ಶ್ರೀ ಗಳಗನಾಥರಿಗೆ ಅದರಿಂದ ಎಷ್ಟೊ ಸಮಾಧಾನವಾಗಲಿಲ್ಲ ಎಂಬುದು ಈ ಭಾಗದಲ್ಲಿನ ಅವರ ಮಾನಸಿಕ ವಿಪ್ಲವವೆ ನಿದರ್ಶಕ. ಕಾದಂಬರಿಗಳನ್ನು ಬರೆದರು; ಕತೆಗಳನ್ನು ಕಲ್ಪಿಸಿದರು; ಮಾಸಿಕಗಳನ್ನು ನಡೆಯಿಸಿದರು. ಆದರೆ ಕೊನೆಗೆ ಮನಸಿನಲ್ಲಿ ಅಸಮಾಧಾನವು ಸ್ಥಿರವಾಗಿಯೆ ಉಳಿಯಿತು. ಇಲ್ಲಿಯವರೆಗಿನ ಕಾರ್ಯ ಕೇವಲ ಪ್ರಾಥಮಿಕ, ಪ್ರಾಸ್ತಾವಿಕ ಎಂಬುದು ಅವರಿಗೆ ಮನಗಂಡಿತ್ತು. ಇನ್ನು ಮಾಡಬೇಕಾದ ಕಾರ್ಯ ಮುಂದಿದೆ; ಮಹತ್ವದ್ದಾಗಿದೆ ಎಂಬುದು ಅವರ ಮನಸ್ಸನ್ನು ಸಂತತವಾಗಿ ಕಟೆಯುತ್ತಿತ್ತು ಎನ್ನಬಹುದು. ಅಂತೆಯೆ ಅಸಂಖ್ಯ ಕಾಲ್ಪನಿಕ, ಚಾರಿತ್ರಿಕ ಗ್ರಂಥಗಳನ್ನು ಬರೆದು, ಅವುಗಳ ಸಾವಿರಾರು ಪ್ರತಿಗಳನ್ನು ಜನರಿಗೆ ನೀಡಿ ಅವರಲ್ಲಿ ಓದುವ ಚಟವನ್ನು ಉದ್ಭವಿಸಿದ ಅವರು ಆ ಅಭ್ಯಾಸವನ್ನು ಮುಂದಿನ ಆಕಾಂಕ್ಷೆಯ ಪೂರ್ತಿಗಾಗಿ ಅಣಿಮಾಡಿಕೊಳ್ಳಲು ಆತುರ ಪಡುತ್ತಿದ್ದರು. ಅಂತೆಯೆ ಅವರ ಜೊತೆಯಾಗಿಯೆ ಅವರು ಅಗಡಿಯ ಆನಂದವನದಲ್ಲಿ ಸಂಸ್ಕೃತ ಪಾಠಶಾಲೆಯನ್ನು ನಡೆಯಿಸಿ, ಅಲ್ಲಿಯೆ ತಮ್ಮ ಆ ಧ್ಯೇಯವನ್ನು ಕೂಡ ಅವ್ಯಾಹತವಾಗಿ ಸಾಗಿಸಿದ್ದರು. ಅದರ ಪರಿಣಾಮವಾಗಿಯೆ, ಎಷ್ಟೆ ಕಷ್ಟಗಳು ಒದಗಿದ್ದರೂ, ಎಂತಹ ಗುಡ್ಡದಂತಹ ವಿಪತ್ತುಗಳು ಬಂದಿದ್ದರೂ, ಪುಸ್ತಕಗಳನ್ನು ಬರೆದು ತಲೆಯ ತುಂಬ ಸಾಲದ ವಿಚಾರಗಳನ್ನು ಕಟ್ಟಿಕೊಂಡಿದ್ದರೂ ಅವರು ತಮ್ಮ ಆದರ್ಶವನ್ನು ಮಾತ್ರ ಬಿಡಲಿಲ್ಲ. ಅವರು ಬರೆದ ಮಹಾಭಾರತಾಮೃತದ ಆದಿಪರ್ವದ ಪೀಠಿಕೆ

ಯಲ್ಲಿಯ ಕೆಲವಂಶಗಳು ಈ ಅವರ ದೃಢನಿಶ್ಚಯದ ದ್ಯೋತಕವಾಗಿವೆ. ಅವರು ಮಹಾಭಾರತಾಮೃತವನ್ನು ಬರೆಯತೊಡಗುವ ಯತ್ನಕ್ಕೆ ಮೂರ ಬಾಧೆಗಳಿವೆ ಎಂದು ಹೇಳುವಾಗ್ಗೆ ಮೂರನೆಯದಾದ ಬಾಧೆಯನ್ನು ಇಲ್ಲಿ ಎತ್ತಿ ತೋರಿಸಬಹುದು.

ಪುಟ ೩೧. "ಈ ವರೆಗೆ ಭಾರತವನ್ನು ಬರೆಯ ತೊಡಗಿದವರ ಬಹುಶಃ ಅದನ್ನು ಪೂರ್ಣ ಮಾಡಿರುವದಿಲ್ಲವೆಂಬುದೊಂದು ದೊಡ್ಡ ಅಪಕೀರ್ತಿಯು ಆ ಕೆಲಸ ಮಾಡುವವರಿಗೆ ಗುಡ್ಡದಂತೆ ಅಡ್ಡಬರುತ್ತದೆ. ಅಂದಬಳಿಕ ನಾವು ಕೈಕೊಂಡ ಕಾರ್ಯವು ಅಶಕ್ಯವೆಂಬುದರಲ್ಲಿ ಸಂಶಯವೇನು?" ಅದೇ ಸಮಯದಲ್ಲಿ ಅವರ ಕುಟುಂಬದಲ್ಲಿ ಒಂದೆರಡ ಅನಿಷ್ಟವಾದ ಸಂಗತಿಗಳು ಘಟಿಸಿದವು. ಅವರ ಇಬ್ಬರು ಮೊಮ್ಮಕ್ಕಳ ಅತ್ಯಲ್ಪವಾದ ಅವಧಿಯಾದ ನಾಲ್ಕು ತಿಂಗಳಲ್ಲಿ ಕಣ್ಮರೆಯಾದರು. ಆ ಕಾಲಕ್ಕೆ ಅಂತಹ ಅದ್ಭುತವಾದ ಕಾರ್ಯವನ್ನು ಕೈಕೊಳ್ಳಬೇಕು ಎಂದು ಶ್ರೀ ಗಳಗನಾಥರು ನಿರ್ಧರಿಸಿದಾಗ್ಗೆ ಅವರ ಕಿರಿಯ ಮಗಳು:

"ಅಪ್ಪಾ, ಭಾರತ ಬರೆಯಬೇಡಪ್ಪ: ನಿನಗೆ ಬರೆಯಲಿಕ್ಕೆ ಬೇರೆ ಪುಸ್ತಕಗಳಿಲ್ಲವೆ?" ಎಂದು ತಂದೆಯ ವಯಸ್ಸು, ಪರಿಸ್ಥಿತಿ ಮತ್ತು ಕಾಲಗತಿ ಇವುಗಳನ್ನು ಲಕ್ಷ್ಯಕ್ಕೆ ತಂದುಕೊಂಡು ಅಂದಿರಬಹುದು. ಅದಕ್ಕೆ ಪ್ರತಿಯಾಗಿ ಅವರು

"ತಂಗೀ, ದೇಹವು ಅಸ್ಥಿರವಲ್ಲವೆ? ಯೋಗವಿದ್ದಂತಾಗುತ್ತದೆ ಅದಕ್ಕೆ ಅಂಜಬೇಕೇಕೆ? ಈಗ ಕನ್ನಡದಲ್ಲಿ ನಿನ್ನಂತಹರಿಗೆ ಓದಲಿಕ್ಕೆ ಸುಲಭ ಭಾರತವಾಗಬೇಕಪ್ಪ" ಎಂದು ತಮ್ಮ ವಿಚಾರವನ್ನು ತಿಳಿಸಿದರು. ಮುಂದೆ ತುಸು ದಿನಗಳಲ್ಲಿ ಅವರ ಮೊಮ್ಮಕ್ಕಳು ತೀರಿದ ದುರ್ಘಟನೆಗಳನ್ನು ನೆನೆಸಿ ಅವರು ತಮ್ಮ ಕಾರ್ಯವನ್ನು ಈ ಬಗೆಯ ವಿವೇಕದಿಂದ ಸುಗಮಗೊಳಿಸಿಕೊಂಡರು.

"ಆಗಡಿಯ ಆನಂದವನದ ಶ್ರೀಸದ್ಗುರು ಸನ್ನಿಧಿಯನ್ನು ಹೊಂದಿದ ಬಳಿಕ ಆತನ ಕೃಪೆಯಿಂದ ಮಕ್ಕಳೊಂದಿಗನಾದ ನಾನು, ಎಂಬತ್ತು ಜನ ವಿದ್ಯಾರ್ಥಿಗಳ ದೊಡ್ಡ ಕುಟುಂಬವನ್ನು ಸಾಗಿಸುತ್ತ ಬಂದಾಗ, ಅಖಂಡ ಇಪ್ಪತ್ತೈದು ವರ್ಷ ಬೇಕಾದಷ್ಟು ಕಷ್ಟನಷ್ಟಗಳನ್ನು

ಹೊಂದಿದರೂ, ಮರಣ ದುಃಖದ ಅನುಭವವು ನನಗೆ ಲೇಶವೂ ಒದಗಲಿಲ್ಲ; ಆದ್ದರಿಂದ ಗುರುಕೃಪೆಯ ಒಗ್ಗ ಒಂದು ಬಗೆಯ ಅಹಂಕಾರವು ನನ್ನಲ್ಲಿ ಉಂಟಾಗಿತ್ತು. ಆದರೆ ಜನಕ ಮಹಾರಾಜನಂಥ ಜ್ಞಾನಿಶ್ರೇಷ್ಠನ ಅಹಂಕಾರವೂ ಕುಗ್ಗಿದ್ದು, ಶ್ರೀ ವೆಂಕಟೇಶ ಮಹಾತ್ಮ್ಯದಿಂದ ಗೊತ್ತಾಗುತ್ತಿರುವಾಗ ನನ್ನಂಥ ಪಾಮರನ ಅಹಂಕಾರವು ಕುಗ್ಗದೇ ಹೇಗಿದ್ದೀತು? ಸುಖದುಃಖಗಳ ಮಿಶ್ರಾನುಭವವು ಸಂಸಾರದ ಲಕ್ಷಣವೆ ಆಗಿರುವದು.”

ಈ ಬಗೆಯ ಭಾವನೆಯಿಂದ ಮನಸ್ಸಿನ ಹೊಯ್ದಾಟವನ್ನೂ, ಮನೆಯೊಳಗಿನ ತೊಂದರೆಗಳನ್ನೂ, ಮೈಯಿಂದಾಗುವ ಅನಾನುಕೂಲತೆಗಳನ್ನು ದೂರಮಾಡಿಕೊಂಡು ಅವರು ‘ಮಹಾಭಾರತವು ಮನಸ್ಸಿಗೆ ಶಾಂತಿಯನ್ನುಂಟುಮಾಡುವದೆಂದು ವ್ಯಾಸಪ್ರಣೀತ ಉಪನಿಷತ್ತೇ ಆಗಿರುವದು’ ಎಂದು ತಿಳಿದು ಕೊನೆಗೆ ಸತ್ಕಥೆ, ಸದ್ವಿಚಾರ, ಸದಾಚಾರಗಳ ಸಾರವಾದ ಭಾರತವನ್ನು ಬರೆಯತೊಡಗಿದ್ದರು.

ಶ್ರೀ ಗಳಗನಾಥರದು ಗಂಡು ಶೈಲಿ. ಕೇವಲ ಸಂಸ್ಕೃತ ಶಬ್ದಗಳ ಜಡವಾದ ಪದಪ್ರಯೋಗಗಳಿಗೆ ಅವರು ಮರುಳಾಗದೆ, ಅದರ ಉಪಯೋಗವನ್ನು ಆವಶ್ಯಕ ಅನಿಸುವಷ್ಟು ಮಾತ್ರ ಮಾಡಿಕೊಂಡು, ಅನೇಕ ತಿರುಳುಗನ್ನಡ ಶಬ್ದಗಳನ್ನು, ಎಷ್ಟೋ ಸಲ ಕನ್ನಡದ, ಹಳಗನ್ನಡದ ಶಬ್ದಸರಣಿಯನ್ನು, ಲೇಖನಪರಂಪರೆಯನ್ನು ಅವರು ಕಾಪಾಡಿಕೊಂಡು ಬಂದುದು ನಮಗೆ ಗೋಚರವಾಗುವದು. ಇಷ್ಟೆ ಅಲ್ಲದೆ ಮನೆ ಮಾತುಗಳ, ಪಡೆನುಡಿಗಳ, ಗಾದೆಮಾತುಗಳ ಕಣಿಗಳನ್ನೆ ಕಂಡುಹಿಡಿದು ಜನರಿಗೆ ಅದರ ಗುರುತು ಮಾಡಿಕೊಟ್ಟು, ರುಚಿ ಹಚ್ಚಿದವರಲ್ಲಿ ಶ್ರೀ ಗಳಗನಾಥರು ಅಗ್ರಣಿಗಳು ಎಂದು ಹೇಳಬಹುದು. ಒಟ್ಟು ಕನ್ನಡದಲ್ಲಿ ಗದ್ಯಶೈಲಿಯ ಹೊಸ ಯುಗವನ್ನೆ ಇವರು ಆರಂಭ ಮಾಡಿದರು ಎಂದರೆ ಅತಿಶಯೋಕ್ತಿ ಎನಿಸಿದರೂ ನಿಜವಿದ್ದ ಮಾತು ಎಂಬುದನ್ನು ಒಪ್ಪಬೇಕಾಗುವದು. ವಿವಿಧ ಭಾವಗಳ, ವಿವಿಧ ವರ್ಣನೆಗಳ, ವಿವಿಧ ಪಾತ್ರಗಳ, ವಿವಿಧ ಕಾಲಗಳ ಚಿತ್ರವನ್ನು ಸಹಜವಾಗಿಯೂ ಸರಲವಾಗಿಯೂ ಸರಸವಾಗಿಯೂ ಬರೆಯುವದರಲ್ಲಿ ಅವರದು ಪಳಗಿದ ಕೈಯಾಗಿತ್ತು. ಅವರಲ್ಲಿಯೂ ವೀರ, ಕರುಣ, ಶೃಂಗಾರ ಮುಂತಾದ ರಸಗಳನ್ನು

ತೀಡುವವರಲ್ಲಿ ಅವರು ತೋರಿಸುವ ಶಬ್ದಗಳ ಜಾಣ್ಮೆಯು ಈಗ ಸ
ಮಾರ್ಗದರ್ಶಕ ಅನ್ನಿಸುವುದರಲ್ಲಿ ಎಳ್ಳಷ್ಟೂ ಆಶ್ಚರ್ಯವಿಲ್ಲ; ಇಷ್ಟೆ ಅ
ಅದನ್ನು ಸರಿಗಟ್ಟುವ ಸಾಹಿತ್ಯವೆ ಹೊರಟಿಲ್ಲ ಇನ್ನು!

ಅವರ ಗಂಡು ಶೈಲಿಯ ವಿಷಯವಾಗಿ ಇಲ್ಲಿ ಒಂದೆರಡು ಚಿಕ್ಕ ವಾದರೂ ಚೊಕ್ಕಟವಾದ ಉದಾಹರಣೆಗಳನ್ನು ಕೊಡಬಹುದು. ಲೇಖನ ಕಾರ್ಯದ ಆರಂಭಾವಸ್ಥೆಯಲ್ಲಿಯ ಅವರ ಶೈಲಿಯು ಹೇಗೆ ಮನದಟ್ಟಾಗಿತ್ತು ಎಂಬುದು ಈ ಅವತರಣಿಕೆಗಳಿಂದ ತಾನೇ ವ್ಯಕ್ತವಾಗುವುದು ೧೯೧೦ನೆಯ ಇಸವಿಯಲ್ಲಿ ಬರೆದ 'ಕಮಲಕುಮಾರಿ' ಎಂಬ ಕಾದಂಬರಿಯ ೧೬೮ನೆಯ ಪುಟದಲ್ಲಿ ವರ್ಣಿತವಾದ ಒಂದು ಭಾವನೆಯನ್ನು ಇಲ್ಲಿ ಎತ್ತಿ ತೋರಿಸಿದೆ:

"ಈ ಸ್ಥಿತಿಯಲ್ಲಿ ನಾಲ್ಕುಗಳಿಗೆಗಳು ಕಳೆದು ಹೋದವು; ಬೆಳಗಾಯಿತು. ಕೋಳಿಗಳು ಕೂಗಹತ್ತಿದವು; ಹಳ್ಳಿಯವರು ಬೀಸುವ ಹೊತ್ತಾದುದರಿಂದ ಅವರು ಕಲ್ಲಿಗೆ ಕೂತು ಹಾಡಿ ಹಾಡಿ ಬೀಸತೊಡಗಿದರು; ಚಂದ್ರನು ನಿಸ್ತೇಜನಾಗಹತ್ತಿದನು, ಪೂರ್ವದಿಕ್ಕು ನಸುಗೆಂಪಾಯಿತು. ಮಹಾರಾಜರು ಒಂದೆಸಮನೆ ಆ ಗುಪ್ತಚಾರನ ಹಾದಿಯನ್ನು ನೋಡುತ್ತಾ ಕುಳಿತಿದ್ದರು: ಆದರೆ ಅವನ ಸುದ್ದಿಯೆ ಇಲ್ಲ. ಆಗ ಮಹಾರಾಜರ ಮನಸ್ಸಿನಲ್ಲಿ ಮತ್ತೆ ಚಿಂತೆಯು ಉತ್ಪನ್ನವಾಯಿತು. ತಾವು ನೋಡಿದ ಉರಿಯು ಉರಿಯು ಇರಬಹುದಲ್ಲವೆ? ಒಂದು ವೇಳೆ ಉರಿಯು ಆಗಿದ್ದರೂ ಸಾಂಕೇತಿಕ ಸ್ಥಳದಲ್ಲಿ ಹತ್ತಿದ್ದಾಗಿರದೆ ಬೇರೆ ಸ್ಥಳದಲ್ಲಿ ಹತ್ತಿದ್ದಾಗಿರ ಬಹುದೊ? ಎಂಬ ಸಂಶಯ ಉತ್ಪನ್ನವಾಯಿತು."

ಅದರಂತೆ ಅವರ ಬರೆವಣಿಗೆಯ ಕೊನೆಯ ಕಾಲಖಂಡದಲ್ಲಿನ "ಸ್ವರಾಜ್ಯಸುಗಂಧ" ಎಂಬ ಕಾದಂಬರಿಯಲ್ಲಿಯೂ ಅವರ ಶೈಲಿಯು ಹೇಗೆ ಹೊಚ್ಚಹೊಸದಾಗಿದ್ದಿತು, ಅಚ್ಚಳಿಯದಂತೆಯಿದ್ದಿತು ಎಂಬುದನ್ನು ಈ ಕೆಳಗಿನ ಉಧೃತ ಭಾಗದಿಂದ ಮನಗಾಣಬಹುದು.

(ಪುಟ ೧೫೫) "ಈ ಚೆಂದದ ನಿಬ್ಬಣವು ಊರುದಾಟಿ ಸ್ವಲ್ಪ ದೂರ ಹೋಗಲು ಓಲಗ ಬಜಂತ್ರಿಗಳು ನಿಂತು, ಆ ಬಜಂತ್ರಿಯವರು ನಿಬ್ಬಣದ

ಹಿಂದಿನಿಂದ ಬರತೊಡಗಿದರು; ಹುರಿಗೆಜ್ಜೆಯ ಗತ್ತಿನ ಮೇಲೆ ಎತ್ತುಗಳು ಬಡಬಡಾ ಹೆಜ್ಜೆ ಹಾಕಹತ್ತಿದವು. ಆ ಎರಡು ತಂಡಗಳ ತರುಣ ವೀರರು ನಿಬ್ಬಣದ ಸುತ್ತುವರಿದು ಅದನ್ನು ರಕ್ಷಿಸತೊಡಗಿದರು. ಆಗ ನಿಬ್ಬಣದವರಿಗೆ ಮುಸಲ್ಮಾನರು ಕಃಪದಾರ್ಥವಾಗಿ ತೋರಿದ್ದರೆ ಆಶ್ಚರ್ಯವಲ್ಲ. ನಿಬ್ಬಣದವರೆಲ್ಲ ತರುಣರ ತಂಡದವರನ್ನೆ ಕೌತುಕದಿಂದ ನೋಡುತ್ತಿದ್ದರು. ಆ ತಂಡಗಳ ಪ್ರತಿಯೊಬ್ಬ ತರುಣನು ಒಂದು (ಗುಡಿಗೀ) ಮೊಕಾಲ ಚಲ್ಲಣವನ್ನು ಹಾಕಿಕೊಂಡು, ತಲೆಗೆ ಮುಂಡಾಸವಿಟ್ಟು ಬೆನ್ನಿಗೆ ಒಂದು ಕಂಬಳಿ, ಒಂದು ತಂಬಿಗೆ ಒಂದು ರೊಟ್ಟಿಯ ಗಂಟು ಇಷ್ಟು ಕಟ್ಟಿದ್ದನು. ಪ್ರತಿಯೊಬ್ಬರ ಟೊಂಕದಲ್ಲಿ ಖಡ್ಗವು ಆಲೆದಾಡುತ್ತಿದ್ದು, ಟೊಂಕದಲ್ಲಿ ಕಠಾರಿ ಸಿಗಿಸಿ, ಬೆನ್ನಿಗೆ ಢಾಲು ಕಟ್ಟಿ. ಹೆಗಲಮೇಲೆ ಭಾಲೆಗಣೆಯಿಟ್ಟುಕೊಂಡಿದ್ದರು. ಆ ತಂಡಗಳ ಪ್ರತಿಯೊಬ್ಬ ತರುಣನು ಗರಡಿಯ ಮನೆಯಾಡಿದವನೂ ಹುರಿಕಟ್ಟಿನ ಮೈಯವನೂ ಮುಸುಗುಟ್ಟುವ ಹರೆಯದವನೂ ಮೊಗಮೀಸೆ ಮೂಡಿದವನೂ ಆಗಿದ್ದನು. ಆ ಒಂದೇ ಸಿಸ್ತಿನ ತರುಣರ ಹಿಂಡನ್ನು ನೋಡುವವರ ಮುಖದಿಂದ ಸಹಜವಾಗಿ 'ಹೌದಪ ಇದ್ದರೆ ಹುಡುಗರು ಹೀಗಿರಬೇಕು' ಎಂಬ ಉದ್ಗಾರವು ಹೊರಡುತ್ತಿತ್ತು."

ಈ ಬಣ್ಣನೆಯಲ್ಲಿ ನಾವು ಒಂದು ಕಡೆಯಿಂದ ಶ್ರೀ ಗಳಗನಾಥರ ಅನಿರುದ್ಧವಾದ ಶಬ್ದಪ್ರವಾಹವನ್ನು ನೋಡುವಂತೆಯೆ, ಇನ್ನೊಂದು ಕಡೆಯಿಂದ ಶಬ್ದಚಿತ್ರಗಳನ್ನು ಬರೆಯುವ ಕಾರ್ಯದಲ್ಲಿ ಅವರು ಎಂತಹ ಕೈಚಳಕವನ್ನು, ಹದವನ್ನು, ಸಂಯಮವನ್ನು ತೋರಿರುವರು ಎಂಬುದನ್ನು ನಾವು ಅರಿತುಕೊಳ್ಳುವೆವು. ಅದರಿಂದ ಚಿತ್ರಗಳನ್ನು ಅಷ್ಟೇ ಸ್ಪಷ್ಟವಾಗಿಯೂ ಸುಂದರವಾಗಿಯೂ ನಾವು ಕಾಣುವೆವಲ್ಲದೆ, ಮುಂದೆ ಅದೇ ನಮ್ಮ ಮನದ ಮೂರ್ತಿಯಾಗುವದು; ಆಲೋಚನೆಯ ಆದರ್ಶವಾಗುವದು. ಅದೇ ಅವರ ಶೈಲಿಯ ಗೆಲವು ಎನ್ನಬೇಕಾಗುವದು.

ಮೊದಮೊದಲು ಆಕರ್ಷಣೆ ಮಾಡಿ ಮುಂದೆ ಸದ್ವಿಚಾರಗಳ, ಸದಾಚಾರದ ಮತ್ತು ಸನ್ಮಾರ್ಗದ ದಾರಿಗೆ ಹಚ್ಚುವ ತಮ್ಮ ಗುರಿಯನ್ನು ಹೇಗೆ ಅವರು ಸಾಧಿಸಿದರು ಎಂಬುದನ್ನು ಈ ಎರಡು ಬರೆಹಗಳಿಂದ ತಿಳಿಯಬಹುದು. ಮೊದಲನೆಯದಾದ ೧೯೧೬ ರಲ್ಲಿ ಬರೆದ 'ಕನ್ನಡಿಗರ

ಕರ್ಮಕಥೆ' ಎಂಬ ಕಾದಂಬರಿಯ ೨೨೨ನೆಯ ಪುಟದಲ್ಲಿನ ರಾಮರಾಯನ ಮಾತುಗಳನ್ನು ನೋಡಬಹುದು.

"ರಣಮಸ್ತ! ಯಾವ ಕಾರಣದಿಂದಲೊ ಏನೋ ನಿನ್ನನ್ನು ನೋಡಿದ ಕೂಡಲೆ ನನ್ನ ಪ್ರೇಮವು ಹೆಚ್ಚುತ್ತದೆ. ನಿನ್ನನ್ನು ನೋಡಿದಾಗಿನಂದಿನಿಂದ, ನೀನು ನನ್ನ ಬಳಿಯಲ್ಲಿರಬೇಕೆಂಬ ಇಚ್ಛೆಯು ನನ್ನಲ್ಲಿ ಉತ್ಪನ್ನವಾಗಿರುತ್ತದೆ. ನೀನು ಅಂದು ನಮ್ಮ ದರ್ಬಾರದಲ್ಲಿ ಆ ಹುಡುಗಿಯ ಮೇಲುಗಟ್ಟಿ ಸಿಟ್ಟಿನಿಂದ ಮಾತಾಡಿದಾಗಿನಿಂದಂತೂ ನಿನ್ನ ಮೇಲಿನ ನನ್ನ ಪ್ರೇಮವು ಹತ್ತು ಪಟ್ಟು ಹೆಚ್ಚಾಯಿತು. ನಿನಗೆ ಜನ್ಮಕೊಟ್ಟ ತಂದೆ, ನಿನ್ನನ್ನು ಹಡೆದ ತಾಯಿ ಪರಮಧನ್ಯರೆಂದು ನಾನು ತಿಳಿಯುವೆನು."

ಮುಂದೆ ಇದೇ ಕುತೂಹಲನ್ನು ತಮ್ಮ ವಿಚಾರಗಳನ್ನು ಹರಡುವದಕ್ಕಾಗಿ ಹೇಗೆ ಅಣಿಮಾಡಿಕೊಂಡಿರುವರು ಎಂಬುದನ್ನು "ಸ್ವರಾಜ್ಯ ಸುಗಂಧ"ದ ೬೨ನೆಯ ಪುಟದಲ್ಲಿ, ನೋಡಬಹುದು.

"ಈ ಜಗತ್ತಿನ ಮೂಲಘಟಕಗಳು ಶುದ್ಧ ಚೇತನ, ಮತ್ತು ಆ ಚೇತನದ ಶಕ್ತಿ ಎಂಬವು ಎರಡೇ ಇದ್ದು, ಚೇತನವಿಲ್ಲದ ಶಕ್ತಿಯೂ ಶಕ್ತಿಯಿಲ್ಲದ ಚೇತನವೂ ವ್ಯವಹಾರದೆಸೆಯಲ್ಲಿ ವ್ಯರ್ಥವೆಂಬುದರಲ್ಲಿ ಸಂಶಯವಿಲ್ಲ. ಪುರುಷರು ಚೇತನಾಸ್ಥಾಪನ್ನರೂ, ಸ್ತ್ರೀಯರು ಶಕ್ತಿಸ್ಥಾಪನ್ನರೂ ಎಂದು ಕಲ್ಪಿಸಿದರೆ ಜಗತ್ತಿನಲ್ಲಿ ವ್ಯವಹಾರಕ್ಕೆಲ್ಲ ಶಕ್ತಿಯೆ, ಅಥವಾ ಪ್ರಕೃತಿಯೆ ಕಾರಣವೆಂದು ಸಾಂಖ್ಯಮಾನದಂತೆ ಹೇಳಬೇಕಾಗುವದು; ಆದ್ದರಿಂದ 'ಸಾವಿರ ಕುದುರೆಯ ಸವಾರ ಮನೆಹೆಂಡತಿಯ ಪಿಂಜಾರ' ಎಂಬ ಲೋಕೋಕ್ತಿಯಲ್ಲಿ ಅರ್ಥವಿರುವದೆಂದು ಹೇಳಬೇಕಾಗುವದು." ಇದೇ ಮೇರೆಗೆ ಶ್ರೀ ಗಳಗನಾಥರು ತಮ್ಮ ಅಮೋಘವಾದ ಶೈಲಿಯ ಸಹಾಯದಿಂದ ಮೊದಲು ಜನರಲ್ಲಿ ಓದುವ ಅಭ್ಯಾಸ, ವಿಷಯದ ಕುತೂಹಲವನ್ನು ಹುಟ್ಟಿಸಿ ಮುಂದೆ ಬರುಬರುತ್ತ ಧೈರ್ಯ, ಅಭಿಮಾನ, ಸ್ವಾತಂತ್ರ್ಯ, ಸ್ವಾರ್ಥತ್ಯಾಗ ಮುಂತಾದವುಗಳ ಪ್ರೇರಣೆ ಮಾಡಿ ಕೊನೆಗೆ ಪುರಾಣ–ಪ್ರವಚನಗಳಿಂದ ವೇದಾಂತವನ್ನು ಸಹ ಜನರ ಅವಗಾಹನೆಗೆ ತಂದು ನೀಡಿದರು. ಮನುಷ್ಯನು ತನ್ನ ಶಕ್ತಿಯನ್ನು ತಿಳಿಯಬೇಕು, ತನ್ನನ್ನು ತಾನು ಅರಿಯಬೇಕು, ತಾನು ತಾನಾಗಿಯೆ

ಬಾಳಬೇಕು ಎಂಬ ಸಂಗತಿಯನ್ನು ಶ್ರೀ ಗಳಗನಾಥರು ತಮ್ಮ ಲೇಖನದಿಂದ ಕನ್ನಡಿಗರಿಗೆ ಅದ್ವಿತೀಯವಾದ ರೀತಿಯಲ್ಲಿ ತಿಳಿಸಿದರು ಎಂದು ಧಾರಾಳವಾಗಿ ಹೇಳಬಹುದು. ಅದೇ ಮೇರೆಗೆ ಸಂವಾದಗಳ ಸಂಯೋಜನೆಯಲ್ಲಿಯೂ ಅವರ ಕೈವಾಡವಿದ್ದುದನ್ನು ನಾವು ಕಾಣಬಹುದು. ಅದನ್ನೆ ಈ ಕೆಳಗಿನ ಎರಡು ಮಾತುಗಳಿಂದ ಸ್ಪಷ್ಟಗೊಳಿಸುವದು ಸರಿಯೆಂದು ಕಾಣುತ್ತದೆ.

ಈಶ್ವರೀಸೂತ್ರ ಪುಟ ೩೮

"ಶಿವದೇವರಾವ:—ಹಹ! ಇಲ್ಲಿ ರಾತ್ರಿ ಜನರು ಎಂದೂ ಕೂಡಿ ದಂಡಪಟ್ಟಿಗಳನ್ನು ತಿರುವುವದಿಲ್ಲವೆ? ಕುಸ್ತಿಗಳನ್ನು ಆಡುವದಿಲ್ಲವೆ?

ಶ್ರೀಧರಸ್ವಾಮಿ:—ಮಹಾರಾಜರೇ, ನಾನು ಇಲ್ಲಿಂದು ಹೇಗೆ ಹೇಳಲಿ? ಹೇಳಿ ಕೇಳಿ ಬಲಭೀಮನ ದೇವಸ್ಥಾನವಿರುವದರಿಂದ, ಇಂಥ ಕೆಲಸಗಳು ಯಾವಾಗಲೂ ಅಪ್ಪಿತಪ್ಪಿ ಇಲ್ಲಿ ನಡೆಯುತ್ತಿರುತ್ತವೆ.

"ಶಿವದೇವರಾವ:—ಸಾಕು ಸಾಕು, ನನಗೆ ಬ್ರಹ್ಮಜ್ಞಾನದ ಆವಶ್ಯಕತೆಯಿಲ್ಲ."

ಕರ್ಮಕಥೆ ಪುಟ ೨೩೯

"ರಾಮರಾಜ:—ನೀನು ಯಾರಸಂಗಡ ಹುಡುಗಾಟಿಕೆ ಮಾಡುತ್ತೀಯೆಂಬುದು ನಿನಗೆ ಗೊತ್ತಿದೆಯಷ್ಟೆ?

ಲೈಲಿ:—ಇಲ್ಲ, ನನಗೆ ಯಾವುದೂ ಗೊತ್ತಿಲ್ಲ. ನೀವು ಯಾರೆಂಬುದನ್ನು ನಾನರಿಯೆ.

ರಾಮರಾಜ:— ನಿನ್ನ ನೂರು ವರುಷಗಳು ತುಂಬಿದುವೆಂದು ತಿಳಿದುಕೋ.

ಲೈಲಿ:—ನಿಜವಾಗಿಯೂ ನನ್ನ ನೂರು ವರುಷಗಳು ತುಂಬಿದ್ದರೆ ಪರವರ್ದಿಗಾರ ಖುದಾನು ನನ್ನನ್ನು ಅನುಗ್ರಹಿಸಿದನೆಂತಲೇ ನಾನು ತಿಳಿಯುವೆನು. ನನಗಂತೂ ನನ್ನ ಜೀವ ಬೇಡಾಗಿರುತ್ತದೆ.

ಹಾಗೆಯೆ ಕೆಳಗಿನವಾಕ್ಯಗಳಲ್ಲಿ ಅಡಕವಾಗಿರುವ ಸೌಂದರ್ಯವನ್ನೂ ಸ್ವಾರಸ್ಯವನ್ನೂ ಕಾಣಬಹುದು.

ಕಮಲಕುಮಾರಿ ಪುಟ ೩೭

ಕೆಟ್ಟ ಸುದ್ದಿಯು ಗಾಳಿಯಹಾಗೆ ಹಬ್ಬುತ್ತದೆಂಬ ಮಾತು ಸುಳ್ಳಲ್ಲ.

ಪುಟ ೨೧

"ಕ್ಷುಲ್ಲಕರಿಗೆ ಅಧಿಕಾರ ಸಿಕ್ಕರೆ ಸಾಕು, ಅವರು ತಮ್ಮ ಅಧಿಕಾರದ ಹೆಮ್ಮೆಯನ್ನು ಮಂದಿಗೆ ವಿಶೇಷವಾಗಿ ತಮ್ಮ ಗುರುತಿನವರಿಗೆ ತೋರಿಸಿ ಬಹುಮಾನ ಪಡೆಯಲು ಹವಣಿಸುವರು."

ಪುಟ ೬೬

"ಮನುಷ್ಯನು ಅವಿಚಾರದಿಂದ ಒಮ್ಮೆ ಪಾಪಕೃತ್ಯ ಮಾಡಿದನೆಂದು ಅವನು ಹೆಜ್ಜೆ ಹೆಜ್ಜೆಗೆ ಅಂಜಬೇಕಾಗುತ್ತದೆ. ಅವನ ಪಾಪವೇ ಅವನನ್ನು ಅಂಜಿಸುತ್ತದೆ."

ಇನ್ನು ೧೯೧೧ ರಲ್ಲಿ ಸತ್ವಸಾರ, ೧೯೧೨ ರಲ್ಲಿ ಬರೆದ ವೈಭವ, ೧೯೨೦ರಲ್ಲಿ ಬರೆದ ತಿಲೋತ್ತಮೆ, ೧೯೨೧ರಲ್ಲಿ ಬರೆದ ಧರ್ಮರಹಸ್ಯ ಹಾಗೂ ಕುರುಕ್ಷೇತ್ರ, ಧಾರ್ಮಿಕತೇಜ, ದುರ್ಗದ ಬಿಚ್ಚುಗತ್ತಿ, ರಾಣಾ ರಾಜಸಿಂಹ, ಮುಂತಾದ ಅಸಂಖ್ಯ ಕತೆಕಾದಂಬರಿಗಳಲ್ಲಿ ಅವರ ಲೇಖನ ವೈಖರಿಯನ್ನು ನಾವು ಸವಿಯಬಹುದು. ಒಂದು ಸಂಭಾಷಣೆಯಿರಲಿ, ಒಂದು ಸಂನಿವೇಶವಿರಲಿ, ಒಂದು ಸಂಗತಿಯ ಸಂವಿಧಾನವಿರಲಿ, ಒಂದು ವಿವೇಚನೆಯಿರಲಿ ಅದನ್ನು ಹೃದಯಂಗಮವಾಗಿ ಬರೆಯುವದರಲ್ಲಿ ಶ್ರೀ ಗಳಗನಾಥರನ್ನು ಸರಿಗಟ್ಟುವವರು ಆ ಕಾಲಕ್ಕೆ ಕಡಿಮೆ ಎಂದರೂ ನಲ್ಲುವದು; ಅವರಿಗಿಂತ ಹೆಚ್ಚಿನ ಮೇಲ್ಮೆಯವರಂತೂ ಇಲ್ಲವೆ ಇಲ್ಲ!

ಅದರಂತೆಯೆ ತಮ್ಮ ಮನದಟ್ಟಾದ ಒಂದು ವಿಷಯವನ್ನು ಅಷ್ಟೆ ಆತ್ಮವಿಶ್ವಾಸದಿಂದ, ಅಖಂಡಶೈಲಿಯಲ್ಲಿ ಹೇಗೆ ವಾದಿಸುತ್ತಿದ್ದರು ಎಂಬುವನ್ನು ಅವರು ಬರೆದ ಮಹಾಭಾರತಾಮೃತದ ಆದಿಪರ್ವದ ೩೫೨ನೆಯ ಪುಟದಲ್ಲಿ ನೋಡಬಹುದು.

"....ಸ್ತ್ರೀಪುರುಷರು ಪರಸ್ಪರ ಮರ್ಯಾದೆಶೀಲರಾಗಿ ನಡೆದುಕೊಳ್ಳುವದು ಜೀವಿತಸರ್ವಸ್ವವಾದ ಬ್ರಹ್ಮಚರ್ಯದ ಪಾಲನದ ದೃಷ್ಟಿಯಿಂದ ಅತ್ಯಂತ ಹಿತಕರವಾಗಿರುವದು. ಅನಿರ್ಬಂಧವೂ, ಸಂಕೋಚರಹಿತವೂ ಅಲಂಕಾರಪ್ರಚುರವೂ ಆದ ಸ್ತ್ರೀಯರ ಸಹವಾಸವು ಅತಿಭೋಗಕ್ಕೆ ಉತ್ತೇಜಕವಾಗಿರುವದು. ಅತಿಭೋಗದಿಂದ ಆಯುಷ್ಯ, ವೀರ್ಯ, ಬಲ, ಆರೋಗ್ಯ ಇವುಗಳ ನಾಶವಾಗುತ್ತದೆಂಬುದು ಧರ್ಮಶಾಸ್ತ್ರ–ವೈದ್ಯಶಾಸ್ತ್ರಗಳಿಂದ ಸಿದ್ಧಾಂತವಾಗಿರುತ್ತದೆ... . ನೂತನ ಸಂಪ್ರದಾಯವೆಂದು ಹೇಳುವದರ ಗುಣದೋಷಗಳ ಗೊಡವಿಗೆ ಹೋಗಲಿಕ್ಕೆ ಇದು ತಕ್ಕ ಸ್ಥಳವಲ್ಲದಿದ್ದರೂ, ನೂತನ ಸಾಂಪ್ರದಾಯವು ನಮ್ಮ ನಯಭಯದ ಪರಿಶುದ್ಧ ಆರ್ಯಸಂಸ್ಕೃತಿಯನ್ನು ಮಣ್ಣುಗೂಡಿಸುತ್ತದೆಂದು ಸ್ಪಷ್ಟವಾಗಿ ಹೇಳಬೇಕಾಗುತ್ತದೆ."

ಈ ಮಾತುಗಳಲ್ಲಿ ಒಂದು ಆಧಾರ, ಒಂದು ಸಂಯಮ, ಒಂದು ಅಚಲಶ್ರದ್ಧೆ ಕಾಣುವಂತೆಯೆ ಆ ವಿಷಯವನ್ನೆ ವಿಶದವಾಗಿಯೂ, ಮನಂಬುಗುವಂತೆಯೂ ಹೇಗೆ ಅವರು ವಾದಿಸುತ್ತಿದ್ದರೆಂಬುದನ್ನು ಈ ತುಣಿಕಿನಿಂದ ತಿಳಿಯಬಹುದು.

ಪುಟ ೩೫೩

"ಪರರ ಅನುಕರಣದಿಂದ ಸ್ತ್ರೀಯರ ಸ್ವಚ್ಛಂದ ವೃತ್ತಿಯನ್ನು ನಾವು ಸ್ವಾತಂತ್ರ್ಯವೆಂದು ತಿಳಿದು ನಯಭಯಗಳಿಲ್ಲದೆ ಸ್ತ್ರೀಯರ ಮನಸ್ಸಿಗೆ ಬಂದಂತೆ ನಡೆಯತೊಡಗಿರಲು, ನಾವು ಶೀಲಭ್ರಷ್ಟರೂ, ಸತ್ವಹೀನರೂ, ದುರ್ಬಲರೂ, ಅಲ್ಪಾಯುಗಳೂ ಹೇಗಾಗುತ್ತಿರುವೆವೆಂಬುದಕ್ಕೆ ನಾವೂ ನಮ್ಮ ಸಂತತಿಯೂ ಸಾಕ್ಷಿಯಾಗಿರುವೆವು."

ಹೀಗೆ ಒಂದೇ, ಎರಡೇ, ಅನೇಕ ವಾಕ್ಯಗಳ ಮಾತುಗಳ, ವಾಕ್ಯಸಂಗ್ರಹಗಳ ಉದಾಹರಣೆಗಳಿಂದ ಅವರ ಶೈಲಿಯ ರುಚಿಯನ್ನು ನಾವು ಸವಿಯಬಹುದು. ಅದರಲ್ಲಿಯೂ 'ಮಾಧವಕರುಣಾವಿಲಾಸ'ದಲ್ಲಿಯ ರಸನಿವೇದನ ಮತ್ತು ಇತ್ತೀಚಿನ ವೇದಾಂತ ಗ್ರಂಥಗಳಲ್ಲಿಯ ಅದ್ವಿತೀಯವಾದ ವಿಷಯ ನಿರೂಪಣೆ ಇವು ಕನ್ನಡ ಸಾಹಿತ್ಯದಲ್ಲಿ ಅಜರಾಮರವಾಗುವುವು ಎಂಬ ಮಾತಿನಲ್ಲಿ ಸಂದೇಹವಿಲ್ಲ.

ಅವರು ಮಾಸಿಕ ಪತ್ರಿಕೆಗಳ ಮೂಲಕ ಗೈದ ಕಾರ್ಯವು ಅಷ್ಟಿಷ್ಟಲ್ಲ. ಚಿಕ್ಕ ಬರೆಹಗಳು ಮಾರ್ಮಿಕವಾದ ಲೇಖನಗಳು, ಸಣ್ಣ ಕತೆಗಳು, ಕಾದಂಬರಿಯ ಭಾಗಗಳು ಆರೋಗ್ಯ ಮುಂತಾದ ವಿಷಯದ ನಿಬಂಧಗಳು ಇವೆ ಮೊದಲಾದ ಬರೆಗಹಳಿಂದ ಸದ್ಬೋಧಚಂದ್ರಿಕೆ ಮತ್ತು ಸದ್ಗುರು ಇವು ಅತ್ಯಂತವಾಗಿ ಜನಪ್ರಿಯವಾಗಿದ್ದವು. ಕೇವಲ ಓದುಗರನ್ನು ಶ್ರೀ ಗಳಗನಾಥರು ಉಂಟು ಮಾಡಿದರು ಇಷ್ಟೆ ಅಲ್ಲ; ಇತ್ತ ಅವರಿಗೆ ಬೇಕಾಗುವ ತಕ್ಕ ವಿಷಯಗಳ ವಿವೇಚನೆ ಮಾಡಬಲ್ಲ ಯೋಗ್ಯ ಬರೆಹಗಾರರನ್ನು ಸಹ ಅವರು ತಮ್ಮ ನಿಯತಕಾಲಿಕೆಗಳ ಕಾರ್ಯಾಲಯದಲ್ಲಿ ಸಿದ್ಧ ಮಾಡಿದರು. ಅಂತಹರನೇಕರಿಗೆ ಮಾರ್ಗದರ್ಶಕರಾದರು, ಮುಂಬರುವ ಪೀಳಿಗೆಗೆ ಒಂದು ಆಹ್ವಾನವನ್ನು ಬಿಟ್ಟು ಹೋದರು ಎಂದು ಹೇಳಬಹುದು. ಮೈಸೂರ ಮಹಾರಾಜರವರ ಕಾಲೇಜಿನ ಕರ್ನಾಟಕ ಸಂಘದ ಸದಸ್ಯರು ಶ್ರೀ ಗಳಗನಾಥರಿಗೆ ಕೊಟ್ಟ ಮಾನಪತ್ರದಲ್ಲಿ ಕಾಣಿಸಿದ 'ತಾವು ಕಮಲಕುಮಾರಿ ಪ್ರಕಟಿಸುತ್ತಿದ್ದ ಕಾಲದಲ್ಲಿ ಸದ್ಬೋಧಚಂದ್ರಿಕೆಗೆ ಏಳು ಸಾವಿರ ಜನ ಚಂದಾದಾರರು ಒದಗಿದರೆಂಬ ಒಂದು ವಿಷಯವೆ ತಮ್ಮ ಕೃತಿಗಳು ಕನ್ನಡಿಗರಿಗೆ ಎಷ್ಟು ಅಚ್ಚುಮೆಚ್ಚಾಗಿರುತ್ತವೆಂಬದನ್ನು ಸಾರುತ್ತದೆ' ಎಂಬ ಮಾತು ಇಂದಿನ ಪತ್ರಿಕಾವ್ಯವಸಾಯ ಬಂಧುಗಳಿಗಷ್ಟೆ ಅಲ್ಲ, ಇಡಿಯ ಕನ್ನಡ ಕುಲಕ್ಕೆ ಒಂದು ಆನಂದ; ಆಶ್ಚರ್ಯ; ಆಹ್ವಾನ!

ಶ್ರೀ ಗಳಗನಾಥರು ಮೊದಲಾಗಿ ಮಾಡಿದ ಇನ್ನೊಂದು ಮಹತ್ಕಾರ್ಯವೆಂದರೆ ಕನ್ನಡವನ್ನು ಒಂದು ಮಾಡಿದ್ದು; ಸುಗಮಗೊಳಿಸಿದ್ದು; ಭೇದರಹಿತವಾಗುವಂತೆ ಅದಕ್ಕೆ ಏಕರೂಪತೆಯನ್ನು ಕೊಟ್ಟದ್ದು. ಅವರು ಮೊದಲು ಉತ್ತರ ಕರ್ನಾಟಕದ ಸರಲಶೈಲಿಯಲ್ಲಿ ಬರೆಯುತ್ತಿದ್ದರೂ ಮುಂದೆ ದಕ್ಷಿಣ ಮತ್ತು ಮಧ್ಯಕನ್ನಡದ ಕೆಲವು ಶುದ್ಧ ಮತ್ತು ಅಚ್ಚಕನ್ನಡ ಶಬ್ದಗಳು, ಪದಗಳು, ಪ್ರಯೋಗಗಳು ಅವರ ಚಿತ್ತವನ್ನು ಸೆಳೆದವು. ಮುಂದೆ ಬೆಂಗಳೂರಿನಲ್ಲಿ ಹೋಗಿದ್ದು ಮಹಾಭಾರತಾಮೃತವನ್ನು ಬರೆಯುತ್ತಿರುವ ಸಮಯದಷ್ಟರಲ್ಲಿ ಅವರ ಶೈಲಿಯು ಪಕ್ವವಾದುದೂ ಪರಿಶುದ್ಧವಾದುದೂ ಪ್ರಾತಿನಿಧಿಕವಾದುದೂ ಆಗಿತ್ತು. ಮೇಲ್ಕಾಣಿಸಿದ ಮಾನಪತ್ರದಲ್ಲಿಯೆ ಹೇಳಿದಂತೆ ಉತ್ತರ–ಮಧ್ಯ–ದಕ್ಷಿಣಕನ್ನಡಗಳಿಗೆ

ಅವರವರ ಭಾಷಾಪದ್ಧತಿಯ ಮೊದಲ ಪರಿಚಯವನ್ನು ತಮ್ಮ ಕೃತಿಗಳ ರೂಪದಿಂದ ಮಾಡಿಕೊಟ್ಟು, ಆ ಭೇದಭಾವವನ್ನು ಇಲ್ಲದಂತೆ ಮಾಡಿ, 'ಕನ್ನಡವು ಒಂದೇ' ಎಂಬುದನ್ನು ತೋರಿಸಿಕೊಟ್ಟವರಲ್ಲಿ ಶ್ರೀ ಗಳಗನಾಥರೇ ಅಗ್ರಗಣ್ಯರು !

ಇಲ್ಲಿ ಶ್ರೀ ಗಳಗನಾಥರು ಬರೆದ ಗ್ರಂಥಗಳ, ಮಾಡಿದ ಸಾಹಿತ್ಯ ಕಾರ್ಯದ ಆರ್ಥಿಕ ಪರಿಸ್ಥಿತಿಯ ವಿಚಾರಮಾಡದೆ ಈ ಬರೆಹವು ಪೂರ್ಣವೆನಿಸುವದಿಲ್ಲ. ಶ್ರೀ ಗಳಗನಾಥರು ಮೊದಲು ಶಿಕ್ಷಕ ವೃತ್ತಿಯನ್ನು ಸಾಗಿಸಿಕೊಂಡು ಸಾಹಿತ್ಯಸೇವೆಯಲ್ಲಿ ಧುಮುಕಿದರು. ಮುಂದೆ ಒಂದು ಕಾಯದಿಂದ ಇಂತಹ ಎರಡು ಕಾರ್ಯಗಳು ಸಾಧ್ಯವಿಲ್ಲ ಎಂಬುದನ್ನು ಮನಗಂಡು ಅವರು ಕೇವಲ ಸಾಹಿತ್ಯಕ್ಕೆ ತೊಡಗಿದರು. ಆ ಅವಧಿಯಲ್ಲಿ ಅವರು ಎರಡು ಮಾಸಿಕ ಪತ್ರಿಕೆಗಳನ್ನು ನಡೆಯಿಸಿದರು, ನೂರಾರು ಕತೆ-ಬಿಡಿಬರೆಹಗಳನ್ನು ಬರೆದರು; ಅರವತ್ತೆಪ್ಪತ್ತು ಪುಸ್ತಕಗಳನ್ನು ಬರೆದರು; ಎಪ್ಪತ್ತು-ಎಂಬತ್ತು ವಿದ್ಯಾರ್ಥಿಗಳಿದ್ದ ಸಂಸ್ಕೃತ ಪಾಠಶಾಲೆಯನ್ನು ನಡೆಸಿದರು. ಇದಕ್ಕೆಲ್ಲ ಒಟ್ಟು ಅರವತ್ತು-ಎಪ್ಪತ್ತುಸಾವಿರ ರೂಪಾಯಿಗಳ ವ್ಯವಹಾರವನ್ನು ಅವರು ತಾವೇ ಹೇಳಿದಂತೆ ಕೈಕೊಂಡಿದ್ದರು. ಆದರೇನು ? ಕೊನೆಯುವರೆಗೆ ದುಡ್ಡಿನ ಕೊರತೆಯು ಕಡಿಮೆಯಾಗಲಿಲ್ಲ, ಸಾಲದ ಭಾರವು ಇಳಿಯಲಿಲ್ಲ. ಸಾಲ-ಮಾಡುವದು ಪುಸ್ತಕ ಹೊರಡಿಸುವದು; ಪುಸ್ತಕ ಮಾರುವದು, ಸಾಲ ತೀರಿಸುವದು; ಮತ್ತೆ ಕೈ ಬರಿದು ಆಗಿಬಿಡುವದು. ಇದು ಪ್ರತಿ ಸಲದ ಹಾಡಾಗಿತ್ತು. ಕೊನೆಕೊನೆಗೆ 'ಸಮ್ಮ ಸಾಲತೀರಿಸುವ ಪುಸ್ತಕಗಳು' ಎಂದು ಅಚ್ಚುಹಾಕಿಸಿದ ಗ್ರಂಥಗಳನ್ನು ಅವರು ಹೊತ್ತುಕೊಂಡು ಮಾರುತ್ತ ನಡೆದುದೆ ಗಳಗನಾಥರ ಕೊನೆಯ ಕೃತಿ, ತರುಣ ಬರೆಹಗಾರರನ್ನು ಹೊಡೆದೆಬ್ಬಿಸುವ ಕೃತಿ, ನೋಡಿದಾಗ ಅಭಿಮಾನ ಹುಟ್ಟಿಸುವಂತಹ ಸಾಹಸಿಜೀವನದ ಕಲಾಕೃತಿ.

ಶ್ರೀ ಗಳಗನಾಥರು ಕೇವಲ ಒಂದೆರಡು ಸ್ವತಂತ್ರ ಎಂದು ಹೇಳಿಕೊಳ್ಳುವ ಹಾಗೂ ಹತ್ತಾರು ಅನುವಾದಿತ ಕಾದಂಬರಿಗಳಿಂದ ಜನರಲ್ಲಿ ಓದುವ ಚಟವನ್ನು ಹಚ್ಚುವ ಕೆಲಸವನ್ನು ಮಾತ್ರ ಮಾಡಿದರೆಂದು ಕೆಲವರು ಗೊಣಗುವದುಂಟು! ಆದರೆ ವಾಚನಾಭಿರುಚಿಯಲ್ಲದೆ ವಿಚಾರಕ್ಕೆ

ಪುಟಸಿಕ್ಕುವುದೆ? ವಿಚಾರ ಮಾಡದೆ ಕನ್ನಡಿಗರ ಸಾಹಿತ್ಯಸೇವೆಯ ಕಾರ್ಯವು ಈ ಮಟ್ಟನ್ನೆ ಮುಟ್ಟಲು ಸಾಧ್ಯವಿತ್ತೆ? ಶ್ರೀ ಗಳಗನಾಥರು ಮೈದುಡಿಸಿ, ಸಾಲವನ್ನು ಲೆಕ್ಕಿಸದೆ, ಮನೆಮನೆಗೆ ಹೋಗಿ ಪುಸ್ತಕಗಳನ್ನು ಮಾರುವ ಪರಿಸ್ಥಿತಿಯು ಕರ್ನಾಟಕದಲ್ಲಿ ಅವರ ಕೊನೆಯುವರೆಗೆ ಇದ್ದುದು ಶೋಚನೀಯ; ನಿಜವಾಗಿಯೂ ಲಜ್ಜಾವಹ. ಆದರೆ ಅಂತಹ ವಿಷಮ ಪರಿಸ್ಥಿತಿಯಲ್ಲಿಯೆ ಕನ್ನಡಿಗರನ್ನು ಬಡಿದೆಬ್ಬಿಸಿ, ಅವರಲ್ಲಿ ನಿಜಸ್ಥಿತಿಯ ಬಗ್ಗೆ ವಿಚಾರ ಮಾಡಹಚ್ಚಿ ಅವರಲ್ಲಿಯ ಹೊಸಶಕ್ತಿಗಳು ಹೊರಗೆ ಬರುವಂತೆ ಪ್ರಚೋದನೆ ಮಾಡಿದ ಶ್ರೀ ಗಳಗನಾಥರ ಕಾರ್ಯವೆ ಇಂದು ನಮ್ಮ ಗೌರವಕ್ಕೆ ಪಾತ್ರ. ಅವರು ತೋರಿಸಿದ ದಾರಿ ಕೈಗಂಬಗಳಿಂದ ಗುರಿಯನ್ನು ತಲುಪಬೇಕಾದದೆ ಇಂದಿನ ಅವರ ಪುಣ್ಯಸ್ಮರಣದ ಉದ್ದೇಶ.

# ಗಳಗನಾಥರ ಕಾಣಿಕೆ

ಪುನರುಜ್ಜೀವನದ ದಾರಿಯಲ್ಲಿ ಕಾಲಿಡುತ್ತಲಿದ್ದ ಕನ್ನಡ ನಾಡಿಗೂ ನುಡಿಗೂ ಈ ಶತಮಾನದಾದಿಯಲ್ಲಿ ಹೊಸ ಕಳೆಯನ್ನೂ ಬೆಳೆಯನ್ನೂ ಒದಗಿಸಿದ ಕೆಲವೇ ಕೆಲವು ಹಿರಿಯರಲ್ಲಿ ದಿವಂಗತ ಗಳಗನಾಥರು ಮೇಲ್ಪಂಕ್ತಿಯವರೆನ್ನಬಹುದು. ಅವರ ಕಾಲ ಕನ್ನಡದ ಮೊದಲ ಎಸರಿನ ಕಾಲ. ಕರ್ನಾಟಕತ್ವದ ಅರಿವೂ ಕನ್ನಡದ ಒಲವೂ ಜನತೆಯ ಮುಖಂಡ ರೆನ್ನುವಂಥವರಲ್ಲಿ ಆಗ ತಾನೆ ಎಚ್ಚರಿಯುತ್ತಲಿದ್ದವು. ಅತ್ತ ಮೈಸೂರಲ್ಲಿ ಕರ್ನಾಟಕತ್ವಕ್ಕೂ ಕನ್ನಡಕ್ಕೂ ಸಂಬಂಧವಿಲ್ಲವೆಂಬಂತೆ ಕನ್ನಡ ಸಾಹಿತ್ಯ ಮಾತ್ರ ಬೆಳೆದುಕೊಳ್ಳುತ್ತಿತ್ತು ಗಿಡದ ಮೇಲ್ಬೆಳಸಿನ ಹಾಗೆ. ಆದರೆ ಉತ್ತರ ಕರ್ನಾಟಕದಲ್ಲಿ ಕನ್ನಡ ಕೇವಲ ಒಂದು ಮೇಲು ಹೊದಿಕೆಯ ಆವರಣದಂತೆ ಬೆಳೆದರೆ ಸಾಲುವಂತಿರಲಿಲ್ಲ: ಹಾಗೆ ಬೆಳೆಯುವದೂ ಸಾಧ್ಯ ವಿರಲಿಲ್ಲ. ಮೈಸೂರ ಗಡಿಯ ಹೊರಗಿನ ಕರ್ನಾಟಕದಲ್ಲಿ ಕರ್ನಾಟಕತ್ವಕ್ಕೂ ಕನ್ನಡಕ್ಕೂ ಒಂದು ಜೀವಾಳದ ತಳಕು ಇತ್ತು. ಕನ್ನಡ ನುಡಿಯ ಹೆಚ್ಚಳ, ಬೆಳಗೆ ಏಳಿಗೆಗಳು ಕೇವಲ ಒಂದು ಗುರಿ ಮಾತ್ರ ಆಗಿ ಉಳಿಯದೆ ಕರ್ನಾಟಕತ್ವದ ಜಾಗ್ರತಿಗೆ ಒಂದು ಸಾಧನವೂ ಆಗಬೇಕಾಗಿತ್ತು. ಸಾಹಿತ್ಯವನ್ನು ಹೀಗೆ ನಾಡಿನ ಅರಿವಿಗೆಂದು ಒಂದು ತಕ್ಕುದಾದ ಆಯುಧ ವನ್ನು ಮಾಡಿಕೊಂಡ ಆ ಕಾಲದ ಸಾಹಿತಿಗಳಲ್ಲಿ ಗಳಗನಾಥರೇ ಅಗ್ರ ಗಣ್ಯರು. ಕರ್ನಾಟಕತ್ವಕ್ಕಾಗಿ ಕನ್ನಡ ಎಂಬ ಒಳ-ತಿಳಿವು ಅವರ ಅಂತಃ ಕರಣದಲ್ಲಿ ಪೂರಾ ಬಿಂಬಿಸಿತ್ತು. ಇದನ್ನು ಅವರು ಇಷ್ಟು ಸ್ಫುಟವಾಗಿ ಎಲ್ಲಿಯೂ ಕಾಣಿಸಿರದಿದ್ದರೂ ಅವರ ಕೃತಿಗಳಲ್ಲಿ ಈ ಉದ್ದೇಶ ಅಡಕ ನಾಗಿತ್ತೆಂಬದು ಸಂಪೂರ್ಣ ಸ್ಪಷ್ಟವಾಗಿದೆ. ಸುಮಾರಾಗಿ ಅವರ ಸಮಕಾಲೀನರಾಗಿ ಅವರಷ್ಟೇ ಕೀರ್ತಿವೆತ್ತ ಸಾಹಿತಿಗಳಾದ ಬಿ. ವೆಂಕಟಾ ಚಾರ್ಯರು, ಬಸಪ್ಪಶಾಸ್ತ್ರಿಗಳು ಎಂ. ಎಸ್. ಪುಟ್ಟಣ್ಣನವರು, ಚೋಳಾರ ವಿಠ್ಠಲರಾಯರ, ಚ. ವಾಸುದೇವಯ್ಯನವರೇ ಮೊದಲಾದವರು ಮಾಡಿದ ಶ್ರೇಷ್ಠ ಸಾಹಿತ್ಯ ಕಾರ್ಯಕ್ಕೂ ಗಳಗನಾಥರ ಕಾರ್ಯಕ್ಕೂ ಇರುವ ಮುಖ್ಯವಾದ

ಬಳ್ಳು ದೊಡ್ಡ ವ್ಯತ್ಯಾಸ ಇದು: ಬಿ. ವೆಂಕಟಾಚಾರ, ಬಸಪ್ಪ ಶಾಸ್ತ್ರಿ, ಮುಂತಾದವರ ಕೃತಿ ಶ್ರೇಷ್ಠ ಸಾಹಿತ್ಯವಾಗಿ ಕನ್ನಡಕ್ಕೆ ಅಲಂಕಾರವಾದುವು. ಗಳಗನಾಥರ ಕೃತಿ ಶ್ರೇಷ್ಠ ಸಾಹಿತ್ಯವಾದುದಲ್ಲದೆ, ಕನ್ನಡಿಗರಲ್ಲಿ ಕನ್ನಡತನವನ್ನು ಬಡಿದೆಬ್ಬಿಸಲು ಒಳ್ಳೆಯ ಸಾಧನವೂ ಆಯಿತು. ಇದು ಗಳಗನಾಥರ ಸಾಹಿತ್ಯದ ಅನುಪಮವಾದ ಮೇಲ್ಮೆ. ಅವರಿಗಿಂತ ಸ್ವಲ್ಪ ಮೊದಲಿಗರಾಗಿ ಕನ್ನಡದ ಸಾಹಿತಿಗಳಲ್ಲೆಲ್ಲ ಮೇಲ್ಗೈಯುವರಾದ ಮುದ್ದಣರದೂ ಎಷ್ಟೇ ಶ್ರೇಷ್ಠವಾದ ಸಾಹಿತ್ಯವಾದರೂ ಅದು ಕೇವಲ ಅಲಂಕಾರಪ್ರಾಯವಾದ ಸಾಹಿತ್ಯವೇ. ಆದರೆ ಸತ್ತಹಾಗಿದ್ದ ಕರ್ನಾಟಕತ್ವದ ಕೆಚ್ಚನ್ನು ಕೆರಳಿಸಿ ಎಚ್ಚರಿಸಲು ಒಬ್ಬ ಕನ್ನಡ ಎಚ್ಚನ್ಮ ನಾಯಕನ ಅವಶ್ಯಕತೆಯಿತ್ತು, ಅದನ್ನು ಗಳಗನಾಥರು ಪೂರೈಸಿದರು. ಅತ್ತ ದಕ್ಷಿಣಕನ್ನಡದಲ್ಲಿ, ಗಳಗನಾಥರಿಗಿಂತ ಸ್ವಲ್ಪ ನಂತರದವರಾದ ದಿವಂಗತ ಪಂಜೆ ಮಂಗೇಶರಾಯರೂ ಎಚ್ಚರಿಕೆಯ ಸಾಹಿತ್ಯಕ್ಕೆ ಕೈ ಹಾಕಿದ್ದರೂ, ಉತ್ತರದ ವೆಂಕಟ ರಂಗೋ ಕಟ್ಟಿ, ತೂರಮರಿ, ದಿ. ಬ ರೊಪ್ಪ, ಡಿ. ಚನ್ನಬಸಪ್ಪ ಮೊದಲಾದವರ ಹಾಗೆ ಶಿಕ್ಷಣವನ್ನು ತಮ್ಮ ವಿಶಿಷ್ಟ ಕ್ಷೇತ್ರವನ್ನಾಗಿಸಿಕೊಂಡು ಆ ಮಾರ್ಗದಲ್ಲೇ ಜನತೆಯನ್ನು ಎಚ್ಚರಿಸುವ ಕಾರ್ಯದಲ್ಲಿ ಅವರೂ ತೊಡಗಿದ್ದರೆನ್ನಬೇಕು. ಈ ಜನತೆಯನ್ನು ಎಚ್ಚರಿಸುವ ಕಾರ್ಯದಲ್ಲಿ ಶ್ರೀ ಆಲೂರ ವೆಂಕಟರಾಯರು, ದಿವಂಗತ ರಾ ಹ. ದೇಶಪಾಂಡೆಯವರು ಇತಿಹಾಸದ ಬಾವುಟವನ್ನೆತ್ತಿದ್ದರು; ಮುದವೀಡು ಕೃಷ್ಣರಾಯರೇ ಮುಂತಾದ ಕೆಲವರು ರಂಗಭೂಮಿ ಆಟ್ಟಕೂಟಗಳ ರಣಾಂಗಣಕ್ಕೆ ಇಳಿದಿದ್ದರು. ಹೀಗೆ ನಾಲ್ಕುಮುಖವಾಗಿ ನಾಡ ಜಾಗೃತಿಯ ಕಾರ್ಯ ಮೇಳಗೊಂಡು ನಡೆದಾಗ, ಸಾಹಿತ್ಯದ ಸೀಮೆಯಲ್ಲಿ ಗಳಗನಾಥರೊಬ್ಬರೇ ಮುಂದಾಳಾಗಿದ್ದರೆನ್ನಬೇಕು. ದಿವಂಗತರಾದ ಕಾವ್ಯಾನಂದರೂ ಶಾಂತಕವಿಗಳೂ ಸಾಹಿತ್ಯದ ರಂಗದಲ್ಲೇ ಇದ್ದರೂ ಅವರು ಆರಿಸಿಕೊಂಡಿದ್ದ ಕಾವ್ಯ–ಕೀರ್ತನೆಗಳೆಂಬ ಸಾಧನಕ್ಕಿಂತಲೂ ಗಳಗನಾಥರು ಆರಿಸಿಕೊಂಡಿದ್ದ ಕಾದಂಬರಿಯ ಸಾಧನವು ಹೆಚ್ಚು ವ್ಯಾಪಕವೂ, ಮಾರ್ಮಿಕವೂ, ಪರಿಣಾಮಕಾರಿಯೂ ಆಗಿತ್ತು.

ಗಳಗನಾಥರು ಕನ್ನಡದಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲು

ಹೆಚ್ಚಿಸಲು ಮಾತ್ರ ಬಂದವರೆಂದು ನಾನೆನ್ನಲಾರೆ. ಬಿ. ವೆಂಕಟಾಚಾರರ ಉದ್ದೇಶ ಅಷ್ಟೇ ಇದ್ದಿರಬಹುದು. ಕೇವಲ ಶ್ರೇಷ್ಠವೆನ್ನಿಸಿಕೊಳ್ಳಬಲ್ಲ ಶೈಲಿಯಲ್ಲಿ ಗ್ರಂಥಗಳನ್ನು ಬರೆದೋ, ವಿಶ್ವವಿದ್ಯಾಲಯಗಳಿಗೆ ಪಠ್ಯಪುಸ್ತಕಗಳ ಪಟ್ಟಿಯನ್ನೇ ಒದಗಿಸಲೋ, ಅಥವಾ ಜನಸಾಮಾನ್ಯರಲ್ಲಿ ಕೇವಲ ವಾಚನಾಭಿರುಚಿಯನ್ನು ಹೆಚ್ಚಿಸಲೋ ಬರೆಯಬೇಕಾಗಿದ್ದರೆ ಅದಕ್ಕೆ ಗಳಗನಾಥರ ಲೆಕ್ಕಣಿಕೆಯೇ ಏನು ಬೇಕಾಗಿರಲಿಲ್ಲ. ಅಷ್ಟೇ ಆಗಿದ್ದರೆ ಅದರಿಂದ ಕನ್ನಡಕ್ಕೆ ಗಳಗನಾಥರದೇ ಎಂಬ ವಿಶಿಷ್ಟ ಕಾಣಿಕೆಯೂ ಸಲ್ಲಿದಂತೆ ಆಗುತ್ತಿರಲಿಲ್ಲ. ಗಳಗನಾಥರು ಒಳ್ಳೇ ಶೈಲಿಯನ್ನೂ ಹಾಕಿಕೊಟ್ಟರು; ಶ್ರೇಷ್ಠ ಸಾಹಿತ್ಯವನ್ನೂ ಸೃಷ್ಟಿಸಿದರು; ಕರ್ನಾಟಕದ ಮೂಲೆ ಮೂಲೆಯಲ್ಲೆಲ್ಲ ವಾಚನಾಭಿರುಚಿಯನ್ನೂ ಹೆಚ್ಚಿಸಿದರು;—ಆದರೆ ಇವೆಲ್ಲಕ್ಕಿಂತ ಅವರು ಮಾಡಿದ ಹೆಚ್ಚಿನ ಕಾರ್ಯವೆಂದರೆ ಹೊಸಗಾಲದ ಹೊತ್ತಾರೆಯಲ್ಲಿ ಎಚ್ಚರಿಯಲು ಹಾತೊರೆಯುತ್ತಿದ್ದ ಕನ್ನಡದ ಹೊಸ-ಹೃದಯಗಳಿಗೆ ಸಾಹಿತ್ಯದ ಸವಿಯ ನೋಂಕಿನೊಂದಿಗೆ ಕರ್ನಾಟಕತ್ವದ ಅರಿವಿನ ಸಂದೇಶವನ್ನು—ಕಂಡೋ ಕಾಣದೆಯೋ—ಅಂಟಿಸಿದ್ದು. ಅವರ ಕೃತಿಗಳನ್ನು—ಮುಖ್ಯತಃ ಕಾದಂಬರಿಗಳನ್ನು ಓದುವಾಗ ನಾಡ ಜಾಗೃತಿಯ ಓಘವು ಮಡುವಾಗಿ ಹರಿಯುವ ಹಿರಿ ಹೊಳೆಯ ಹೊಟ್ಟೆಯೊಳಗಿನ ಸೆಳವಿನಂತೆ ಓದುಗರ ಮೈ-ಮನಗಳಲ್ಲಿ ಹೊಕ್ಕು ಕೊರೆದು ಬಿಡುತ್ತದೆ. ಈ ಶತಮಾನದಾದಿಯಲ್ಲಿ ಇಂಥ ಸೆಳವು ಹೊಸ ಹರೆಯದ ಜನಾಂಗಗಳ ಹೃದಯದಲ್ಲಿ ಹೊಕ್ಕು ಹರಿಯುವದು ಅತ್ಯವಶ್ಯವಾಗಿತ್ತು. ಅಂಥ ಹದವಾದ ಕಾಲದಲ್ಲಿ ಗಳಗನಾಥರು ಹದನಾದ ಕಾರ್ಯವನ್ನು ಬಹಳ ಹವಣಾಗಿ ಮಾಡಿದರು. ಈ ಮುಂದೆ ಬರುವ ಪೀಳಿಗೆಗಳು ಗಳಗನಾಥರ ಕೃತಿಗಳನ್ನೋದುವಾಗ ನಮಗೆನ್ನಿಸಿದಂತೆ ಅವರಿಗೂ ಮೈ-ಮನ ಜುಮ್ಮೆನಿಸಿಯಾವೋ ಇಲ್ಲವೋ. ಆದರೆ ಯಾವಾಗ ಯಾವ ತಲೆಮಾರಿನ ಅಂತರಂಗ ಜುಮ್ಮೆನ್ನಬೇಕಾಗಿತ್ತೋ ಆವಾಗ ಗಳಗನಾಥರು ಹಾಗೆನ್ನಿಸಿಬಿಟ್ಟರು ತಮ್ಮ ಕೃತಿಗಳಿಂದ. ನಾನು ಗಳಗನಾಥರ ಕೃತಿಗಳನ್ನು ಓದಿದ್ದು ಹುಡುಗತನ ಮೀರಿ ಎಳೆಹರೆಯ ಕಾಲಿಡುತ್ತಲಿರುವಾಗ. ಶಾಲೆಯ ಪಠ್ಯಪುಸ್ತಕಗಳನ್ನು ಬಿಟ್ಟರೆ ಉಳಿದ ಪುಸ್ತಕಗಳನ್ನು ಬೆಲೆಗೆ ಕೊಂಡು

ಕೊಳ್ಳುವ ಪರಿಪಾಠವನ್ನೇ ಆ ಕಾಲದ ತಂದೆಯಂದಿರು ಅರಿತಿರಲಿಲ್ಲ. ಆದರೆ ಎಳೆಯ ಬೆಳೆವಯಸ್ಸಿನವರಾದ ನಮಗೆ ಗಳಗನಾಥರು ಕನ್ನಡದ ಹುಚ್ಚು ಹಿಡಿಸಿದ್ದರು. ಅವರ ಪುಸ್ತಕಗಳನ್ನು ಪಡೆಯುವ ಹಂಬಲ ನಮಗೆ; ಅಂತೇ ನಾನು ಇಂಗ್ಲೀಷು ಮೂರನೇ ನಾಲ್ಕನೇ ಇಯತ್ತೆಯಲ್ಲಿದ್ದಾಗ ಮನೆಯಲ್ಲಿ ಹಣ ಸಿಕ್ಕಷ್ಟು ಕಳವು ಮಾಡಿ, ತಂದೆಯವರಿಂದ ಹೊಡೆತ ತಿನ್ನುತ್ತಿದ್ದೆ. ಆಗ ನಮ್ಮ ಕ್ಲಾಸಿನದೇ ಒಂದು ಸ್ವತಂತ್ರ ಕನ್ನಡ ವಾಚನಾಲಯದಲ್ಲಿ ಗಳಗನಾಥರ ಗ್ರಂಥಗಳೇ ಮುಕ್ಕಾಲು ಪಾಲು. ಸುಮಾರು ಒಂದು ನೂರು ರೂಪಾಯಿಯ ಪುಸ್ತಕಗಳನ್ನಾದರೂ ನಾನೇ ಆ ವಾಚನಾಲಯಕ್ಕೆ ಸಲ್ಲಿಸಿರಬೇಕೆಂದು ನೆನಪು. ಹೀಗಿತ್ತು ಆಗಿನ ಎಳೆಯ ವಯಸ್ಸಿನವರ ಎದೆಯಮೇಲೆ ಗಳಗನಾಥರ ಹಿಡಿತ. ಆಗ ಅವರ ಬರೆಹ ಯಾವ ಮಿಂಚಿನ ಎಳೆತದಿಂದ ನಮ್ಮ ಎಳೆಯೆದೆಗಳ ಎಳೆಗಳನ್ನು ಮಿಣುಕಿಸುತ್ತಿತ್ತೋ ಯಾರು ಬಲ್ಲರು. ಅಂತೂ ಅವರು ಕಣ್ಮರೆಸಿ ಕಣ್ಕಾಣಿಸಿ ತಮ್ಮ ಸಾಹಿತ್ಯದ ಒಳಹೂರಣವಾಗಿ ಸಲ್ಲಿಸಿದ್ದ ಅವರ ಕನ್ನಡತನದ ಸಂದೇಶ ನನ್ನಂತೆ ಆಗ ನವಯುವಕರಾಗಿದ್ದ ಲೆಕ್ಕವಿಲ್ಲದಷ್ಟು ಕನ್ನಡ ಜನರಲ್ಲಿ ಬೇರೂರಿ ಚಿಗಿತುಕೊಳ್ಳುವಂತಾಯಿತೆನ್ನುವವರಲ್ಲಿ ಸಂದೇಹವಿಲ್ಲ. ಅರಿತೋ ಅರಿಯದೆಯೋ ಈ ಸಂದೇಶವನ್ನು ಕಲಿತವರೆಲ್ಲ ಕನ್ನಡಕ್ಕಾಗಲೀ ಕರ್ನಾಟಕಕ್ಕಾಗಲೀ ದೊಡ್ಡ ಸೇವೆಯನ್ನು ಮಾಡಿಯೇ ತೀರದಿದ್ದರೂ, ಗಳಗನಾಥರಲ್ಲಿ ಕನ್ನಡದ ಹಾಗೂ ಕನ್ನಡತನದ ಸವಿಗಂಡವರೆಲ್ಲರೂ ತಮ್ಮ ಕನ್ನಡತನದ ಅರಿವು-ಅಭಿಮಾನಗಳನ್ನು ಮರೆಯದಂತಿದ್ದಾರೆಂದು ನಾನು ಎದೆ ತಟ್ಟಿ ಹೇಳಬಲ್ಲೆ. ನಮ್ಮ ನಮ್ಮ ಕನ್ನಡತನಕ್ಕಾಗಿ ನಾವು—ಇಂದಿನ ತರುಣ ಪೀಳಿಗೆಯವರು—ಶ್ರೀ ಆಲೂರ ವೆಂಕಟರಾಯರು, ಕಡಪಾ ರಾಘವೇಂದ್ರರಾಯರು ಮೊದಲಾದವರಿಗೆಲ್ಲ ಹಲವು ತರದಿಂದ ಋಣಿಗಳಾಗಿರುವದಕ್ಕಿಂತ ಒಂದು ತೂಕ ಹೆಚ್ಚು ಗಳಗನಾಥರಿಗೆ—ಋಣಿಯಾಗಬೇಕಾಗಿದೆ. ಏಕೆಂದರೆ, ಅವರ ಬಿಸಿಬಿಸಿ ಗ್ರಂಥಗಳು ಆದೇ ಹೊರಬರುತ್ತಿರುವಾಗ ಮುಕ್ಕಳಂತಿದ್ದ ನಮ್ಮೆದೆಗಳನ್ನು ಸಾಹಿತ್ಯ ಸುಲಲಿತವಾದ ಸಾಧನೆಯ ಮೂಲಕ ಒಲಿಸಿ, ರಮಿಸಿ, ಎಚ್ಚರಿಸಿದ್ದವು. ಹೀಗೆ ಅವರು ಕಾಲಕ್ಕೆ

ತಕ್ಕ ಸಾಹಿತ್ಯವನ್ನು ತಕ್ಕ ಜಾಗೃತಿಯನ್ನು—(ಅವು ಹಾಗಿವೆಯೆಂದು ಪೊಂಬಿಯೆಬ್ಬಿಸದೆ—) ಉಂಟು ಮಾಡಿ ಹೋದರು. ಇದೇ ಅವರ ಹಿರಿಗಾಣಿಕೆ; ಅವರ ಮುಸುಕಿನ ದಾನ.

ಹೀಗೆ ಮಾಡುವಾಗ ಅವರು ಒಂದು ವಿಶಿಷ್ಟ ರೀತಿಯನ್ನು ಅವಲಂಬಿಸಿದರು. ಅದೊಂದು ವಾಸ್ತವವಾದ ರೀತಿಯೇ ಎನ್ನಬೇಕು. ಯಾವುದು ಇದ್ದಿತೋ ಅಲ್ಲಿಂದ ಎಳೆಯಾರಂಭಿಸಿಕೊಂಡು ಯಾವದನ್ನು ಉಂಟುಮಾಡಬೇಕಿದ್ದಿತೋ ಅದಕ್ಕೆ ಆ ಎಳೆಯ ಚುಂಗನ್ನು ಅವರು ಕೆಚ್ಚಿಕೊಂಡರು. ಈ ಗರ್ಭಿತವಾದ ಮಾತನ್ನು ಬಿಡಿಸಿ ಹೇಳುವ. ಗಳಗನಾಥರು ಬರೆಯಲು ಆರಂಭಿಸಿದಾಗ ಅವರ ಸುತ್ತಲಿದ್ದ ಪರಿಸ್ಥಿತಿಯಲ್ಲಿ ಕನ್ನಡತ್ವದ ಅಭಾವ; ಮರಾಟಿಯ ಮೇಲ್ಮೆ. ಈಗ ಮರಾಟಿ ಚಿತ್ರಪಟಗಳು—ಕರ್ನಾಟಕದ ರಂಗವನ್ನು ಹೇಗೆ ವ್ಯಾಪಿಸುತ್ತಿವೆಯೋ ಹಾಗೆ ಆಗ ಮರಾಟಿಯ ಮೇಲ್ಗೈಯ ಕಾದಂಬರಿಕಾರರ ಕೃತಿಗಳು ಕನ್ನಡಿಗರ ಮನೆ ಹೊಕ್ಕು ಮನಗಳಲ್ಲೂ ಮನೆಮಾಡಿಕೊಳ್ಳುತ್ತಿದ್ದವು. ಇದು ಗಳಗನಾಥರ ಎದೆ ಕೊರೆದಿರಬೇಕು. ಎರಡನೆಯ ಮಾತೆಂದರೆ ಕಾದಂಬರಿಯಂಥ ಮನಹಿಡಿಯುವ ಸಾಹಿತ್ಯರೂಪ ಕನ್ನಡದಲ್ಲಿ ಹಿಂದೆ ಬಿದ್ದಿತ್ತು. ಇತ್ತ ಓದುಗರ ಒಲವನ್ನು ಮಲತಾಯ ಮೊಲೆಯಿಂದ ಬಿಡಿಸಲೂ ಬೇಕಿತ್ತು—ಆದರೆ ಹಡೆದ ತಾಯ ಮೊಲೆಯಲ್ಲಿ ಸಾಕಷ್ಟು ಹಾಲಿರಲಿಲ್ಲ. ಇಂಥ ಇಕ್ಕಟ್ಟಿನ ಪರಿಸ್ಥಿತಿಯನ್ನು ಮನದಂದು ಗಳಗನಾಥರು ಲೆಕ್ಕಣಿಕೆಯೆತ್ತಿದರು. ತಮ್ಮ ಮಗುವಿಗೆ ತಾವೇ ಹೊಯ್ಹಾಲು ಹಾಕಿದರೂ ಸರಿ; ಸವತಿಯ ಮೊಲೆ ಬೇಡ ಎಂದರು. ಹೀಗೆ ಬಗೆದೇ ಅವರು ಆರಂಭಕ್ಕೆ ಮರಾಟಿಯ ಒಳ್ಳೊಳ್ಳೆ ಕಾದಂಬರಿಗಳನ್ನು ಕನ್ನಡಿಸುವ ಕಾರ್ಯವನ್ನು ಕೈಕೊಂಡರು. ಸವತಿಯ ಮೊಲೆಹಾಲು ಬಿಟ್ಟು ಮಗು ತಾಯಿಯ ಹೊಯ್ಹಾಲೇ ಇರಲಿ ಎಂದು ನೆಚ್ಚಿಕೊಂಡಿತು. ವ್ಯಸನಿಗಳನ್ನು ಉಪಾಯದಿಂದ ದಾರಿಗೆ ತರುವಂತೆ ಗಳಗನಾಥರು ಕನ್ನಡದ ಸಿಟ್ಟು ತಪ್ಪಿದ ಕನ್ನಡಿಗರನ್ನು ದಾರಿಗೆ ಹಚ್ಚಿದರು. ಇದರಿಂದ ಅವರು ಮೊದಮೊದಲು ಭಾಷಾಂತರ ಕಾರ್ಯಕ್ಕೇ ನಿಂತದ್ದು ಯುಕ್ತಿಯುಕ್ತವಾದದ್ದೆಂದು ಹೇಳಬಹುದು. ಅವರು ಭಾಷಾಂತರಿಸಿದ ಕಾದಂಬರಿಗಳಲ್ಲೆಲ್ಲ ಕೆಚ್ಚೆಳೆಯಾಗಿದ್ದದ್ದು ದೇಶಭಕ್ತಿ; ಈ ಎಳೆಯ ತುದಿ ಕನ್ನಡದ ಕಾರ್ಯಕ್ಕೆ ಅತ್ಯವಶ್ಯವಾಗಿತ್ತು.

ಕನ್ನಡದ ಓದುಗರಲ್ಲಿ ಮೊದಲು ಸಾಮಾನ್ಯವಾದ ದೇಶಭಕ್ತಿಯ ಭಾವನೆ ಜಾಗೃತವಾದ ಮೇಲೆ— ಕಬ್ಬಿಣ ಕಾದಾಗ ಹಣಿಯುವಂತೆ—ಅದನ್ನು ಕನ್ನಡತ್ವಕ್ಕೆ ತಂದು ಬೆಸಗೆ ಮಾಡಿದರು. ಇದು ಅವರ ರೀತಿಯ ವೈಶಿಷ್ಟ್ಯ. ಇದೇ ದೇಶಭಕ್ತಿಯ ಭಾವನೆಯನ್ನೇ ಮತ್ತೊಂದು ತೆರನಾಗಿ ಅತ್ತ ಬಿ. ವೆಂಕಟಾಚಾರರು ಎತ್ತಿ ಹಿಡಿದಿದ್ದರು ಬಂಕಿಮರ ಭಾಷಾಂತರಗಳ ಮೂಲಕ. ಆದರೆ ಈ ವಿಷಯದಲ್ಲೂ ಗಳಗನಾಥರ ವೈಶಿಷ್ಟ್ಯವೆಂದರೆ ಅವರು ಬಂಗಾಲದಷ್ಟು ದೂರಕ್ಕೆ ಹೋಗದೆ ನೆರೆಮನೆಯಾದ ಮಹಾರಾಷ್ಟ್ರ ದಿಂದಲೇ ಸಾಹಿತ್ಯದ ಸೆಲೆ ಒಡಿಸಿಕೊಂಡರು. ಕರ್ನಾಟಕ—ಮುಖ್ಯತಃ ಉತ್ತರ ಕರ್ನಾಟಕ ಹಾಗು ಅದರದೇ ಒಂದು ಟಿಸಿಲಾದ ಮಹಾರಾಷ್ಟ್ರ ಇವೆರಡರ ಸಾಂಸ್ಕೃತಿಕ ಹಿನ್ನೆಲೆ ಒಂದೇ ತೆರನಾದುದರಿಂದಲೂ ಭೌಗೋಲಿಕ ಹಾಗು ಐತಿಹಾಸಿಕ ಸಾಮೀಪ್ಯಗಳ ಮೂಲಕವೂ ಭಾಷೆಯ ಪ್ರಭಾವದ ದೆಸೆಯಿಂದಲೂ ಮಹಾರಾಷ್ಟ್ರದ ಕಾದಂಬರಿಗಳ ಹೂಟ—ಹೊಳವುಗಳು ಬಹಳ ಹೊರಗಿನವೆನ್ನಿಸಲಿಲ್ಲ. ಮೇಲಾಗಿ ಮಹಾರಾಷ್ಟ್ರದ ಐತಿಹಾಸಿಕ ಪರಂಪರೆಗೂ ಹಿನ್ನೆಲೆಯಾಗಿದ್ದ ವಿಜಯನಗರದ ವೈಭವಕ್ಕು ಕೈಚಾಚಲೂ, ಕನ್ನಡಿಗರ ಕೆಚ್ಚಿದೆ ಮಹಾರಾಷ್ಟ್ರಕ್ಕಿಂತ ಏನೂ ಕಡಮೆ ಯಲ್ಲವೆಂದೂ ತೋರಲು ಅನುವಾಯಿತು. ಸಾಹಿತ್ಯದ ದೃಷ್ಟಿಯಿಂದ ನೋಡಿದರೆ ಗಳಗನಾಥರು ಓದುಗರನ್ನು ಮೊದಲು ಮಹಾರಾಷ್ಟ್ರದ ಕಾದಂಬರಿಗಳ ಸವಿ ತೋರಿದಂತೆ ಮಾಡಿ ಕೇವಲ ಕನ್ನಡವೇ ಆದ ತಮ್ಮವೇ ಕಾದಂಬರಿಗಳೆಡೆಗೆ ಎಳೆದೊಯ್ದರು. ಐತಿಹಾಸಿಕ ದೃಷ್ಟಿಯಿಂದ ನೋಡಿದರೆ, ಮೊದಲು ಮಹಾರಾಷ್ಟ್ರದ ಇತಿಹಾಸದ ಇತಿಗತವನ್ನು ತೋರಿಸಿ ಆಮೇಲೆ ಅದಕ್ಕೂ ಹೆಚ್ಚು ಉಜ್ವಲವಾದ ಕನ್ನಡಿಗರ ಕರ್ಮಕಥೆ ಯತ್ತ ಓದುಗರನ್ನು ಒಯ್ದರು. ಮೂರನೆಯದಾಗಿ ಮಹಾರಾಷ್ಟ್ರದ ಜೀವನದ ಪಡಿಯಚ್ಚಿನೊಂದಿಗೆ ಕನ್ನಡಿಗರ ಜೀವನದ ಚಿತ್ರದ ಪಡಿಯಚ್ಚನ್ನು ಒತ್ತಿ ತೋರಿದರು. ನಾಲ್ಕನೆಯದಾಗಿ ಮಹಾರಾಷ್ಟ್ರದ ದೇಶಭಕ್ತಿಯ ಕಲಮಿಸಿಂದ ಕನ್ನಡಿಗರಲ್ಲಿ ಕರ್ನಾಟಕತ್ವದ ಫಲವನ್ನು ಮೂಡಿಸಿದರು. ಈ ನಾಲ್ಕು ಮಾತುಗಳು ಅವರ ಮೊದಮೊದಲಿನ ಭಾಷಾಂತರ ಗ್ರಂಥಗಳಾದ 'ಕಮಲನಯನೆ', 'ಗಡ ಆಲಾ ಪಣ ಸಿಂಹ

ಗೇಲಾ'—ಗಳಿಂದ ಹೊರಟು ಮುಂದೆ ಅವರು 'ಕುಮುದಿನಿ'–'ಕನ್ನಡಿಗರ ಕರ್ಮಕಥೆ' 'ಮಾಧವಕರುಣಾವಿಲಾಸ'ಗಳನ್ನು ಬರೆಯುವವರೆಗೆ ತೋರಿ ಬರುವ ಕ್ರಮವಿಕಾಸದಲ್ಲಿ ಸ್ಪಷ್ಟವಾಗುತ್ತವೆ. ವಿಚಾರ, ಶೈಲಿ, ಬರೆವಣಿಗೆ ಕೃತಿನೈಪುಣ್ಯಗಳು ಪಾಕಗೊಂಡಂತೆ ಅವರು ಸ್ವತಂತ್ರ ಗ್ರಂಥರಚನೆಗೆ ಆರಂಭಿಸಿದರಲ್ಲದೆ, ಅಂಥ ಕಾದಂಬರಿಗಳನ್ನು ತಮ್ಮದೇ ಆದ ಕನ್ನಡ ತನದಿಂದ ತುಂಬಿತುಳುಕುವ ವಸ್ತು ಹಾಗು ವಾತಾವರಣಗಳಿಂದ ಒಪ್ಪುವಂತೆ ಗ್ರಥಿಸಿದ್ದಾರೆ. ಇದು ಅವರ ಜೀವನದ ಹಾಗು ಅವರು ಕನ್ನಡಕ್ಕಿತ್ತ ಕಾಣಿಕೆಯ ಒಂದು ಹೆಚ್ಚಳವೇ ಸರಿ. ಈ ದೃಷ್ಟಿಯಿಂದ ನೋಡಿದರೆ ಆಗಿನಕಾಲದ ಕಾದಂಬರಿಕ್ಷೇತ್ರದಲ್ಲಿ ಗಳಗನಾಥರು ಶ್ರೀ ಬಿ. ವೆಂಕಟಾಚಾರರಿಗಿಂತ ಒಂದೆರಡು ಹೆಜ್ಜೆ ಮುಂದೆ ಹೋದರು. ಆಗಿನ ದೇಶ-ಕಾಲಮಾನಗಳಲ್ಲಿ ಅಂಥ ಕಾದಂಬರಿಕಾರನ ಆವಶ್ಯಕತೆಯಿತ್ತು. ಅವರು ಅದನ್ನು ಪೂರೈಸಿದರು.

ಗಳಗನಾಥರು ನಾಲ್ವತ್ತಕ್ಕೆ ಮಿಕ್ಕಿ ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಭಾಷಾಂತರಗಳೇ ಹೆಚ್ಚು, ನಿಜ. ಆದರೆ ಗಳಗನಾಥರ ಬೆಲೆಯನ್ನು ಅವರು ಬರೆದ ಗ್ರಂಥಗಳ ಮೊತ್ತದಿಂದ ಕಟ್ಟಲೇಬಾರದು. ಅವರ ಬರೆವಣಿಗೆಯ ಕೆಚ್ಚು ಹಾಗೂ ಮೇಲ್ಮೆ ಅವರು ಬರೆದ ನಾಲ್ಕೇನಾಲ್ಕು ಸ್ವತಂತ್ರವಾದ ಗ್ರಂಥಗಳಲ್ಲಿದೆ. ಆ ನಾಲ್ಕು ಗ್ರಂಥಗಳನ್ನೇ ಆಗಲಿ ಅವರು ಬರೆಯದೇ ಹೋಗಿದ್ದರೆ ಗಳಗನಾಥರು ಸದ್ಬೋಧಚಂದ್ರಿಕೆಯ ಹಲವು ಭಾಷಾಂತರಕಾರರ ಪಟ್ಟಿಯಲ್ಲಿ ಉಳಿಯುತ್ತಿದ್ದರಲ್ಲದೆ ಈಗ ಅವರಿಗಿದ್ದ ಸಾಹಿತ್ಯ ಗುರುಸ್ಥಾನ ಅವರಿಗೆ ಸಲ್ಲುತ್ತಲೇ ಇರಲಿಲ್ಲ. ಇದೂ ಒಂದು ಕಾರಣದಿಂದಲೂ ಅವರು ತಮ್ಮ ಸರಿಸಮಾನಸ್ಕಂಧರಾದ ಬಿ. ವೆಂಕಟಾಚಾರರಿಗಿಂತ ಒಂದು ತೂಕ ಹೆಚ್ಚಿನ ಸೇವೆ ಕರ್ನಾಟಕಕ್ಕೆ ಸಲ್ಲಿಸಿದರೆನ್ನಬೇಕು. ಅಲ್ಲದೆ ಅವರ ಭಾಷಾಂತರಗಳು ಬರಿ ಭಾಷಾಂತರಗಳಾಗಿರದೆ ದೇಶಭಕ್ತಿಯ ಸಂದೇಶವಾಹಕಗಳೂ ಆಗಿವೆ. ಈ ದೃಷ್ಟಿಯಿಂದ ನೋಡಿದರೆ, ಗಳಗನಾಥರ ಯಾವದೇ ಭಾಷಾಂತರ ಗ್ರಂಥವನ್ನು ಕೈಯಲ್ಲಿ ತೆಗೆದುಕೊಂಡರೆ. ಆ ಕೃತಿಯ ಹಿನ್ನೆಲೆಯಲ್ಲಿ ಗಳಗನಾಥರ ಸ್ವಂತದ ಕೈವಾಡ ಇಲ್ಲದಿಲ್ಲ.

ಈ ಕೈವಾಡದ ವೈಶಿಷ್ಟ್ಯ ಅವರ ಶೈಲಿ. ಭಾಷಾಂತರಗಳಿಗೂ ಮೆರಗು ಕೊಟ್ಟದ್ದು ಇದೇ. ಬರೆದು ಬರೆದು ಪಳಗಿದ ಅವರ ಶೈಲಿ ಅವರ ಸ್ವಂತಕೃತಿಗಳಲ್ಲಿ ಕಳಸಕಟ್ಟುತ್ತದೆ. ಗಳಗನಾಥರ ಬರೆವಣಿಗೆಯ ಮೂಲ ಶಕ್ತಿಗಳಾದ ಕಲ್ಪಕತೆ ಹಾಗು ಭಾವಾವೇಶಗಳು ಭಾಷಾಂತರ ಗಳಲ್ಲಿ ಹಿಮ್ಮೇಳವಾಗಿರುತ್ತಿದ್ದವು. ಅವರ ಸ್ವಂತ ಕೃತಿಗಳಲ್ಲಿ ಅವರ ಬಣ್ಣನೆಯ ಬಲ್ಮೆ ಹಾಗು ಭಾವನಾ ಪ್ರಚೋದಕತೆಗಳು ನೆರೆಗೊಂಡು ಸೂಸಾಡಿ ಅವರ ಶೈಲಿಯನ್ನು ಅತ್ಯುಚ್ಚ ಶಿಖರಕ್ಕೇರಿಸುತ್ತವೆ. ಗಳಗ ನಾಥರು ಎಂದಿಗೂ ಬೆಳಗುವ ಬರೆಹಗಾರರಾಗಿ ಉಳಿದದ್ದು ಅವರ ಶೈಲಿಯಿಂದಲೇ ಎನ್ನಬೇಕು. ಇದೀಗ ಕನ್ನಡ ಗದ್ಯದ ಶೈಲಿ ಬಹಳ ಬದಲಾಗುತ್ತಿದೆ ನಿಜ. ಆದರೆ ಅವರ ಕಾಲದಲ್ಲಿ ಗಳಗನಾಥರೇ ಶೈಲಿಯ ಅರಸನಾಗಿದ್ದರು. ಜನಮನಕ್ಕೆ ಹಿಡಿಯುವಂತಾದರೂ ಸಾಕಷ್ಟು ಪ್ರೌಢವಾಗಿ ಪ್ರೌಢವಾಗಿದ್ದರೂ ನಾಡಬಾಳನ್ನು ಎಚ್ಚರಿಸಬಲ್ಲ ಗದ್ಯಶೈಲಿ ಆ ಕಾಲಕ್ಕೆ ಗಳಗನಾಥರದೊಬ್ಬರದೇ ಆಗಿತ್ತು. ಆ ಕಾಲದ ಹಲವು ಬರೆಹಗಾರರಿಗೆ ಮಾದರಿಯಾಗಿತ್ತು, ಮೇಲ್ಪಂಕ್ತಿಯದಾಗಿತ್ತು. ಈಗ ಕನ್ನಡ ಗದ್ಯದ ಶೈಲಿ ಬದಲಾಗುತ್ತಿರುವದು ಪರಿಸ್ಥಿತಿಜನ್ಯವಾದುದಲ್ಲದೆ, ಗಳಗನಾಥರು ಹಳಬರಾದವರೆಂದಲ್ಲ.

ಕಲ್ಪಕತೆ, ಭಾವೋದ್ರೇಕ, ಸ್ವಾವಿಷ್ಕರಣದ ಆವೇಗ, ಮೇಲಾಗಿ ದೇಶಭಕ್ತಿಯ ಆವೇಶ, ಇವಲ್ಲದೆ ಐತಿಹಾಸಿಕ ಉಜ್ವಲತೆಗಳನ್ನೊಳ ಗೊಂಡ ಗಳಗನಾಥರ ಶೈಲಿ ಹದಿನಾರಾಣೆಯ ಗಂಡು ಶೈಲಿ. ಅವರು ಬರೆದದ್ದೆಲ್ಲಾ ಹೆಚ್ಚಿನ ಮಾತು. ರೊಚ್ಚಿನ ಮಾತು, ಕನ್ನಡಿಗರ ಅಚ್ಚು ಮೆಚ್ಚಿನ ಮಾತು. ಇಷ್ಟೊಂದು ನೆಳವುಗಳ ಸಮ್ಮೇಳವಾದ ಅವರ ಶೈಲಿ ಗಂಡು ಶೈಲಿಯೇ ಆಗಬಲ್ಲುದಾಗಿತ್ತು. ಆದರೆ ಒಟ್ಟಾರೆ ಅವರ ಕಲ್ಪಕತೆ ಎಲ್ಲಕ್ಕೂ ಹೆಚ್ಚು ಪ್ರಧಾನವಾಗಿದ್ದುದರಿಂದ ಅವರ ಗಂಡು ಶೈಲಿಯಲ್ಲಿ ರಮಣೀಯಕತೆಯೂ ಮೋಹಕತೆಯೂ ಇಲ್ಲದಿಲ್ಲ. ಈ ಶೈಲಿಯ ಈ ವೈಶಿಷ್ಟ್ಯವೂ ಕನ್ನಡಿಗರೆದೆ ಸೆಳೆಯುವ ಬಲವಾದ ಬಲೆಯಾಗಿತ್ತು.

ಒಟ್ಟಾರೆ, ಗಳಗನಾಥರು, ಕೇವಲ ಉಪದೇಶಕ ವರ್ಗಕ್ಕೆ ಸೇರದೆ ನಾಡಿನ ಸಂದೇಶಕರಲ್ಲಿ ಹಿರಿಯರಾದವರೆಂಬುದು ನಿಜ. ಅವರು

ೂಲತಃ ಶಿಕ್ಷಕ ವರ್ಗಕ್ಕೆ ಸೇರಿದವರು. ಯಾವದೋ ಒಂದು ಮೂಲೆಯ ಳ್ಳಿಯಲ್ಲಿ ಅವರು ಶಾಲಾಗುರುಗಳಾಗಿದ್ದು ಯಾರಿಗೂ ಕಾಣದಂತೆ ತ್ತು ಹೋಗಬಹುದಿತ್ತು. ಆದರೆ “ವಿದ್ಯಾರಣ್ಯರಾಗಬೇಕಿದ್ದ ಮಾಧವ ೇವಲ ಪಂಡಿತನಾಗಿ ಉಳಿಯಲೊಲ್ಲದೆ ನಾಡಿನ ಸೆಳವಿಗೆ ಹೇಗೆ ಸಾಗರ ದ್ದನೋ ಹಾಗೆಯೇ ಮೂಲೆಯ ಕೊಂಪೆಯ ಶಾಲಾಗುರುವಾಗಿದ್ದ ಳಗನಾಥರು ನಾಡಗುರುಗಳ ಪಂಕ್ತಿಗೇರಿದರು, ತಮ್ಮ ಆತ್ಮ ಜಾಜ್ವಲ್ಯ ಯ ಬಲದಿಂದ. ಶಿಕ್ಷಕ ಜಾತಿಯಲ್ಲಿ ಅಲ್ಲಲ್ಲಿ ಕೆಲವೊಂದು ತಡವಡಿಸುವ ೇವಿಗಳು ಇರುವದುಂಟು. ಜಗತ್ತಿನ ಹಲವು ಮುಂದಾಳುಗಳು ಶಿಕ್ಷಕ ರ್ಗದಿಂದ ಬಂದವರುಂಟು. ಆದರೆ ಕೇವಲ ಪ್ರಾಥಮಿಕ ಶಾಲೆಯ ಕ್ಷಕನಾಗಿದ್ದು ನಾಡಗೌರವವನ್ನು ಆಶಿಸುವದು ಶಶವಿಷಾಣದಂತಹ ಾತೆ. ಆದರೂ ಹಿಂದೆ ಮುದ್ದಣ, ಇಂದು ಸಂಶೋಧನಾ ಕುಶಲ ಾದ ಶಂ. ಬಾ. ಜೋಶಿ ಅವರು, ಮುಂದರಿದು ಬಂದಂತೆ ಗಳಗನಾಥರೂ ಂದುಳಿದ ಶಿಕ್ಷಕ ವರ್ಗಕ್ಕೆ ಸೇರಿಯೂ ಕೂಡ ಹಿಂದುಳಿದ ನಾಡಿನ ುಂದಾಳುಗಳಲ್ಲಿ ಅಗ್ರಗಣ್ಯರಾದರು. ಇದಕ್ಕೆಲ್ಲ ನಾಡಿನ ಕೊರತೆಗಳಿ ಾಗಿ ಅವರ ಎದೆಯಲ್ಲಿಯಲ್ಲಿದ್ದ ಕೊರೆತವೇ ಕಾರಣ. ಆ ಕೊರೆತವನ್ನೇ ೂರ್ತಿಮತ್ತಾಗಿ ಕೊರೆದಿಟ್ಟರು ಗಳಗನಾಥರು ತಮ್ಮ ಕಾದಂಬರಿಗಳಲ್ಲಿ.

ಗಳಗನಾಥರ ಕೃತಿಗಳ ಅಂತರಂಗ ಸಂದೇಶಾತ್ಮಕವಾದುದು ಂದು ಹಿಂದೆ ಹೇಳಿದೆ. ಅವರ ಈ ಸಂದೇಶಾತ್ಮಕ ಬರೆಹಗಳಿಂದ ಳಗನಾಥರು ತಮ್ಮ ತಲೆಮಾರಿನಲ್ಲಿ ಅಮೂಲ್ಯ ಕಾರ್ಯವನ್ನು ಮಾಡಿದರು. ದರೆ ಇಂದು ಪರಿಸ್ಥಿತಿ ಬದಲಾಗಿದೆ. ಇದೀಗ ಕೇವಲ ಸಂದೇಶಾತ್ಮಕ ಾದಂಬರಿಗಳು ಜಾಗೃತ ಜನತೆಯ ಹಸಿವನ್ನು ಹಿಂಗಿಸಲಾರವು. ಇದೀಗ ದರ್ಶನಾತ್ಮಕವಾದ ಕಾದಂಬರಿಗಳ ಹಸಿವಿದೆ ಜನಕ್ಕೆ. ಎಚ್ಚರಿಸುವ ಾಹಿತ್ಯಕ್ಕಿಂತ ಹೆಚ್ಚಾಗಿ ಈಗ ಎಚ್ಚತ್ತವರಿಗೆ ಮುನ್ನಡೆಗಾಣಿಸುವ ಾಹಿತ್ಯ ಬೇಕಾಗಿದೆ. ಈ ತೆರದ ಕಾದಂಬರಿಗಳ ಕೊರತೆ ಕನ್ನಡದಲ್ಲಿ ನ್ನೂ ಹೆಚ್ಚಾಗಿದೆ. ಆದ್ದರಿಂದ ಇಂದಿಗೂ ಗಳಗನಾಥರು ಓದುಗರ ಸ್ಮರಣಪಥದಲ್ಲಿ ಮೊದಲನೇಯವರಾಗಿಯೇ ಇದ್ದಾರೆ. ಆದರೆ ಒಂದು ಾತು: ಅವರ ಬರೆಹಗಳನ್ನು ಇಂದಿನ ತಕ್ಕಡಿಯಲ್ಲಿಟ್ಟು ತೂಗಬಾರದು.

ಅವರ ಕಾಲಮಾನದಲ್ಲೇ ಅವರನ್ನೂ ಅವರ ಕೃತಿಗಳನ್ನೂ ಮೇಳವಿಸಿಟ್ಟು ನೋಡಿದರೆ ಗಳಗನಾಥರ ಜಾಜ್ವಲ್ಯತೆ ಚನ್ನಾಗಿ ಬಿಂಬಿಸುವದು. ಆ ದೃಷ್ಟಿಯಿಂದ ನೋಡಿದರೆ ಗಳಗನಾಥರ ಇನ್ನೊಂದು ವೈಶಿಷ್ಟ್ಯ ಕಂಡು ಬರುವದು. ಒಟ್ಟಾರೆ ಅವರ ಬರೆಹಗಳಲ್ಲಿಯ ಸಂದೇಶದ ಕವಚ ಈಶ್ವರೀಯವಾದದ್ದು. ನಮ್ಮ ಶರಚ್ಚಂದ್ರರ ಹಾಗೆ ಮಾನವೀಯವಾದುದಲ್ಲ. ವಾಸ್ತವತೆ, ಇಂದಿನ ಜೀವನದ ಕೂಟಪ್ರಶ್ನೆಗಳ ತೊಡಕು, ಮುಂದಿನ ಜೀವನದ ಮಾರ್ಪಾಡುಗಳನ್ನೇ ಎದುರಿಗಿಟ್ಟುಕೊಂಡ ಇಂದಿನ ಸಾಹಿತ್ಯದ ತಳಹದಿ ಮುಖ್ಯತಃ ಮಾನವೀಯವಾದುದು. ಚಂಡಿದಾಸ, ಪಥೇರ ದಾಬಿ, ಬ್ರಾಹ್ಮಣೇರ್ ಮೇಯೇ, ದೇವದಾಸ, ಶ್ರೀಕಾಂತಗಳಲ್ಲಿ ಶರತ್‌ಚಂದ್ರರು ಮಾನವೀಯತೆಯ ನಿದರ್ಶನಗಳನ್ನೇ ಮೂಡಿಸಿದ್ದಾರೆ ಗಳಗನಾಥರಲ್ಲಿ ಈ ಮಾತುಗಳು ಬರುವದಿಲ್ಲ; ಕಾರಣವೆಂದರೆ, ಗಳಗನಾಥರು ಸ್ವತಃ ಹಿಂದಿನ ತಲೆಮಾರಿಗೆ ಸೇರಿದವರು; ಅಲ್ಲದೆ ಅವರ ಸಾಹಿತ್ಯದ ಮೂಲ ಬಿಂಬಗಳು ಅದಕ್ಕೂ ಹಿಂದಿನ ಐತಿಹಾಸಿಕ ವ್ಯಕ್ತಿ-ಹಾಗು ಘಟನೆಗಳು. ಅವರ ರಚನೆಗಳಲ್ಲಿ ಹೀಗಾಗಿ ದೈವೀ ಸಂಕಲ್ಪ, ಯೋಗಾಯೋಗ, ಮನುಷ್ಯನ ಕಿರಿತನಗಳೇ ಹೆಚ್ಚು ಹಿರಿದಾಗಿ ಕಾಣುತ್ತವೆ. ಆದರೂ ಗಳಗನಾಥರು ಮಾನವನ ಹೊಯ್ದಾಟಗಳಿಗಲ್ಲದಿದ್ದರೂ ಹೋರಾಟದ ಅಂಶಕ್ಕೆ ತಕ್ಕ ಸ್ಥಾನ ಕೊಟ್ಟೇ ಇದ್ದಾರೆ. ಅವರ ಮಾನವೀಯತೆ ಸಾಮಾಜಿಕವಾದುದಲ್ಲ; ರಾಷ್ಟ್ರೀಯವಾದದ್ದು, ಈಶ್ವರೀಯತೆಗೆ ಒಳಗಾದದ್ದು. ಅಂತೇ ಆ ಮಾನವೀಯತೆಯಲ್ಲಿ ಹೊಯ್ದಾಟಗಳ ನಿದರ್ಶನಕ್ಕೆ ಪೂರಾ ಆಸ್ಪದವಿಲ್ಲ; ಹೋರಾಟದ ಸಂದೇಶವೇ ಸರ್ವವ್ಯಾಪಿಯಾಗಿದೆ. ಈ ದೃಷ್ಟಿಯಿಂದಲೂ ಗಳಗನಾಥರು ತಕ್ಕಕಾಲದಲ್ಲಿ ತಕ್ಕುದನ್ನೇ ಮಾಡಿದರು ಎನ್ನ ಬೇಕು.

ಒಟ್ಟಾರೆ, ಪಾರತಂತ್ರ್ಯ, ಹೊರಗಿನ ವ್ಯಾಮೋಹ, ತಮ್ಮರಿವಿನ ಅಭಾವಗಳು ನಾಡನ್ನು ಮುಚ್ಚಿ ಮುಸಿಕಿದ್ದಾಗ ಜನತೆಯನ್ನು ಎಚ್ಚರಿಸುವ ಸಾಹಿತ್ಯವನ್ನು ಗಳಗನಾಥರು ನಮ್ಮನಾಡಿಗೆ ಸಲ್ಲಿಸಿದರು. ಈಶ್ವರಿಯತೆಯ ಭಾವದಿಂದ ಮುಳುಗಿದ ಅವರ ರೀತಿಯಲ್ಲಿಯೇ ಹೇಳುವದಾದರೆ ಅವರು ಕರ್ನಾಟಕಕ್ಕೆ ಬಂದ ದೇವದೂತರೊಬ್ಬರು ಎನ್ನಬಹುದು. ಹೀಗೆಂದರೆ

ನಾನು ಅವರಿಗೆ ಬಹಳ ದೊಡ್ಡತನವನ್ನು ಕೊಡುವ ಅತಿಶಯೋಕ್ತಿಯು ನಾಡಿದೆನೆಂದಲ್ಲ. 'ತಕ್ಕಕಾಲಕ್ಕೆ ಬಂದ ತಕ್ಕ ವ್ಯಕ್ತಿಗಳಲ್ಲಿ ಹೆಚ್ಚು ತಕ್ಕವ ರವರು'. ಇಂದಿಷ್ಟೇ ಅರ್ಥ ಅದಕ್ಕೆ.

ತಕ್ಕಕಾಲದ, ತಕ್ಕಕ್ಷೇತ್ರದ, ತಕ್ಕ ವ್ಯಕ್ತಿಯಾಗಿದ್ದುದೇ ಅವರು ಕರ್ನಾಟಕಕ್ಕೆ ಕೊಟ್ಟ ದೊಡ್ಡ ಕಾಣಿಕೆ. ಆ ಕಾಣಿಕೆಯನ್ನು ಅವರು ಸಾಹಿತ್ಯದ ಮುಖಾಂತರ ಕೊಟ್ಟರು. ಕಾದಂಬರಿಗಳ ಬಲೆಯಲ್ಲಿ ಜನತೆ ಯನ್ನು ಎಳೆದರು. ಕನ್ನಡಿಗರ ಕರ್ಮಕಥೆ ಹೇಳಿ ಕನ್ನಡಿಗರನ್ನು ಎಚ್ಚರಿಸಿ ದರು. ಅದಕ್ಕಾಗಿ ಐತಿಹಾಸಿಕ ಜಾಜ್ವಲ್ಯತೆಯನ್ನು ಬೆಳಗಿಸಿದರು. ಸಾಂಸ್ಕೃತಿಕ ಪ್ರಸ್ತಾರವನ್ನು ಹಿಗ್ಗಿಸಿದರು. ಕನ್ನಡಕ್ಕೊಂದು ಸರ್ವ ಮಾನ್ಯವಾದ ಗದ್ಯ ಶೈಲಿಯನ್ನು ಒದಗಿಸಿದರು. ಜನತೆಯಲ್ಲಿ ಕನ್ನಡದ ವಾಚನಾಭಿರುಚಿ ಕನ್ನಡದ ಅಭಿಮಾನ ಉಕ್ಕೇರಿಸಿದರು. ಎದೆಯ ಕೊರೆತವನ್ನು ಕೊರೆದಿಟ್ಟು ತೋರಿಸಿದರು. ಒಬ್ಬ ಸಾಮಾನ್ಯ ಶಾಲಾಗುರು ನಾಡಗುರುವಾಗಬಲ್ಲುದೆಂತೆಂಬದನ್ನು ನಿದರ್ಶಿಸಿದರು. ಮಾನವೀಯತೆಯ ಹೋರಾಟದ ದಾರಿಯನ್ನು ಕಾಣಿಸಿಕೊಟ್ಟರು. ಅಲ್ಲದೆ ಕರ್ನಾಟಕಕ್ಕೆ ಮುಂದರಿಯುವ ಸಂದೇಶವನ್ನೂ ಸಲ್ಲಿಸಿ ಹೋದರು. ಕನ್ನಡ ಕಾದಂಬರಿ ಗಳಿಗೆ ಅಪಾರವಾದ ಅಚಲವಾದ ಅಸ್ತಿವಾರ ಹಾಕಿಯೂ ಹೋದರು. ಹೀಗೆ ಕಾಣಿಕೆಗಳ ಕೊರಳ ಹಾರವನ್ನೆ ಅರ್ಪಿಸಿದರು ಕರ್ನಾಟಕಕ್ಕೆ ಗುರು ಗಳಗನಾಥರು. ಅವರ ದಾರಿಯಲ್ಲಿ ನಾಡೂ ನುಡಿಯೂ ಮುಂದುವರಿಯ ಬೇಕಾಗಿದೆ.

ಕೊನೆಯದಾಗಿ ಉಳಿದೊಂದು ಮಾತು ಹೇಳುವದಿದೆ. ಅದು ನಾನು ಹೆಚ್ಚಾಗಿ ಅರಿಯದ ಮಾತು. ಗಳಗನಾಥರು ಧಾರ್ಮಿಕ ದುಂದುಗಾರ ರೆಂದು ನಾನು ಕೇಳಿದ ಮಾತು. ಧರ್ಮಾಚರಣೆ ಅವರ ಜೀವನದ ತಾಯಿಬೇರಾಗಿತ್ತೆಂದೂ ತಿಳಿದಿದ್ದೇನೆ. ಅವರು ಧಾರ್ಮಿಕ ಉದ್ಗ್ರಂಥ ಗಳನ್ನೂ ಬರೆದಿದ್ದಾರೆ. ಆದರೆ ನಾನವನ್ನು ಓದಿಲ್ಲ. ಧಾರ್ಮಿಕತೆಯ ಪರಾಮರ್ಶಕತೆಯೂ ನನಗಿಲ್ಲ. ಆದರೆ ಅವರು ನಾಡಿನ ಸೇವೆಯಲ್ಲಿ ಮತ-ಧರ್ಮಗಳನ್ನು ಮರೆಯುಲಿಲ್ಲವೆಂಬುದೂ ಇದರಿಂದ ನಿಚ್ಚಳ ವಾಗುತ್ತದೆ. ಆದರೂ ಈ ವಿಷಯದಲ್ಲಿ ನನ್ನ ಕಣ್ಣಿಗೆ ಕಾಣುವ

ಗಳಗನಾಥರ ವೈಶಿಷ್ಟ್ಯವೇ ಬೇರೆ. ನಮ್ಮಲ್ಲಿ ಮತ-ಧರ್ಮಗಳ ಬೆನ್ನು ಬಿದ್ದವರಲ್ಲಿ ನೂರಕ್ಕೆ ನೂರು ಜನವೂ ರಾಷ್ಟ್ರೀಯತೆಯ ಜೀವನದ ಕಡೆಗೆ ಕುರುಡರಾಗಿರುವದುಂಟು. ನಮ್ಮ ಗಳಗನಾಥರೋ ನೂರಕ್ಕೆ ನೂರಾ ಒಂದರಂತಹ ಅಪವಾದದ ವ್ಯಕ್ತಿ. ಧರ್ಮದ ತಳಕು ಅವರ ನಾಡ ದೃಷ್ಟಿಯನ್ನು ಕಟ್ಟಿಹಾಕಲಿಲ್ಲ, ಕುಗ್ಗಿಸಲಿಲ್ಲ. ಒಂದು ರೀತಿಯಿಂದ ಅದನ್ನು ಬೆಳೆಸಿತು, ಕಳೆಗೊಳಿಸಿತು. ಹೀಗೆ ಪ್ರಾಪಂಚಿಕ ಪರಿಸ್ಥಿತಿಗಳನ್ನು ಮೀರಿನಿಂತು ನಾಡಿಗೆ, ಸಾಹಿತ್ಯಕ್ಕೆ, ಸೇವೆ ಸಲ್ಲಿಸಿದ್ದೇನು ಕಡಮೆಯ ಕಾಣಿಕೆಯೆ! ಅವರ ಕಾಣಿಕೆಯ ಕಾಣ್ಕೆಯಾಗುವ ಕಣ್ಣು ಕನ್ನಡಿಗರಿಗೆ ಬರಬೇಕು. ಅಷ್ಟೇ

## ಪರಿಶಿಷ್ಟ ೧

# "ಪದ್ಮನಯನಾ" ಕಾದಂಬರಿಯ ಪ್ರಸ್ತಾವನೆ

(ವಾಗ್ಭೂಷಣ ಸಂಪುಟ ೪. ಸಂಚಿಕೆ ೧ ಮಾರ್ಚ ೧೮೯೮)

ಪ್ರಿಯ ವಾಚಕರೆ, ಪದ್ಧತಿಯಂತೆ ಪ್ರಸ್ತಾವನೆಯ ಸಂಬಂಧದಿಂದ ನಾಲ್ಕು ಮಾತುಗಳನ್ನು ಬರೆಯುವ ಮೊದಲು, ಪಾರಿತೋಷಕದ ಆಶೆಯನ್ನು ತೋರಿಸಿ, ಈ ಕಾದಂಬರಿಯನ್ನು ಬರೆಯಲ್ಪಚ್ಚಿದ ಕರ್ನಾಟಕ ವಿದ್ಯಾವರ್ಧಕ ಸಂಘದ ಉಪಕಾರವನ್ನೂ, ಇದನ್ನು ಬರೆಯುವ ವಿಷಯವಾಗಿ ಯೋಗ್ಯ ಉಪದೇಶ ಮಾಡಿದ ರಾ. ಸಾ. ರಾಮಚಂದ್ರರಾವ ದೇಶಪಾಂಡೆಯವರ ಉಪಕಾರವನ್ನೂ ಸ್ಮರಿಸದೆ ಇರೆನು ... ...

' .. .. ಓದುವವನ ಯೋಗ್ಯತೆ ಇದ್ದಂತೆ ಬೇರೆಬೇರೆ ಜನರಿಗೆ ಬೇರೆಬೇರೆ ಪ್ರಕಾರದ ಗ್ರಂಥಗಳು ವಾಚನಾರ್ಹಗಳಾಗುವುವು. ಶಾಸ್ತ್ರೀಯ ವಿಷಯಗಳ ಗಹನ ವಿಷಯಗಳ ಗ್ರಂಥಾವಲೋಕನವು ವಿದ್ವಾಂಸರಿಗೆ ಮಾತ್ರ ಸಾಧ್ಯವಾದದ್ದು. ಸಾಧಾರಣ ಜನರಿಗೆ ಆ ಗ್ರಂಥಗಳು ದುರ್ಬೋಧವಾಗಿ ಅವರು ಓದುವ ಲವಲವಿಕೆಯು ನಷ್ಟವಾಗುವ ಸಂಭವವುಂಟು. ಕಾರಣ ವಾಚನಾಭಿರುಚಿ ಇಲ್ಲದ ಜನರಲ್ಲಿ ವಾಚನಾಭಿರುಚಿಯನ್ನು ಹುಟ್ಟಿಸಲಿಕ್ಕೂ ಉದ್ಯೋಗಾತಿಶಯದಿಂದ ಶ್ರಾಂತರಾದವರಿಗೆ ವಿಶ್ರಾಂತಿಯಲ್ಲಿ ಆನಂದಗೊಳಿಸಲಿಕ್ಕೂ ಮನೋರಂಜನವಾಗಿ ನೀತಿಬೋಧವಾಗುವದಕ್ಕೂ ಉತ್ತಮ ಕಾದಂಬರಿಗಳು ಬೇಕೇಬೇಕು.... ... ಮಾತೃಭಾಷಾಸೇವೆಯನ್ನು ಮಾಡಲಿಚ್ಛಿಸಿ ನಾನು ಈ ಕಾದಂಬರಿರೂಪವಾದ ಅಲ್ಪ ಪ್ರಯತ್ನವನ್ನು ಮಾಡಿರುತ್ತೇನೆ. ಈ ಕಾದಂಬರಿಯಲ್ಲಿ "ಪದ್ಮನಯನಾ" ಎಂಬ ಸ್ತ್ರೀಯು ಮುಖ್ಯ ನಾಯಕೆಯಾದ್ದರಿಂದ ಇದಕ್ಕೆ (ಆ) ಹೆಸರು ಕೊಡಲ್ಪಟ್ಟಿದೆ. ಇದರಲ್ಲಿ ಕಪಿಂಜಲನ ಯೋಗದಿಂದ ಸತ್ಸಮಾಗಮವೂ ಸುಮತಿಯ ವರ್ತನದಿಂದ ಸನ್ಮಿತ್ರನ ಮಹತ್ವವೂ, ಜೀವನಕಲಾ ಪದ್ಮನಯನೆಯರ ಸ್ಥಿತಿಯಿಂದ ಸುಶಿಕ್ಷಿತರಾದ ಕುಲೀನ ಸ್ತ್ರೀಯರ ನಿರ್ಮಲಾಂತಃಕರಣವೂ, ದುಷ್ಟ ಬುದ್ಧಿಯ ಕುಮಾರ್ಗದಿಂದ

ದುರ್ಜನರ ಕುಟಿಲತ್ವವೂ ಕಮಲಾಕ್ಷಿ ಪದ್ಮನಯನೆಯರಿಗೊದಗಿದ ಪ್ರಸಂಗಗಳಿಂದ ಅಪ್ರೌಢ ವಯಸ್ಕರ ಸ್ವತಂತ್ರ ಚರಣೆಯ ದುಷ್ಪರಿಣಾಮವೂ, ಮೇಘನಾದ ಸಿಂಹನಾದರ ನಡಾವಳಿಯಿಂದ ತಾಮಸ ಪ್ರಕೃತಿಯಿಂದಾಗುವ ಹಾನಿಗಳೂ ವ್ಯಕ್ತವಾಗುತ್ತವೆ. ಈ ಕಾದಂಬರಿಯು ಮುಖ್ಯವಾಗಿ ಶೃಂಗಾರ–ವೀರ–ಶೋಕಾದ್ಭುತರಸ ಪ್ರಾಧಾನ್ಯವಾಗಿರುವುದು. ಕಥಾಸಂವಿಧಾನವು ನನ್ನ ಸ್ವಂತ ಕಲ್ಪನೆಯದಿದ್ದು ಅವಾಂತರ ಭಾಗದ ಹತ್ತೆಂಟು ಪುಟಗಳು ಮಾತ್ರ ಅನ್ಯ ಕಾದಂಬರಿಗಳ ಸಹಾಯದಿಂದ ಬರೆಯಲ್ಪಟ್ಟಿವೆ. ಇಷ್ಟರ ಹೊರತು ಇದರಲ್ಲಿ ಬೇರೆ ಗ್ರಂಥಗಳ ಎಂಜಲವು ಬಹುತರವಾಗಿ ದೊರೆಯಲಾರದು.

... ಇದು ನನ್ನ ಮೊದಲನೆಯ ಪ್ರಯತ್ನವಾದುದರಿಂದ ಇದರಲ್ಲಿ ಅಸಮಂಜಸ ವರ್ಣನೆಗಳೂ, ಅಸಪ್ರಯೋಗಗಳೂ, ಬೇರೆ ಕೆಲವು ದೋಷಗಳೂ ತುಂಬಿರಬಹುದು. ಆದರೆ ವಿದ್ವಜ್ಜನರು ನನ್ನ ವಿಷಯವಾಗಿ ಶಿಷ್ಯಪ್ರೇಮವನ್ನು ವಹಿಸಿ ನಿರಭಿಮಾನದಿಂದ ತಪ್ಪುಗಳನ್ನು ತಿಳಿಸಿದರೆ ಕೃತಜ್ಞನಾಗುವೆನು.


ನರೇಂದ್ರ **ವೆಂಕಟೇಶ ತಿರಕೊ ಕುಲಕರ್ಣಿ**

೧–೩–೯೭ **ಗಳಗನಾಥ**

## **ಪರಿಶಿಷ್ಟ ೨**

## ಗಳಗನಾಥರ ಜನ್ಮಕುಂಡಲಿ

ಶಾಲಿವಾಹನ ಶಕ ೧೭೭೦ರ ವಿಭವಸಂವತ್ಸರದ ಪುಷ್ಯ ಬಹುಳ ಷಷ್ಠಿ; ರಾತ್ರಿ ೧೦–೧೦; ಜನವರಿ ೫. ೧೮೪೯



## ಪರಿಶಿಷ್ಟ ೩

# ಶ್ರೀ. ಟಿ. ಎಸ್. ವೆಂಕಣ್ಣಯ್ಯನವರ ಪತ್ರ

ಬಾಸೆಲ್ ಮಿಶನ್ ಹೈಸ್ಕೂಲ, ಧಾರವಾಡ ೨೧ನೇ ಜೂನ ೧೯೧೫.

ಲೋಕಬಂಧೋ,

ಸತ್ಯಸಾರವನ್ನು ಈದಿನ ಆಮೂಲಾಗ್ರವಾಗಿ ಓದಿದೆನು. ಓದಲಿಕ್ಕೆ ಮೊದಲುಮಾಡಿ ಮುಗಿಸುವರೆಗೂ ಏಳಲು ಕೂಡ ಮನಸ್ಸಾಗಲಿಲ್ಲ. ಓದಿದ ಮೇಲೆ ಈ ಐತಿಹಾಸಿಕ ಕಾದಂಬರಿಯು ಬಹು ಮನೋಹರವಾದದ್ದೆಂದು ಬೇರೆ ಹೇಳಬೇಕಾದ್ದಿಲ್ಲ. ಈಗ ನಮ್ಮ ಭಾರತೀಯರಲ್ಲಿ ಸಾಮಾನ್ಯವಾಗಿರುವ, ಆದರೆ ಅವರು ಅತ್ಯವಶ್ಯವಾಗಿ ದೂರಮಾಡಬೇಕಾಗಿರುವ ದೋಷವು-ಮುಖ್ಯದೋಷವು, ಸ್ವನಿಷ್ಠೆ-ಸ್ವಕರ್ತವ್ಯನಿಷ್ಠೆಗಳ ಸಂಪೂರ್ಣ ಅಭಾವವು. ಪ್ರತಾಪಸಿಂಹನಂತಹ ಸ್ವತರ್ಕವ್ಯನಿಷ್ಠನ ಜೀವನ ಚರಿತ್ರೆಯನ್ನು ಓದಿ ಮನನ ಮಾಡಿದರೆ, ಓದಿದವರ ಮನಸ್ಸಿನ ಮೇಲೆ ಒಂದು ಉತ್ತಮವಾದ ಪರಿಣಾಮವಾಗುವದರಲ್ಲಿ ತಿಲಾಂಶವೂ ಸಂಶಯವಿಲ್ಲ. ಆಂಗ್ಲೇಯ ಭಾಷಾಭ್ಯಾಸ ಮಾಡಿದ ಕನ್ನಡ ಜನರು, ಈಗ ಪ್ರಚಾರವಾಗುವ ಕನ್ನಡ ಮಾಸಪತ್ರಿಕೆಗಳನ್ನಾಗಲಿ ಕನ್ನಡ ಗ್ರಂಥಗಳನ್ನಾಗಲಿ ಆದರದಿಂದ ಓದುವದಿಲ್ಲ. ದೋಷವು ಅವರದಲ್ಲ; ಗ್ರಂಥಕರ್ತರದೆಂದೇ ನನ್ನ ಭಾವನೆ. ಹಣದ ಆಶೆಗಾಗಲಿ, ತಾವು ದೊಡ್ಡವರಾಗಬೇಕೆಂತಾಗಲಿ, ಸುಳ್ಳೇ ಪುಸ್ತಕಗಳನ್ನು 'ಬರೆದರೆ ಅವುಗಳಲ್ಲಿ ರಸವಾಗಲಿ, ಯೋಗ್ಯತೆಯಾಗಲಿ ಎಂತು ಹುಟ್ಟಬೇಕು? ಸ್ವಾನುಭವದ ಮಾತುಗಳನ್ನು ಕನ್ನಡದಲ್ಲಿ ಬರೆಯುತ್ತಿರುವವರೆಷ್ಟು ಮಂದಿ ಇರುವರೆಂಬುದು ನಿಮಗಾದರೂ ಗೊತ್ತಿರದೇ ಇರಲಿಕ್ಕಿಲ್ಲ. ಸತ್ಯಸಾರದಲ್ಲಿ ಅನುಭವವಾಣಿ ಇರುವದು. ಸತ್ಯಸಾರವುಳ್ಳವರು ಬರೆದ ಸತ್ಯಸಾರವಿದಾದ್ದರಿಂದ ಮನೋರಂಜಕವಾಗದೆಂತಿರುವುದು?

ಆದರೂ ಕುಮುದಿನಿಗಿಂತಲೂ ಸತ್ಯಸಾರವು ಒಂದು ಒರೆ ಕಮ್ಮಿಯಂತಾ ನನಗೆ ಬೋಧೆಯಾಗುತ್ತದೆ. ಕುಮುದಿನಿಯನ್ನು ಓದುವಾಗ ಎಷ್ಟೋ ಸಾರೆ ನನ್ನ ನೇತ್ರಗಳು ಅಶ್ರುಪೂರ್ಣವಾದವು. ಸತ್ಯಸಾರ

ವನ್ನೋದುವಾಗ ಒಮ್ಮೆಯೂ ಹಾಗಾಗಲಿಲ್ಲ. ಕುಮುದಿನಿಯನ್ನು ಓದುವಾಗ ಅದರಲ್ಲಿ ದೋಷವೇನೂ ಇದ್ದಂತೆ ನನಗೆ ಬೋಧೆಯಾಗಲಿಲ್ಲ. ಆದರೆ, ಸತ್ವಸಾರದಲ್ಲಿ ಒಂದೆರಡು ದೋಷಗಳಿರುವಂತೆ ಕಾಣಬರುತ್ತವೆ. ಅವುಗಳನ್ನು ಈ ಕೆಳಗೆ ಬರೆದಿರುತ್ತೇನೆ. ನನ್ನನ್ನು ದೋಷೈಕದೃಕ್ಕೆಂದು ತಾವು ತಿಳಿಯಲಾರಿರೆಂದು ನನಗೆ ಸಂಪೂರ್ಣ ಭರವಸೆ ಇರುವದರಿಂದ, ಅವುಗಳನ್ನು ಇಲ್ಲಿ ಸೂಚಿಸಿದ್ದೇನೆ. ನಾನು ದೋಷಗಳೆನ್ನುವವು ದೋಷಗಳಿಲ್ಲದಿರಬಹುದು. ಹಾಗಿದ್ದಲ್ಲಿ ನನ್ನ ತಪ್ಪುಗಳನ್ನು ತಿದ್ದುವವರಲ್ಲಿ ನಿಮಗಿಂತಲೂ ಉತ್ತಮ ರೀತಿಯಲ್ಲಿ ಮತ್ತಾರು ತಿದ್ದಬಲ್ಲರು ?

೧. ಕಾಲ್ಪನಿಕ ಪಾತ್ರಗಳಾದ ಸಾತ್ವಿಕೆ ತಪೋಧನರು ಈ ಕಾದಂಬರಿಯ ವಸ್ತುರಚನೆಗೆ ಅನವಶ್ಯಕವೆಂತಾ ಕಾಣುತ್ತದೆ. ಇದಲ್ಲದೆ ಅವರಿಬ್ಬರೂ ನನಗೇಕೋ ವಿಚಿತ್ರ ವ್ಯಕ್ತಿಗಳಂತೆ ಕಾಣುತ್ತಾರೆ. ಸ್ವಾಭಾವಿಕ ಮನುಷ್ಯರಂತೆ ಕಾಣುವದಿಲ್ಲ. ಹೀಗೆ ನನಗೆ ಬೋಧೆಯಾಗಲು ಸರಿಯಾದ ಕಾರಣವೇನೆಂಬದನ್ನು ಹೇಳಲಾರದವನಾಗಿದ್ದೇನೆ.

೨ ಮೂವತ್ತುಮೂರನೇ ಪುಟದಲ್ಲಿರುವ ಸಾತ್ವಿಕೆಯ ವರ್ಣನೆಯು ನನಗೆ ಒಪ್ಪಿಗೆಯಾಗಲಿಲ್ಲ. ಈ ವರ್ಣನೆಯಿಲ್ಲದೆ ಹೋಗಿದ್ದರೆ, ಕಾದಂಬರಿಗೇನು ನಷ್ಟವಾಗುತ್ತಿತ್ತು ? ತೇಜಸ್ವಿಗಳಾದ ವ್ಯಕ್ತಿಗಳನ್ನು ನೋಡಿದಾಗ ಅವರ ಅವಯವ ಸೌಂದರ್ಯವು ನಮ್ಮ ಮನಸ್ಸಿನ ಮೇಲೆ ಉಜ್ವಲವಾದ ಭಾಸಮಾಡುವದಿಲ್ಲ; ಅವರ ತೇಜಸ್ಸು, ಶಾಂತತೆಗಳು ಮಾತ್ರ ನಮ್ಮ ಮನಸ್ಸಿನಲ್ಲಿ ಮೂರ್ತಿಮಂತವಾಗಿ ನೆಲೆಸಿರುತ್ತವೆ. ಕಠೋರ ಕುಚಾಮಂಡಲಗಳನ್ನೂ ರತ್ನವಡ್ಯಾಣದಿಂದ ಯುಕ್ತವಾದ ಉರುಪ್ರದೇಶಾದಿಗಳನ್ನೂ, ಷಡಕ್ಷರಿ ಮೊದಲಾದ ನಮ್ಮ ಪೂರ್ವ ಕವಿಗಳು ಬೇಕಾದಷ್ಟು ವರ್ಣನೆ ಮಾಡಿರುವರು. ಈ ವಿಧವಾದ ವರ್ಣನೆಯನ್ನು ಕೈಬಿಟ್ಟರೆ ಗ್ರಂಥರಚನೆಯಾಗುವಂತಿಲ್ಲವೇನು ?

೩ ಹಾಗೆಯೇ, ಸಾತ್ವಿಕೆ ತಪೋಧನರು ವೈಶಾಖ ಶುದ್ಧ ೧೪ ದಿವಸ ಪುಷ್ಪಕ್ರೀಡೆ. ಸರಸಸಲ್ಲಾಪಗಳನ್ನು ಬೆಳದಿಂಗಳಲ್ಲಿ ಮಾಡಿದುದು ನನ್ನ ಮನಸ್ಸಿಗೆ ಬರಲಿಲ್ಲ. ಇದರಲ್ಲಿ ಗುಪ್ತವಾದ ನೈತಿಕಾರ್ಥವಿಲ್ಲವೆಂತಾ ನಾನು

ಹೇಳುವದಿಲ್ಲ. ಈ ವರ್ಣನೆ ಇಲ್ಲದೆ ಹೋಗಿದ್ದರೆ ಕಥಾಸಂದರ್ಭಕ್ಕೆ ನಷ್ಟವೇನಾಗುತ್ತಿತ್ತು?

೪ ಅಕಬರನು ಮಹನೀಯನೆಂತ ನನ್ನ ಭಾವನೆಯಿತ್ತು. ನೀವು ಗ್ರಂಥದಲ್ಲಿ ಹೇಳಿರುವ ವಿಚಾರವೆಲ್ಲ ನಿಜವಾದರೆ, ಅಕಬರನನ್ನು ನಾನು ನನ್ನ ಮನೋರಾಜ್ಯದಿಂದ ದೂರ ತಳ್ಳಬೇಕಾಗುತ್ತದೆ. ಅವನು ಪರದಾರಾಗಮನ ಮಾಡುವಷ್ಟು ಪಾಷಂಡನಾಗಿದ್ದನೆಂದು ನಂಬಲಾರದವನಿದ್ದೇನೆ. ಈ ವಿಚಾರವನ್ನು ಓದಿದಾಗಿನಿಂದ ನನ್ನ ಮನಸ್ಸಿಗೆ ಅತಿ ಖೇದವಾಗಿ ಮನಶ್ಶಾಂತಿಯೇ ಹೋಗಿದೆ. ಅನೇಕ ವರ್ಷಗಳಿಂದ ಮಹಾನುಭಾವನೆಂದು ಯಾರನ್ನು ಮನ್ನಣೆಮಾಡುತ್ತಿದ್ದೆನೋ, ಹೇ ಅಕಬರ, ನೀನೂ ದೋಷಗ್ರಸ್ತನೆ? ನಾನು ನಂಬಲಾರೆ, ನಂಬಲಾರೆ.

ತಮಗೆ ಸಾಧಾರಣವಾಗಿ ಅವಕಾಶವಿರುವದಿಲ್ಲ. ಅವಕಾಶವಾದಾಗ ಮರೆಯದೆ ದಯವಿಟ್ಟು ಪ್ರತ್ಯುತ್ತರ ಬರೆಯಿಸಬೇಕಾಗಿ ಪ್ರಾರ್ಥನೆ.

ಅತ್ಯಂತ ವಿಧೇಯ
**ವಿ. ಎಸ್. ತಲ್ಲಕ**

## ಕೈ. ವಾ. ಟಿ. ಎಸ್. ವೆಂಕಣ್ಣಯ್ಯನರ ಪತ್ರಕ್ಕೆ
## ಕೈ. ವಾ. ಗಳಗನಾಥರ ಅಭಿನಂದನವೂ ಶಂಕಾಸಮಾಧಾನವೂ

"ನಮ್ಮ ಮಿತ್ರರ ಈ ೪ ಶಂಕೆಗಳಲ್ಲಿ ೧ನೆಯ ಶಂಕೆಯಿಂದ ನಮಗೆ ಬಹಳ ಸಮಾಧಾನವಾಗಿದೆ. ಯಾಕಂದರೆ, ಸಾತ್ವಿಕ–ತಪೋಧನರ ಪಾತ್ರಗಳು ಸ್ವಾಭಾವಿಕ ವ್ಯಕ್ತಿಗಳಂತೆ ತೋರಬಾರದೆಂತಲೇ ಲೇಖಕನ ಉದ್ದೇಶವಿದ್ದು, ಅದು ಸಫಲವಾದಂತೆ ನಮ್ಮ ಈ ಮಿತ್ರರ ಅಭಿಪ್ರಾಯದಿಂದ ವ್ಯಕ್ತವಾಗುತ್ತದೆ. ನಮ್ಮ ಮಿತ್ರರ ಮತದಂತೆ ಈ ಪಾತ್ರಗಳನ್ನು ಕಲ್ಪಿಸದಿದ್ದರೂ ಬರುತ್ತಿತ್ತು; ಆದರೆ ಕಾದಂಬರಿಗೆ ಈಗಿನ ಸವಿಯು ಮಾತ್ರ ಬರುತ್ತಿದ್ದಿಲ್ಲ. ಸಾತ್ವಿಕರ ಹಾಗು ತಪಸ್ವಿಗಳ ಧರ್ಮಗಳು ವ್ಯಕ್ತವಾಗಿ ಕಾಣಬೇಕೆಂತಲೂ, ಅವರ ಮಹಾನುಭಾವತೆಯು ಒಡೆದು ಕಾಣಬೇಕೆಂತಲೂ ಈ ವಿಲಕ್ಷಣ ಪಾತ್ರಗಳನ್ನು ಕಲ್ಪಿಸಬೇಕಾಯಿತು. ಈ ವೈಲಕ್ಷಣ್ಯವು ವಾಚಕರ ಮನಸ್ಸಿನಲ್ಲಿ ಬೇಗನೆ ಬಂದಷ್ಟು ತನ್ನ ಯತ್ನವು

ಸಫಲವಾಯಿತೆಂದು ಲೇಖಕನು ತಿಳಿಯುವನು. ಪ್ರತಾಪಸಿಂಹನಲ್ಲಿದ್ದ ಸತ್ಯವೇ ಸಾತ್ವಿಕೆಯು; ಆತನಲ್ಲಿಯ ತಪಸ್ವಿತೆಯೇ ತಪೋಧನನು. ಪ್ರತಾಪನಲ್ಲಿಯ ಇವೆರಡು ಗುಣಗಳನ್ನು ಪಾತ್ರಗಳಾಗಿ ಕಲ್ಪಿಸಿ ಅದಕ್ಕೆ ಲಾಲಿತ್ಯದ ಹೊದಿಕೆಯನ್ನು ಹೊದಿಸಿದ್ದರಿಂದ, ನಮ್ಮ ಮಿತ್ರರಿಗೆ ಆ ಪಾತ್ರಗಳು ವಿಲಕ್ಷಣವಾಗಿ ತೋರಿರುತ್ತವೆ. ಪ್ರತಾಪಸಿಂಹನ ಚಾರಿತ್ರ್ಯದ ಮನೋಹರತ್ವದ ಭರದಲ್ಲಿ ಆತನಲ್ಲಿಯ ಇವೆರಡು ಉಜ್ವಲಗುಣಗಳ ವಿಷಯವಾಗಿ ವಾಚಕರಲ್ಲಿ ದುರ್ಲಕ್ಷ್ಯವುಂಟಾಗಬಾರದೆಂಬ ಉದ್ದೇಶದಿಂದ ಕಾದಂಬರಿಕಾರನು ತನ್ನ ಕಲ್ಪನಾಶಕ್ತಿಗೆ ಚಾಲನೆ ಕೊಟ್ಟು ಹೀಗೆ ಮಾಡಬೇಕಾಯಿತು.

ಇನ್ನು ಎರಡನೆ ಶಂಕೆಯ ವಿಷಯವಾಗಿ ಬರೆಯುವ ಸಮಾಧಾನ ವನ್ನು ನಮ್ಮ ಮಿತ್ರರು ಬಹು ಆಸ್ಥೆಯಿಂದ ಓದಬೇಕೆಂದು ವಿನಯದಿಂದ ಹೇಳಿಕೊಳ್ಳುವೆವು. ನಮ್ಮ ಮಿತ್ರರು ಆಕ್ಷೇಪಿಸಿದ ಸತ್ವಸಾರ ಕಾದಂಬರಿ ಯೊಳಗಿನ ೩೩ನೇ ಪುಟವನ್ನು ನಾವು ತೆಗೆದು ಓದಿ ನೋಡಿದೆವು; ಆದರೆ ನಮ್ಮ ಮಿತ್ರರ ಅಭಿಪ್ರಾಯವು ನಮಗೆ ಮಾನ್ಯವಾಗಲಿಲ್ಲ. ಸ್ತ್ರೀಯರ ಸೌಂದರ್ಯ ವರ್ಣನವು ಘಾತಕವೆಂಬ ವಿಚಾರವನ್ನು ನಮ್ಮ ಮಿತ್ರರು ಸ್ವಲ್ಪ ಶಿಥಿಲವಾಗಿಯಾದರೂ ಮಾಡಿಕೊಳ್ಳತಕ್ಕದ್ದು. ಸೃಷ್ಟಿಯೊಳಗಿನ ಸೌಂದರ್ಯದ ಬಾಬನ್ನು ತೆಗೆದುಬಿಟ್ಟರೆ, ಉಳಿಯುವ ಅಷಡ್ಡಾಳವಾದ ನೀರಸ ಸೃಷ್ಟಿಯನ್ನು ತಕ್ಕೊಂಡು ಮಾಡುವದೇನು? ನಮಗೆ ಸುಂದರ ವಾದ ಅಕ್ಷರಗಳು ಬೇಕು, ಸುಂದರ ಪುಷ್ಪಗಳು ಬೇಕು, ಸುಂದರ ವಿಚಾರಗಳು ಬೇಕು. ಅದರಂತೆ ನಮ್ಮ ರೂಪದಲ್ಲಿ ಸೌಂದರ್ಯವಿರಬೇಕು, ನಮ್ಮ ಮಕ್ಕಳು ಮರಿಗಳು ಸುಂದರವಾಗಿರಬೇಕು. ನಮ್ಮ ಉಪಭೋಗ್ಯ ವಸ್ತುಗಳು ಸುಂದರವಿರಬೇಕು. ಹಾಗೆಯೇ ಸುಂದರವಾದ ಕಲಾಕೌಶಲ್ಯ ಗಳನ್ನೂ, ಸುಂದರ ರಾಜ್ಯವ್ಯವಸ್ಥೆ ಮೊದಲಾದವನ್ನೂ, ಸುಂದರ ವನ-ಪ್ರದೇಶಾದಿಗಳನ್ನೂ ನಾವು ಬುದ್ಧಿಪೂರ್ವಕವಾಗಿ ನೋಡಲಿಕ್ಕೆ ಹೋಗುತ್ತೇವೆ. ಅಂದಬಳಿಕ ಸರ್ವರಿಗೂ ಇಷ್ಟವಾದದ್ದೆಂದು ಹೇಳ ಬಹುದಾದ ಸೌಂದರ್ಯವನ್ನು ನಾವು ಸಾತ್ವಿಕೆಯಲ್ಲಿ ಕಲ್ಪಿಸಿದ್ದು ತಪ್ಪೇನು? ಹಾಗೆ ಕಲ್ಪಿಸದಿದ್ದರೆ ಕಾದಂಬರಿಯು ಸೌಂದರ್ಯ ಹೀನ ವಾಗುತ್ತಿದ್ದಿಲ್ಲವೆ? ಸಾತ್ವಿಕೆಯಲ್ಲಿ ಅಲೌಕಿಕ ಸೌಂದರ್ಯವನ್ನು ಕಲ್ಪಿಸಲಿಕ್ಕೆ

ಎರಡು ಕಾರಣಗಳುಂಟು. ೧ನೆಯ ಕಾರಣವು ಸಾತ್ವಿಕಾ–ಪ್ರತಾಪಸಿಂಹರ ನೈತಿಕ ತೇಜಸ್ವಿತೆಯು ಪ್ರಖರತೆಯ ದ್ವಾರದಿಂದ ಅವರಲ್ಲಿ ವಾಚಕರ ಶ್ರದ್ಧೆಯನ್ನುಂಟುಮಾಡುವದು. ೨ನೆಯ ಕಾರಣವು ಕಾದಂಬರಿಯನ್ನು ಅಲಂಕೃತವಾಗಿ ಮಾಡುವದು. ಸ್ತ್ರೀಯರ ಸೌಂದರ್ಯಕ್ಕೆ ಮೋಹಿಸದ ಪುರುಷರು ವಿರಲ. ಇದಕ್ಕೆ ವಿಶ್ವಾಮಿತ್ರ ಪರಾಶರಾದಿ ಮುನಿಗಳ ಚರಿತ್ರಗಳೇ ಸಾಕ್ಷಿಯಾಗಿರುವವು. ಹೀಗಿದ್ದು, ಏಕಾಂತಸ್ಥಾನದೊಳಗೆ ಆಕಸ್ಮಿಕ ಕಣ್ಣಿಗೆ ಬಿದ್ದ ೧೬ ವರ್ಷದ ಲೋಕೋತ್ತರ ಸುಂದರಿಯ ಯೋಗದಿಂದ ತರುಣನಾದ ಪ್ರತಾಪಸಿಂಹನ ಮನಸ್ಸಿನಲ್ಲಿ ವಿಕಾರದ ಬದಲು ಪೂಜ್ಯ ಬುದ್ಧಿಯುತ್ಪನ್ನವಾದದ್ದೇನು ಸಾಮಾನ್ಯ ಮಾತಲ್ಲ. ಅದರಂತೆ ಸುಂದರ ಸ್ತ್ರೀಯರು ತಮ್ಮ ಸೌಂದರ್ಯದ ಹೆಮ್ಮೆಯಿಂದ ಪುರುಷನನ್ನು ಇಲ್ಲದ ಒನಪು–ಒಯ್ಯಾರದ ಬೆಡಗಿಗೆ ಗುರಿಮಾಡುವದೇ ಬಹಳ; ಹೀಗಿದ್ದು ಮಹಾತ್ಮಳಾದ ಸಾತ್ವಿಕೆಯು ಒನಪು–ಒಯ್ಯಾರದ ಬದಲು ಪರಿಶುದ್ಧವಾದ ನೈತಿಕ ತೇಜಸ್ಸಿನ ಗಾಂಭೀರ್ಯದಿಂದ ಉದ್ಯೋಗ ತತ್ಪರಳಂತೆ ಅಡ್ಡಸೆರಗು ಕಟ್ಟಿ ಪ್ರಕಟವಾದದ್ದು ಉದಾಸೀನ ಮಾಡತಕ್ಕ ಪ್ರಸಂಗವಲ್ಲ. ಆ ಪ್ರಸಂಗವೂ ಆ ಪ್ರಸಂಗದಲ್ಲಿಯ ವರ್ಣನವೂ ರಹಸ್ಯ ಪೂರ್ಣವೆಂಬದನ್ನು ವಿಸ್ತರಿಸಿ ಬರೆದು ತೋರಿಸಲಿಕ್ಕೆ ಸ್ಥಳಾನುಕೂಲತೆ ಇಲ್ಲದ್ದರಿಂದ ವಿಷಾದಪಡಬೇಕಾಗಿದೆ.

ಇದರಂತೆ ನಮ್ಮ ಮಿತ್ರರ ೩ನೆಯ ಶಂಕೆಯಾದ ಸಾತ್ವಿಕಾ–ತಪೋಧನರ ಚಂದ್ರಿಕಾ ವಿಹಾರಪ್ರಸಂಗವೂ ಇದಕ್ಕೂ ರಹಸ್ಯಪೂರ್ಣವಾಗಿರುವದು. ಅದರಲ್ಲಿ ಕಾದಂಬರಿಕಾರನು ಸುಂದರವಾದ ಅಲಂಕಾರಿಕ ವರ್ಣನದಿಂದ ವಾಚಕರ ಚಿತ್ತವನ್ನು ಬಲವಾಗಿ ಆಕರ್ಷಿಸಿಕೊಂಡು, ಸಾತ್ವಿಕಾ–ತಪೋಧನರಲ್ಲಿ ವಸ್ತುತಃ ಭೇದವಿಲ್ಲೆಂದು ತಾತ್ವಿಕವಾಗಿ ಬೋಧಿಸಿ, ದಂಪತಿಗಳ ಅಭೇದ ವೃತ್ತಿಯು ದಾಂಪತ್ಯದ ಮುಖ್ಯ ರಹಸ್ಯವೆಂಬುದವನ್ನು ಸ್ಪಷ್ಟವಾಗಿ ತಿಳಿಸಿರುತ್ತಾನೆ. ಅದು ಹ್ಯಾಗೆಂಬುದನ್ನು ತಿಳಕೊಳ್ಳಲಿಚ್ಛಿಸುವವರು, ಅತ್ಯಂತ ರಹಸ್ಯಪೂರ್ಣವೂ, ತತ್ವಗರ್ಭಿತವೂ, ಪ್ರಕೃತ ಕಾದಂಬರಿಯ ಸಾರವೂ, ವಿಚಾರಣೀಯವೂ ಆದ ಸತ್ವಸಾರದ ೬ನೆಯ ಪ್ರಕರಣವನ್ನು ಮತ್ತೊಂದು ಸಾರೆ ಓದಬೇಕೆಂದು ಹೇಳಿಕೊಳ್ಳುವೆವು. ಸ್ತ್ರೀಪುರುಷರ ದುರ್ಮಾರ್ಗಪ್ರವರ್ತನಕ್ಕೆ ಅವರ ಸೌಂದರ್ಯವು

ಮುಖ್ಯ ಕಾರಣವಾಗಿರದೆ, ನೀಚ ಸಹವಾಸದಿಂದಾದ ಅವರ ಮನಸ್ಸಿನ ದೌರ್ಬಲ್ಯವು ಮುಖ್ಯ ಕಾರಣವಾಗಿರುತ್ತದೆ. ಅಂತೇ ಶ್ರೀ ಷಡಕ್ಷರಿಕವಿಗಳಂಥ ವಿರಕ್ತರೂ ಸ್ತ್ರೀಸೌಂದರ್ಯವನ್ನು ವರ್ಣಿಸಿರುವರು. ಅದರಂತೆ ಪ್ರಾಚೀನರಾದ ಶ್ರೀ ವೇದವ್ಯಾಸ, ಶ್ರೀ ವಾಲ್ಮೀಕಿಗಳಂಥ ಮಹಾತ್ಮರೂ ವರ್ಣಿಸಿರುವರು. ಹಾಗೆಯೆ ಷಡಕ್ಷರಿಗಳ ಈಚೆಗಿನವರೂ ವರ್ಣಿಸಿರುವರು. ಪ್ರಸ್ತುತದ ಕಾದಂಬರಿಕಾರನೂ ಅದನ್ನು ವರ್ಣಿಸಿರುವನು. ಹೀಗೆಯೇ ಆತನ ಮುಂದಿನವರೂ ಬಹಳವಾದರೆ, ಕ್ರಮಭೇದವಾಗಿ ವರ್ಣಿಸುತ್ತ ಹೋಗುವರು. ಪ್ರಿಯ ಮಿತ್ರರೇ, ಹಿಂದಿನವರು ಭೋಕ್ತಾರರಿದ್ದರೆಂದು ನಾವು ಭೋಕ್ತೃತ್ವವನ್ನು ಬಿಡಬಹುದೋ? ಅದರಂತೆ ಸುಂದರ ವಸ್ತು ದರ್ಶನಾನಂದವು ತ್ರಿಕಾಲಾಬಾಧಿತವಾದದ್ದರಿಂದ, ಅವರವರು ತಮ್ಮ ತಮ್ಮ ಊರ್ಮಿಯಂತೆ ಸುಂದರ ವಸ್ತುಗಳನ್ನು ವರ್ಣಿಸುತ್ತಾ ಹೋಗುವದೇ ಸರಿ. "ಇದರಲ್ಲಿ ಗುಪ್ತವಾದ ಸ್ಮೃತಿಕಾರ್ಥವಿಲ್ಲಂತ ನಾನು ಹೇಳುವದಿಲ್ಲ" ಎಂದು ನಮ್ಮ ಮಿತ್ರರು ಬರೆದದ್ದು ಒಪ್ಪತಕ್ಕ ಮಾತಾಗಿದೆ. ಈ ಸೌಂದರ್ಯ ವರ್ಣನವಿಲ್ಲದಿದ್ದರೆ, ಕಾದಂಬರಿಯ ಸೌಂದರ್ಯ, ಗಾಂಭೀರ್ಯ, ಕಲ್ಪಕತೆ ಇವಕ್ಕೆ ಕೊರತೆಯುಂಟಾಗುತ್ತಿತ್ತೆಂಬಂತೆ ತೋರುತ್ತದೆ.

ಇನ್ನು ನಮ್ಮ ಮಿತ್ರರ ಳನೆಯ ಶಂಕೆಯ ಸಮಾಧಾನವೂ ಬಹು ಮಹತ್ವದ್ದು. ನಮ್ಮ ಮಿತ್ರರು ತಮ್ಮ ಮನೋರಾಜ್ಯದಿಂದ ಅಕಬರನಂಥ ಮಹಾಪುರುಷನನ್ನು ಹೊರಮೂಡಬಾರದೆಂದು ಮೊದಲು ಹೇಳಿಕೊಳ್ಳುವೆವು; ಯಾಕಂದರೆ, ಪರದಾರಾಗಮನ ದೋಷಮಾತ್ರದಿಂದ ಅಕಬರನು ಸಂಪೂರ್ಣ ತಿರಸ್ಕರಣೀಯನಾಗಲಾರನು. ಆತನಲ್ಲಿಯ ಸದ್ಗುಣಸಮುಚ್ಚಯದ ಬಾಹುಲ್ಯವನ್ನು ನೋಡಿದರೆ, ಆತನಲ್ಲಿಯ ಈ ದುರ್ಗುಣವು ಇಂದುಕಲಂಕದಂತೆ ಶೋಭಾಯಮಾನವಾಗಿ ತೋರಿದ್ದರೂ, ಮನುಷ್ಯ ಹೃದಯದ ಸರ್ವಸಾಧಾರಣ ಲಕ್ಷಣವನ್ನು ತೋರಿಸಿ, ವೆಂಕಟಾಧ್ವರಿ ಕವಿಯು "ನರಾಸ್ಸುರವಾ ಪಶವಃ ಪರೋಪಿ ವಾ ನ ನಿಂದನೀಯಾಃ ಪುರುಷೇಣಭೀಷ್ಣುನಾ ॥ ಯತೋತಿದೋಷ ಪ್ರಚುರೆ ಜಗತ್ರಯೆ ನಶಂಸತಿ ತೇ ವೀತಗುಣಾಃ ಕಲಾವಪಿ" ಎಂಬ ಉಕ್ತಿಯ ಸತ್ಯತೆಯನ್ನು

ತೋರಿಸುತ್ತದೆ. ಇಂದ್ರನು ಮುನಿಪತ್ನೀಗಮನ ಮಾಡಿದನು, ಚಂದ್ರನು ಗುರುಪತ್ನೀಗಮನ ಮಾಡಿದನು, ಬ್ರಹ್ಮನು ಸ್ವಪುತ್ರಿಗಮನಮಾಡಿದನು. ಇನ್ನೂ ಯಾರುಯಾರೋ ದೊಡ್ಡವರು ಯಾವಯಾವ ಸ್ತ್ರೀಯರನ್ನೋ ಗಮನಿಸಿದರು. ಹೀಗಿದ್ದು, ಇಂದ್ರ-ಚಂದ್ರ-ಬ್ರಹ್ಮಾದಿಗಳು ಪೂಜ್ಯ ದೇವತೆಗಳಲ್ಲಿಯೂ, ಪೂಜ್ಯ ಋಷಿಗಳಲ್ಲಿಯೂ ಎಣಿಸಲ್ಪಡುತ್ತಿರಲು, ಅಕಬರಬಾದಶಹನೇನು ಮಾಡಬಾರದ ತಪ್ಪನ್ನು ಮಾಡಿರುವನು? ಆಕಬರನು ಅಲೌಕಿಕಪುರುಷನಾದದ್ದರಿಂದ, ಆತನಿಗೆ ಹೃದಯದಲ್ಲಿ ಉಚ್ಚಸ್ಥಾನವನ್ನು ಅವಶ್ಯವಾಗಿ ಕೊಡತಕ್ಕದ್ದು. ದೇಹಧಾರಿಗಳು ನಿರ್ದೋಷರಾಗಿ ಕಾಣುವದು ದುರ್ಲಭವು. ಅಕಬರನ ಈ ದೋಷದ ಉಲ್ಲೇಖವು ಟಾಡ ಸಾಹೇಬರವರ "ರಾಜಸ್ಥಾನದ ಇತಿಹಾಸ"ದ ಮರಾಠೀ ಪ್ರತಿಯ ೧೬೯-೧೭೩ ನೇ ಪುಟಗಳಲ್ಲಿ ಇರುವದು.

ನಮ್ಮ ಮಿತ್ರರು "ಕುಮುದಿನಿ"ಗಿಂತ "ಸತ್ವಸಾರ"ವು ಒಂದು ವರೆ ಕಮ್ಮಿಯೆಂದು ಹೇಳುತ್ತಾರೆ; ಆದರೆ ಆ ಎರಡೂ ಕಾದಂಬರಿಗಳನ್ನು ಬರೆದಿದ್ದ ಮಿ. ಗಳಗನಾಥ ಇವರು ಹಾಗೆ ಹೇಳುವದಿಲ್ಲ. ಮಾವಿನಹಣ್ಣಿನ ರುಚಿ ಮಾವಿನ ಹಣ್ಣಿಗೆ, ಬಾಳೆಯ ಹಣ್ಣಿನ ರುಚಿ ಬಾಳೆಯಹಣ್ಣಿಗೆ. ಒಂದೊಂದು ಹಣ್ಣು ಒಬ್ಬೊಬ್ಬರಿಗೆ ಸೇರುತ್ತದೆ; ಎಂದು ಆವರು ಹೇಳುವರು. ಕುಮುದಿನಿಯು ಶೋಕರಸಪ್ರಧಾನ ಕಾದಂಬರಿಯಾದ್ದರಿಂದ ಕೋಮಲಹೃದಯದ ನಮ್ಮ ಮಿತ್ರರ ಕಣ್ಣೀರುಗಳು ಆಗಾಗ್ಗೆ ಉದುರಿರಬಹುದು. ಆ ಕಾದಂಬರಿಯೊಳಗಿನ "ಅಂತಕನ ಕೋಲಾಹಲ" ಎಂಬ ಪ್ರಕರ್ಣವನ್ನು ಓದುವಾಗ ಒಬ್ಬರು ಮುರ್ಛಿತರಾದರಂತೆ! ಸತ್ವಪೂರ್ಣ ಶೌರ್ಯರಸಪ್ರಧಾನ "ಸತ್ವಸಾರ" ಕಾದಂಬರಿಯು ವಾಚನದಿಂದ ಸತ್ವಸ್ಥರ ಹೃದಯಸ್ಫುರಣವಾಗಬಹುದಲ್ಲದೆ, ಕಣ್ಣೀರುಗಳು ಹ್ಯಾಗೆ ಉದರಬೇಕು? ಹ್ಯಾಗೇ ಇರಲಿ, ನಮ್ಮ ಸನ್ಮಾನನೀಯ ಮಿತ್ರರ ಚಿಕಿತ್ಸಕ ಬುದ್ಧಿಯ ಟೀಕೆಯನ್ನು ಸಮಾಧಾನ ಮಾಡುವಾಗ ನಮಗಾದ ಸಮಾಧಾನಕ್ಕಾಗಿ ನಮ್ಮ ಮಿತ್ರರನ್ನು ಮನಃಪೂರ್ವಕವಾಗಿ ಅಭಿನಂದಿಸುವೆವು. ನಮ್ಮ ಮಿತ್ರರಂತೆ ಬೇರೆ ಸನ್ಮಾನನೀಯರಾದ ಗ್ರ್ಯಾಜುಯೇಟರೂ, ವಾಚಕರೂ ಚಂದ್ರಿಕೆಯ ಅತ್ಯಂತ ಮನೋಹರವಾದ

ಎಲ್ಲ ಕಾದಂಬರಿಗಳನ್ನೂ, ಅದೇಕೆ ಯಾವತ್ತೂ ಲೇಖಗಳನ್ನೂ ಮನಃ ಪೂರ್ವಕವಾಗಿ ಓದಿ ಟೀಕೆ ಮಾಡಿದರೆ, ಅದನ್ನೇ ಚಂದ್ರಿಕೆಯ ನಿಜವಾದ ಉತ್ಕರ್ಷವೆಂದು ತಿಳಿಯುವೆವು!! ಬಡವರ ಮೇಲೆ ಇಷ್ಟು ಅನುಗ್ರಹ ವಾಗಬಹುದೇನು?

೧) ಮ। ರಾ। ರಾ। M. ಗಣೇಶರಾವ ಕ್ಲಾರ್ಕ ಜೋಗಿಮಠ, ವಿಠ್ಠಲ, ದ. ಕಾನಡಾ (ಇವರ ಪತ್ರದ ಸಾರಾಂಶ): ಕುಮುದಿನೀ ಕಾದಂಬರಿಯು ಬಹು ಸುರಸವಾಗಿದೆ. ಅದನ್ನು ನಾವು ನಾಲ್ಕು ಜನ ಮಿತ್ರರು ಕೂಡಿ ಓದುತ್ತಿದ್ದೆವು. ಅದರೊಳಗಿನ "ಅಂತಕನ ಕೋಲಾಹಲ" ವೆಂಬ ೧೨ನೆಯ ಪ್ರಕರಣದ ಹಿಂದಿನ ಹನ್ನೊಂದು ಪ್ರಕರಣಗಳನ್ನು ಓದಿ ನಮ್ಮೆಲ್ಲರಿಗೆ ಪರಮಾನಂದವಾಯಿತು. ೧೨ನೆಯ ಪ್ರಕರಣವನ್ನು ಓದುವಾಗ ಅದರೊಳಗಿನ ಚಿನ್ನ ಓಬಲನ ಕ್ರೂರತನವನ್ನೂ ದುಃಖದ ಪ್ರಸಂಗವನ್ನೂ ಓದಿ ನಮ್ಮೊಳಗಿನ ಮಿದುಳಿನ ಅಶಕ್ತತೆಯುಳ್ಳ ಒಬ್ಬ ಮಿತ್ರರು ಮೂರ್ಛಿತರಾಗಿದ್ದರು! ಯೋಗ್ಯ ಉಪಚಾರದಿಂದ ಅವರು ಎಚ್ಚತ್ತಮೇಲೆ ಅವರು ಕಾದಂಬರಿಯನ್ನು ಮುಟ್ಟಡಾದರು! ಚಿನ್ನ ಓಬಲನೆಂಬ ವ್ಯಕ್ತಿಯ ಕ್ರೂರತನವು ನಿಜವಾಗಿ ಒದಗಿದ್ದೇ ಆಗಿದ್ದರೆ, ಆ ನೀಚನು ಈಗಲೂ ರೌರವ ನರಕದಲ್ಲಿರಬಹುದು; ಆದರೆ ಚಂದ್ರಿಕೆಯು ಆ ಹೃದಯದ್ರಾವಕ ಪ್ರಸಂಗವನ್ನು ಕಲ್ಪಿಸಿದ್ದರೆ, ಆಕೆಯು ಪ್ರಾಯಶ್ಚಿತ್ತ ವನ್ನು ತಕ್ಕೊಳ್ಳಬೇಕಾದೀತು, ಇತ್ಯಾದಿ—

ಇದಕ್ಕೆ ಬರೆದ ಗಳಗನಾಥರ ಉತ್ತರ—

ಮಹನೀಯರೇ, ಉತ್ಸಾಹಜನಕವಾದ ತಮ್ಮ ಪತ್ರವು ಲೇಖನ ಕಾರ್ಯದಲ್ಲಿ ನಮ್ಮನ್ನು ಪ್ರೋತ್ಸಾಹಗೊಳಿಸಿತು. ಕಾದಂಬರಿ ಓದಿ ಒಬ್ಬರು ಮೂರ್ಛಿತರಾದರೆಂಬದನ್ನು ಓದಿ ಅದರ ಜನಕರಿಗೆ ಸಂತೋಷ ವಾದದ್ದು ಆಶ್ಚರ್ಯವಲ್ಲ. ಮೂರ್ಛಾಗತರ ಹೃದಯದ ಕೋಮಲತೆಗಾಗಿ ಅವರನ್ನು ಧನ್ಯರೆಂದು ತಿಳಿಯಬೇಕಾಗುವದು. ಕುಮುದಿನಿಯು

ಐತಿಹಾಸಿಕ ಕಾದಂಬರಿಯು, ಕಾಲ್ಪನಿಕವಲ್ಲ. ನಮ್ಮ ಮತದಂತೆ ಚಿನ್ನ ಓಬಲನು ಈಗಲೂ ರೌರವ ನರಕದಲ್ಲಿರಬಹುದು! ಓಬಲನ ಕಟುಕತನ ಹೃದಯಭೇದಕವಾಗಿ ಬರೆದದ್ದಕ್ಕಾಗಿ ಚಂದ್ರಿಕೆಯು ಪ್ರಾಯಶ್ಚಿತ್ತವನ್ನು ತಕ್ಕೊಂಡರೆ ತಕ್ಕೊಳ್ಳಬಹುದು! ಆದಕ್ಕಾಗಿಯೇ ಆ ಹುಡುಗೆಯು ಈ ವರ್ಷ "ಧರ್ಮರಹಸ್ಯ"ವೆಂಬ ಐತಿಹಾಸಿಕ ಸಾತ್ವಿಕ ಕಾದಂಬರಿಯನ್ನು ಕೊಡುತ್ತಿರುವಳೋ ಏನೋ! ಅದಿರಲಿ, ಚಿನ್ನಓಬಲನ ಕ್ರೂರಕೃತ್ಯಕ್ಕೆ "ವಿಜಯ ನಗರದ ಕಳೆದುಹೋದ ಸಾಮ್ರಾಜ್ಯ"ವೆಂಬ ಇತಿಹಾಸವು ಸಾಕ್ಷಿಯಾಗಿದೆ.

**ಗಳಗನಾಥ**

**ಈ ಪತ್ರಗಳನ್ನು ಒದಗಿಸಿಕೊಟ್ಟುದಕ್ಕಾಗಿ ಅಗಡಿಯ ಆನಂದವನದ ಶ್ರೀ ಶಾಂತಾರಾಮ ಜೋಶಿ ಅವರಿಗೆ ನಮ್ಮ ಕೃತಜ್ಞತೆಯ ವಂದನೆಗಳು.**

## ಪರಿಶಿಷ್ಟ ೪

## * ಗಳಗನಾಥರ ಕೃತಿಗಳು.

### ಪ್ರಕಟವಾದುವು :

೧ ಪ್ರಬುದ್ಧ ಪದ್ಮನಯನೆ
೨ ನಿಬಂಧ ಶಿಕ್ಷಣ
೩ ಈಶ್ವರೀಸೂತ್ರ
೪ ಮರಾಟರ ಅಭ್ಯುದಯ
೫ ಛತ್ರಪತಿ
೬ ಕಮಲಕುಮಾರಿ
೭ ಶಿವಪ್ರಭುವಿನ ಪುಣ್ಯ
೮ ಕುರುಕ್ಷೇತ್ರ
೯ ಗೃಹ ಕಲಹ
೧೦ ರಾಣೀ ಪ್ಯಾಶಾಲಿನಿ
೧೧ ಧಾರ್ಮಿಕತೇಜ
೧೨ ಕ್ಷಾತ್ರ ತೇಜ
೧೩ ಧರ್ಮರಹಸ್ಯ
೧೪ ತಿಲೋತ್ತಮೆ
೧೫ ರಾಣಾ ರಾಜಸಿಂಹ
೧೬ ವೈಭವ
೧೭ ಸತ್ವಸಾರ
೧೮ ಕುಮುದಿನಿ
೧೯ ಸಂಸಾರ ಸುಖ
೨೦ ಲಕ್ಷ್ಮೀಬಾಯಿ
೨೧ ಸತಿ ಸಾಹಸ
೨೨ ಅದ್ಭುತ ಶೌರ್ಯ
೨೩ ಶುಕ ಸಂಜೀವಿನಿ
೨೪ ಭಾಗವತಾಮೃತ
೨೫ ಶೈವ ಸುಧಾರ್ಣವ
೨೬ ತುಲಸೀ ರಾಮಾಯಣ
೨೭ ಕನ್ನಡಿಗರ ಕರ್ಮಕಥೆ
೨೮ ಆನಂದ ರಾಮಾಯಣ
೨೯ ವೆಂಕಟೇಶ ಮಹಾತ್ಮ್ಯ
೩೦ ದುರ್ಗದ ಬಿಚ್ಚುಗತ್ತಿ ಭಾಗ ೧
೩೧ ಚಿದಂಬರ ಚರಿತ್ರ
೩೨ ಉತ್ತರರಾಮ ಚರಿತ
೩೩ ಗಿರಿಜಾಕಲ್ಯಾಣ
೩೪ ಸತ್ವಾದರ್ಶ
೩೫ ಭಕ್ತಿವಿಜಯ
೩೬ ಶ್ರೀಸುರೇಶ್ವರಾಚಾರ್ಯ ಚರಿತ್ರೆ
೩೭ ದತ್ತಕಥಾಮೃತಸಾರ
೩೮ ಸಾಧುಸದಾಶಿವ ಲೀಲೆ
೩೯ ಫಕೀರೇಶ್ವರ ಪುರಾಣ
೪೦ ಕುಟುಂಬ

---

* ಕಾಲಾನುಕ್ರಮವಾಗಿ ಕೊಡಲು ಸಾಧ್ಯವಾಗಲಿಲ್ಲ. ಈಗ ಕೊಟ್ಟ ಸಂಗತಿ ಅವರ ಅಳಿಯಂದಿರಾದ ಶ್ರೀ ಶಂಕರರಾವ ಜೋಶಿ, ಅವರ ಕೃಪೆಯಿಂದ.

೪೧ ದಾಂಪತ್ಯ
೪೨ ನಿರ್ಯಾಣ ಮಹೋತ್ಸವ
೪೩ ಹಿಂದೂ ಸಮಾಜ ವ್ಯವಸ್ಥೆ
೪೪ ವರ್ಣಾಶ್ರಮ ಧರ್ಮ
೪೫ ಪುನರ್ಜನ್ಮ
೪೬ ಮಾಧವ ಕರುಣಾವಿಲಾಸ
೪೭ ಗೀತಾವಲೋಕನೆ
೪೮ ಶ್ರೇಷ್ಠ-ಸದುಪದೇಶ
೪೯ ಬ್ರಾಹ್ಮಣ ಪ್ರಾಪ್ತಸಾಧನ
೫೦ ಕಣ್ವಸಂಹಿತೆ
೫೧ ಸುಂದರಲೇಖ ಸಮುಚ್ಚಯ
೫೨ ಭಗವತಿ ಕಾತ್ಯಾಯಿನಿ
೫೩ ಕಲಿಕುಠಾರ
೫೪ ನಲಚರಿತ್ರೆ
೫೫ ರಹಸ್ಯಗಳು
೫೬ ಮಹಾಭಾರತ ಆದಿಪರ್ವ
೫೭ ಮಹಾಭಾರತ ಸಭಾಪರ್ವ
೫೮ ಸ್ವರಾಜ್ಯ ಸುಗಂಧ
೫೯ ಸದ್ಗುರು ಪ್ರಭಾವ
೬೦ ಗುರುಪ್ರಸಾದ

## ಪ್ರಕಟವಾಗಬೇಕಾದುವು

೧ ಮಹಾಭಾರತ ವನಪರ್ವ
೨ ,, ವಿರಾಟಪರ್ವ
೩ ,, ಉದ್ಯೋಗಪರ್ವ
೪ ,, ಭೀಷ್ಮಪರ್ವ
೫ ,, ದ್ರೋಣಪರ್ವ
೬ ,, ಕರ್ಣಪರ್ವ
೭ ,, ಶಲ್ಯಪರ್ವ
೮ ,, ಸಪ್ತಿಕಪರ್ವ
೯ ,, ಸ್ತ್ರೀಪರ್ವ
೧೦ ,, ಶಾಂತಿಪರ್ವ
೧೧ ,, ಅನುಶಾಸನಪರ್ವ
೧೨ ,, ಅಶ್ವಮೇಧಪರ್ವ
೧೩ ,, ಆಶ್ರಮವಾಸಿಪರ್ವ
೧೪ ,, ಮೌಸಾಲಪರ್ವ
೧೫ ,, ಮಹಾಪ್ರಸ್ಥಾನಿಕ ಪರ್ವ
೧೬ ,, ಸ್ವರ್ಗಾರೋಹಣ ಪರ್ವ
೧೭ ಕಲಿಕುಠಾರ . ಭಾಗ ೨
೧೮ ದುರ್ಗದ ಬಿಚ್ಚುಗತ್ತಿ : ಭಾಗ ೨
೧೯ ನಿಬಂಧ ಲೇಖನ
೨೦ ಅಧ್ಯಾತ್ಮ ರಾಮಾಯಣ